ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 29th March, 1982, Chaitra 8, 1904 S.E

The House met in the Assembly Chamber, Vidhana Soudha, at Nine of the Clock.

MR. SPEAKER (SRI K.H. RANGANATH) in the Chair

General Discussion on the Budget for the year 1982-83

† ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).—ಸನ್ಮಾನ್ಯ ಸಭಾಧ್ಯಕ್ಷರೆ, ಈದಿನ ಶ್ರೀಮಾನ್ ವೀರಪ್ಪಮೊಯ್ಲಿಯವರು ಸದನದ ಮುಂದೆ ಮಂಡಿಸಿರತಕ್ಕ ಬಡ್ಜೆಟ್‌ನ ಮೇಲೆ ಒಂದೆರಡು ಮಾತುಗಳನ್ನು ಹೇಳಬೇಕೆಂದು ನಾನು ಇಚ್ಛೆಪಡುತ್ತೇನೆ. ಈಗಾಗಲೇ ಸುಮಾರು ಒಂದು ವಾರದಿಂದಲೂ ಕೂಡ ಹಿರಿಯ ಹಾಗೂ ಕಿರಿಯ ಸದಸ್ಯರನೇಕರು, ತುಂಬಾ ಮೇಧಾವಿಗಳೂ ಆದಂಥ ಸದಸ್ಯರು ಇದರ ಬಗ್ಗೆ ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನೂ ಕೂಡ ಈ ಆಯವ್ಯಯಪಟ್ಟಿ ಏನಿದೆ ಇದರ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕೆಂದು ಇಚ್ಛೆಸಿದ್ದೇನೆ. ಕಳೆದ ವರ್ಷದ ಆಯವ್ಯಯ ಪಟ್ಟಿಗೂ, ಈ ವರ್ಷದ ಆಯವ್ಯಯ ಪಟ್ಟಿಗೂ ಹೋಲಿಕೆ ಮಾಡಿ ನೋಡಿದರೆ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಶ್ರೀಮಾನ್ ವೀರಪ್ಪ ಮೊಯ್ಲಿಯವರ ಭಾಷಣದ ಒಟ್ಟು ತಾತ್ಪರ್ಯ ಏನೆಂದರೆ. ಹಳ್ಳಿಗಾಡಿನ ಜನರಿಗೆ ಯಾವುದೇ ರೀತಿಯ ಸೌಲಭ್ಯಗಳನ್ನೂ ಕೂಡ ಸರ್ಕಾರದವರು ಒದಗಿಸಿ ಕೊಟ್ಟಿಲ್ಲ. ಇತ್ತೀಚೆಗೆ ಮಾನ್ಯ ದೇವರಾಜ ಅರಸುರವರು ಹೇಳಿದಂತೆ ಈ ಆಯವ್ಯಯ ಪಟ್ಟಿ ಕೇವಲ ಗ್ಲಿಟರಿಂಗ್ ಅಂದರೆ ಹೊರನೋಟಕ್ಕೆ ಅತ್ಯಂತ ಶೋಭಾಯಮಾನವಾಗಿ ಕಾಣುತ್ತದೆ. ಆದರೆ ಇದರ ಒಳಹೊಕ್ಕು ನೋಡಿದರೆ ಇದರಲ್ಲಿ ಏನೇನೂ ಸಾರಾಂಶವೇ ಇಲ್ಲ. ಎಂದು ನಾನು ಹೇಳಬೇಕಾಗಿದೆ.

ಸ್ವಾಮಿ. ಇವರು ಸಾಗರದೀಪ, ಮುನ್ನಡೆ. ಗೃಹ ಕಲ್ಯಾಣ ಮುಂತಾದ ೪–೫ ಯೋಜನೆಗಳನ್ನು ತಯಾರು ಮಾಡಿದ್ದಾರೆ. ಈ ಸಾಗಾರದೀಪ ಯೋಜನೆಗೆ ಈ ಸಲದ ಬಡ್ಜೆಟ್‌ನಲ್ಲಿ ೨೩೬ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರ ಜೊತೆಗೆ ಕಡಲು ಮೀನುಗಾರಿಕೆ ಅಭಿವೃದ್ಧಿಗಾಗಿ ೩೩.೨ ಕೋಟಿ ರೂಪಾಯಿಗಳ ವೆಚ್ಚದ ಒಂದು ಯೋಜನೆಯನ್ನು ತಯಾರಿಸಿ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಇವರು ಕಡಲ ಮೀನುಗಾರಿಕೆಗೆ ಪ್ರೋತ್ಸಾಹ ಕೊಟ್ಟು ಒಳನಾಡಿನ ಮೀನುಗಾರಿಕೆಯನ್ನು ಕೈ ಬಿಟ್ಟಿದ್ದಾರೆ. ಈ ಒಳನಾಡಿನ ಮೀನುಗಾರಿಕೆಯನ್ನು ಇವರು ಮರೆತಿದ್ದಾರೆಂದು ಕಾಣುತ್ತದೆ. ನಾನು ಎಸ್ಟಿಮೇಟ್ ಕಮಿಟಿ ಸದಸ್ಯನಾಗಿದ್ದೇನೆ. ಆ ಕಮಿಟಿಯವರು ಈ ಮೀನುಗಾರಿಕೆ ಇಲಾಖೆಯನ್ನು ಪರಿಶೀಲನೆಗೆ ತೆಗೆದುಕೊಂಡು ಸ್ಥಳದ ಪರಿಶೀಲನೆ ಮಾಡಿದಾಗಿ ಅಲ್ಲಿನ ರೀಸರ್ಚ್ ಇಲಾಖೆಯಲ್ಲಿ ಯಾವ ಒಂದು ಅಭಿವೃದ್ಧಿ ಕೆಲಸವೂ ನಡೆದಿರಲಿಲ್ಲ. ಭದ್ರಾದಲ್ಲಿ ಇದರ ಅಭಿವೃದ್ಧಿಗೆಂದು ೧೨೦ ರಿಂದ ೧೨೬ ಎಕರೆ ಜಮೀನನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಬೇಕಾದಷ್ಟು ಅಧಿಕಾರಿಗಳು ಮತ್ತು ನೌಕರರು, ಇದ್ದಾರೆ. ಆದರೆ ಆಗಿರುವಂತಹ ಕೆಲಸವನ್ನು ನೋಡಿದಾಗ, ಅಲ್ಲಿ ಎಸ್ಟಾಬ್ಲಿಷ್‌ಮೆಂಟ್‌ಗೆ ಆಗಿರುವಷ್ಟು ಖರ್ಚೂ ಕೂಡ ಇದರ ಅಭಿವೃದ್ಧಿಗೆ ಅಗಿಲ್ಲವೆಂದು ಹೇಳಬಹುದು. ನಾವು ಭದ್ರಾಗೆ ಹೋದಾಗ ೨೫–೩೦ ಜನರು ಅಲ್ಲಿದ್ದ ಕೊಳಕ್ಕೆ ಬಲೆಯನ್ನು ಹಾಕಿ ಎಳೆದುಕೊಂಡು ಬಂದಾಗ ಸುಮಾರು ೨೦೦-೩೦೦ ದಪ್ಪ ಮೀನುಗಳು ಮಾತ್ರ ಸಿಕ್ಕಿದವು. ಅದೇ ರೀತಿ ಇನ್ನೊಂದು ಕೊಳದಲ್ಲಿ ಬಲೆ ಹಾಕಿ ಎಳೆದಾಗ ಸಾವಿರ ದಿಂದ ಸಾವಿರದ ಐನೂರರವರೆಗೆ ಮಾತ್ರ ಫಿಂಗರ್–ಲಿಂಗ್ಸ್ ಎಂಬ ಮರಿಗಳು ಸಿಕ್ಕಿದವು.

---

† Indicates that remarks or speeches have not been revised by the member concerned.

ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿರುವಂತಹ ಇಂತಹ ದೊಡ್ಡ ಪ್ರಾಜೆಕ್ಟ್‌ನಲ್ಲಿಯೇ ಸರಿಯಾಗಿ ಅಭಿವ ದಿ ಯಾಗದಿರುವುದನ್ನು ನೋಡಿದರೆ, ನಾವು ಇದರ ಬಗ್ಗೆ ಏನು ಹೇಳಬೇಕೆಂಬುದೇ ಅರ್ಥವಾಗು ವುದಿಲ್ಲ. ಹೆಸರಘಟ್ಟದಲ್ಲಿಯೂ ಸಹ ಇದಕ್ಕಾಗಿ ಕಟ್ಟಿರುವ ಕೊಳದಲ್ಲಿ ನೀರು ಸರಿಯಾಗಿ ನಿಲ್ಲದೆ ಸೋರಿ ಹೋಗುತ್ತಿರುವ ಕಾರಣದಿಂದ ಅಲ್ಲಿ ಮೀನುಗಳನ್ನು ಹೆಚ್ಚು ಬೆಳೆಸಲು ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ನಾವು ವಿಚಾರಿಸಿದಾಗ ಈ ಇಲಾಖೆಯಲ್ಲಿ ಎರಡು ಭಾಗಗಳಾಗಿದ್ದು. ಒಂದು ಭಾಗದವರಿಗೂ ಮತ್ತು ಇನ್ನೊಂದು ಭಾಗದವರಿಗೂ ಜಗಳ ಬಂದು ಕೆಲಸ ಸರಿಯಾಗಿ ಆಗುತ್ತಿಲ್ಲವೆಂದು ತಿಳಿದುಬಂತು. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚು ನಿಗಾವಹಿಸಿ ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ವಾಗುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹಣವೆಲ್ಲಾ ಪೋಲಾಗುತ್ತದೆಂದು ಹೇಳುತ್ತೇನೆ.

ಇನ್ನು ಭೂ ಸುಧಾರಣೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ರಾಜ್ಯದಲ್ಲಿರುವ ಭೂನ್ಯಾಯ ಮಂಡಲಿಗಳಿಗೆ ಸುಮಾರು ೫ ಲಕ್ಷ ಚಿಲ್ಲರೆ ಅರ್ಜಿಗಳು ಬಂದಿದ್ದವು. ಇವುಗಳ ಪೈಕಿ ಶೇಕಡಾ ೯೯ ರಷ್ಟು ಅರ್ಜಿಗಳನ್ನು ಇತ್ಯರ್ಥಗೊಳಿಸಿ ಸಂಬಂಧಪಟ್ಟ ಗೇಣಿದಾರರಿಗೆ ಪಟ್ಟಿ ಕೊಟ್ಟಿದ್ದೇವೆಂದು ಇಲ್ಲಿ ಹೇಳಿದ್ದಾರೆ. ಇದರಲ್ಲಿ ನೇಗಿಲಭಾಗ್ಯ ಎಂಬ ಒಂದು ಹೊಸ ಯೋಜನೆಯನ್ನು ತಂದಿದ್ದಾರೆ. ಆದರೆ ಈ ಯೋಜನೆಗೆ ಹಣ ಕೊಟ್ಟಿಲ್ಲ. ಆದ್ದರಿಂದ ಈ ಯೋಜನೆ ಏನಾಗುತ್ತದೋ ಗೊತ್ತಿಲ್ಲ. ಸರ್ಕಾರ ದವರು ವಿಧವೆಯರಿಗೆ ಸೇರಿದ, ಅಂಗವಿಕಲರಿಗೆ ಸೇರಿದ ಹಾಗೂ ಅಪ್ರಾಪ್ತ ವಯಸ್ಕರಿಗೆ ಸೇರಿದ ಜಮೀನು ಗಳನ್ನು ಕಿತ್ತು ಗೇಣಿದಾರರಿಗೆ ಕೊಟ್ಟರು. ಆದರೆ ಜಮೀನು ಕಳೆದುಕೊಂಡವರ ಬಗ್ಗೆ ಇವರು ಯೋಚನೆ ಯನ್ನೇ ಮಾಡಲಿಲ್ಲ. ಇವರು ಗೇಣಿದಾರರ ಅಭಿವೃದ್ಧಿಗೆಂದು ಇಲ್ಲಿ ಒಂದು ಯೋಜನೆ ತಂದಿದ್ದಾರೆಯೇ ಹೊರತು. ಜಮೀನು ಕಳೆದುಕೊಂಡವರಿಗೆ ಏನೂ ಮಾಡಲಿಲ್ಲ. ನಾನು ಸಹ ಭೂನ್ಯಾಯ ಮಂಡಲಿ ಸದಸ್ಯನಾಗಿದ್ದೇನೆ. ಈ ಕಾರಣದಿಂದ ಒಂದು ಕರುಣಾಜನಕವಾದಂಥ ಉದಾಹರಣೆ ಕೊಡುತ್ತೇನೆ. ನನ್ನ ಕ್ಷೇತ್ರಕ್ಕೆ ಸೇರಿದ ಶ್ರೀವೆಂಕಟರಾಮಯ್ಯ ಎಂಬ ವ್ಯಕ್ತಿಗೆ ೮–೧೦ ಎಕರೆ ಜಮೀನು ಇತ್ತು ಆದರೆ ಆತ ಮೂರನೇ ದರ್ಜೆ ಗುಮಾಸ್ತನಾದ ಕಾರಣ ತನ್ನ ಜಮೀನುಗಳನ್ನು ಕಳೆದುಕೊಳ್ಳಬೇಕಾಯಿತು. ಆತನಿಗೆ ೫ ಜನ ಹೆಣ್ಣು ಮಕ್ಕಳಿದ್ದಾರೆ. ಯಾರಿಗೂ ಮದುವೆಯಾಗಿಲ್ಲ. ಭೂನ್ಯಾಯ ಮಂಡಲಿ ಯಲ್ಲಿ ಈತನ ಕೇಸ್ ವಿಚಾರಣೆಗೆ ಬಂದಾಗ ಎಲ್ಲ ಹೆಣ್ಣು ಮಕ್ಕಳನ್ನೂ ಕರೆದುಕೊಂಡು ಬಂದು ತನಗೆ ಏನಾದರೂ ಸಹಾಯ ಮಾಡಬೇಕೆಂದು ತಾನು ಹುಟ್ಟಿದ್ದ ದೋತ್ರವನ್ನೇ ಬಿಚ್ಚಿ ಅಲ್ಲಿ ಹಾಸಿದ. ಆದರೆ ಈತನ ಜಮೀನನ್ನು ಗೇಣಿಗೆ ಮಾಡುತ್ತಿದ್ದವರು ಏನೂ ಮಾತನಾಡಲಿಲ್ಲ. ಗೇಣಿದಾರರ ಪರವಾಗಿ ಕೇಸ್ ತೀರ್ಮಾನವಾಯಿತು. ಈ ರೀತಿ ಜಮೀನು ಕಳೆದುಕೊಂಡ ನಿರ್ಗತಿಕರಿಗೆ ಹಾಗೂ ಹೊಟ್ಟೆಗೆ ಇಲ್ಲದ ಜನರಿಗೆ ಈ ಸರ್ಕಾರದವರು ಏನು ಮಾಡಿದ್ದಾರೆ ? ಇವರ ಬಗ್ಗೆ ಸರ್ಕಾರ ಏನೂ ಯೋಚನೆ ಮಾಡಲಿಲ್ಲವೇ ಎಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ ?

ಇನ್ನು ನಾನು ಹಳ್ಳಿಯಿಂದ ಬಂದಿರುವ ಕಾರಣದಿಂದ ಅಲ್ಲಿಯ ಜನರ ಕಷ್ಟಕಾರ್ಪಣ್ಯಗಳೇನೆಂಬು ದನ್ನು ಸ್ವಲ್ಪಮಟ್ಟಿಗೆ ನಾನು ತಿಳಿದುಕೊಂಡಿದ್ದೇನೆ. ಅಷ್ಟೇ ಅಲ್ಲ, ಆ ಕಷ್ಟಗಳನ್ನು ನಾನೂ ಸಹ ಅನುಭವಿಸಿದ್ದೇನೆ. ಹಳ್ಳಿಗಳ ಅಭಿವೃದ್ಧಿ ಬಗ್ಗೆ, ಹಳ್ಳಿಗಳ ಉದ್ಧಾರದ ಬಗ್ಗೆ ಈ ಬಡ್ಜೆಟ್‌ನಲ್ಲಿ ಏನೂ ಹೇಳಿಲ್ಲ. ಹಳ್ಳಿಗಳು ಉದ್ಧಾರವಾಗಬೇಕಾದರೆ, ಒಳ್ಳೆಯ ರಸ್ತೆಗಳು, ದೀಪಗಳು ಹಾಗೂ ಸ್ಕೂಲು ಗಳು ಮೊದಲ್ಗೊಂಡು ಅನೇಕ ಸೌಲಭ್ಯಗಳು ಇರಬೇಕಾಗುತ್ತದೆ. ಆದರೆ ಈ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಬಡ್ಜೆಟ್‌ನಲ್ಲಿ ಏನನ್ನೂ ಸಹ ಹೇಳಿಲ್ಲ :

ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಬಡ್ಜೆಟ್‌ನ ಭಾಷಣದಲ್ಲಿ ರಸ್ತೆ ಸಂಪರ್ಕ ವಿಷಯ ಹೇಳಿರುವು ದನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವರು ಈ ರೀತಿ ಹೇಳಿದ್ದಾರೆ. ಕರ್ನಾಟಕದಲ್ಲಿರುವ ೨೬,೮೨೬ ಹಳ್ಳಿಗಳ ಪೈಕಿ ೭,೪೪೮ ಹಳ್ಳಿಗಳಿಗೆ ಸರ್ವಋತು ರಸ್ತೆ ಮತ್ತು ೫,೯೩೨ ಹಳ್ಳಿಗಳಿಗೆ ಅನುಕೂಲ ಹವಾ ಮಾನ ರಸ್ತೆ ಸಂಪರ್ಕ ಇದೆ. ಇದಲ್ಲದೆ ೨,೦೪೦ ಹಳ್ಳಿಗಳಿಗೆ ಎತ್ತಿನಗಾಡಿ ರಸ್ತೆ ಹಾಗೂ ಉಳಿದ ಹಳ್ಳಿ ಗಳಿಗೆ ಕಚ್ಚಾ ರಸ್ತೆಗಳೂ ಇವೆ. ೬ ನೇ ಯೋಜನಾ ಅವಧಿಯಲ್ಲಿ ಈಗ ಎತ್ತಿನ ಗಾಡಿ ರಸ್ತೆಗಳಿರುವ ಕನಿಷ್ಠ ಶೇಕಡಾ ೫೦ ರಷ್ಟು ಹಳ್ಳಿಗಳಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವ ಗುರುತಿದೆ. ಆ ಪೈಕಿ ೨೨೩ ಹಳ್ಳಿಗಳಿಗೆ ಕಚ್ಚಾ ರಸ್ತೆಗಳನ್ನು ಒದಗಿಸುವ ಉದ್ದೇಶವಿದೆ. ಅನ್ನುವ ಮಾತನ್ನು ಹೇಳಿದ್ದೀರಿ. ಅಲ್ಲಿಗೆ ೨೬,೮೨೬ ಹಳ್ಳಿಗಳ ಪೈಕಿ ೭೪೪೮ ಹಳ್ಳಿಗಳಿಗೆ ಸರ್ವಋತು ರಸ್ತೆ ಮತ್ತು ೫,೯೩೨ ಹಳ್ಳಿಗಳಿಗೆ ಅನುಕೂಲ ಹವಮಾನ ರಸ್ತೆ ಸಂಪರ್ಕ ಇರುವುದನ್ನು ಬಿಟ್ಟರೆ ಇನ್ನು ಉಳಿದ ೧೩ಸಾವಿರ ಹಳ್ಳಿಗಳಿಗೆ ಈಪ್ರೊತ್ತಿನವರೆಗೂ ಕೂಡ ಯಾವ ಕಾಲುದಾರಿಯೂ ಇಲ್ಲ, ಯಾವ ಎತ್ತಿನ ಗಾಡಿ ರಸ್ತೆಯೂ ಇಲ್ಲ, ಯಾವ ಬಸ್ಸುಗಳ

ದಾರಿಯೂ ಇಲ್ಲ. ಸ್ವಾತಂತ್ರ್ಯ ಬಂದು ನಮಗೆ ಈವೊತ್ತಿಗೆ ೩೪ ವರ್ಷವಾದರೂ ಕೂಡ ಈ ೧೩ ಸಾವಿರ ಹಳ್ಳಿಗಳಿಗೆ ಯಾವ ವಿಧವಾದಂಥಾ ರಸ್ತೆಯೂ ಇಲ್ಲದೆ ಅಲ್ಲಿಗೆ ಸರಿಯಾಗಿ ನಡೆದುಕೊಂಡು ಹೋಗುವುದಕ್ಕೂ ಸಹ ಸಾಧ್ಯವಿಲ್ಲವಾಗಿದೆ. ಅಂತಹ ಹಳ್ಳಿಗಳಲ್ಲಿ ಇನ್ನು ಎಷ್ಟು ವರ್ಷಗಳಲ್ಲಿ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಿದೆ ಅನ್ನುವುದನ್ನು ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಬೇಕೆಂದು ತಮ್ಮ ಮುಖಾಂತರ ಪ್ರಾರ್ಥಿಸಿಕೊಳ್ಳುತ್ತೇನೆ. ಮಾನ್ಯ ದೇವರಾಜ್ ಅರಸ್ ರವರು ಮಾತನಾಡುತ್ತಾ ಹೇಳಿದರು ಸಂಪೂರ್ಣವಾಗಿ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿ ಇವುಗಳನ್ನು ಮರೆತಿದ್ದಾರೆ ಎಂದು. ಈ ತಾಲ್ಲೂಕ್ ಬೋರ್ಡ್‌ಗಳಿಗೂ ಮತ್ತು ಪಂಚಾಯಿತಿಗಳಿಗೂ ಬೇಕಾದಷ್ಟು ಅಧಿಕಾರ ಕೊಡುತ್ತೇವೆ, ಬೇಕಾದಷ್ಟು ಹಣ ಕೊಡುತ್ತೇವೆ ಅನ್ನುವ ಒಂದು ಹೇಳಿಕೆಯನ್ನು ಸರ್ಕಾರ ಈ ಮೊದಲು ಏನು ಹೇಳಿಕೆ ಕೊಟ್ಟಿತ್ತು ಅದರ ಬಗ್ಗೆ ನೋಡಿದರೆ ಈವೊತ್ತಿನ ದಿವಸ ಅದನ್ನೆಲ್ಲಾ ಬದಿಗೊತ್ತಿ ಅವುಗಳನ್ನೆಲ್ಲಾ ಮೂಲೆಗೊತ್ತಿದ್ದಾರೆ. ನಾನು ಮೊದಲು ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದಾಗ ಒಂದು ಊರಿನಿಂದ ಒಂದು ಊರಿಗೆ ಹೋಗುವುವಕ್ಕೆ ಸುಮಾರು ೫ ಕಿಲೋಮೀಟರ್ ಒಳಗೆ ಇರತಕ್ಕಂಥಾ ಹಳ್ಳಿಗಳಿಗೆ ಫಾರ್ಮೇಷನ್, ಮೆಟಲಿಂಗ್ ಕೆಲಸವನ್ನು ತಾಲ್ಲೂಕ್ ಬೋರ್ಡ್ ಮತಿಯಿಂದ ಮಾಡಿಸುತ್ತಾ ಇದ್ದೆ. ಈಗ ಸರ್ಕಾರದವರು ಅವರಿಗೆ ಯಾವ ವಿಧವಾದ ಹಣವನ್ನೂ ಕೊಡುತ್ತಾ ಇಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರದ ಗಮನಕ್ಕೆ ತರುವುದೇನೆಂದರೆ ಈ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿಗಳ ಬಗ್ಗೆ ಗಮನಹರಿಸಿ ಅವುಗಳ ಮೇಲೆ ಒತ್ತಡ ತಂದು ಆ ಹಳ್ಳಿಗಳಿಗೆ ರಸ್ತೆ ಸಂಪರ್ಕವನ್ನು ಒದಗಿಸಿಕೊಟ್ಟು ಆ ಹಳ್ಳಿಯ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಆ ತಾಲ್ಲೂಕು ಬೋರ್ಡ್‌ಗಳಿಗೆ ಮತ್ತು ಪಂಚಾಯಿತಿಗಳಿಗೆ ಯಾವ ಕೆಲಸವೂ ಇಲ್ಲ, ಅದಕ್ಕೆ ಸೇರಿದಂಥಾ ಹಳ್ಳಿಗಳ ಜನರ ಕಷ್ಟವನ್ನು ಕೇಳುವವರು ಇಲ್ಲದೆ ಅಲ್ಲಿಯ ಕೆಲಸಗಳು ಬಿದ್ದುಹೋಗಿವೆ, ಆ ಜನರು ಬಹಳ ಕಷ್ಟಪಡುತ್ತಿದ್ದಾರೆ. ಆದುದರಿಂದ ಸರ್ಕಾರದವರು ಈಗಲಾದರೂ ಆ ಹಳ್ಳಿಗಳ ರಸ್ತೆಗಳ ಬಗ್ಗೆ ಗಮನಹರಿಸಿ ಆದಷ್ಟು ಬೇಗ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಸಾಲಿನಲ್ಲಿ ರೈತರಿಗೆ ಸುಮಾರು ೮೫–೮೬ ಕೋಟಿ ರೂಪಾಯಿನಷ್ಟು ರಿಯಾಯಿತಿ ಕೊಟ್ಟಿದ್ದೇವೆ ಎಂದು ಘೋಷಣೆ ಮಾಡಿದರು. ಹಾಗೆ ಘೋಷಣೆ ಮಾಡಿದಂಥಾ ಕಾಲದಲ್ಲಿ ಆ ರೈತರುಗಳು ಭಾರಿ ಹಿಗ್ಗಿದರು. ನಮ್ಮ ಗುಂಡೂರಾಯರು ಮಾನ್ಯ ಮುಖ್ಯ ಮಂತ್ರಿಗಳಾಗಿ ಬಂದಮೇಲೆ ನಮಗೆ ಇಷ್ಟೊಂದು ರಿಯಾಯಿತಿ ಕೊಟ್ಟರಲ್ಲಾ ಎಂದು ಆ ರೈತರುಗಳು ಭಾರಿ ಹಿಗ್ಗಿದರು.

ಅಧ್ಯಕ್ಷರು —ಈ ಬಡ್ಜೆಟ್ ಭಾಷಣದ ಮೇಲೆ ಈಗ ಚರ್ಚೆಗೆ ಅವಕಾಶ ಕೊಟ್ಟಿರುವುದು ಒಂದು ಗಂಟೆ ಮಾತ್ರ ಈಗಾಗಲೇ ತಾವು ಇದರ ಮೇಲೆ ಮಾತನಾಡುವುದಕ್ಕೆ ೨೦ ನಿಮಿಷ ಉಪಯೋಗಿಸಿಕೊಂಡಿದ್ದೀರಿ. ಇನ್ನೂ ಒಬ್ಬಿಬ್ಬರು ಇದರ ಮೇಲೆ ಮಾತನಾಡಬೇಕಾಗಿದೆ. ಆದುದರಿಂದ ತಮಗೆ ಇನ್ನು ೫ ನಿಮಿಷಗಳ ಕಾಲಾವಕಾಶ ಕೊಡುತ್ತೇನೆ. ಜಾಗ್ರತೆಯಾಗಿ ಮುಗಿಸಿ.

ಶ್ರೀ ಕೆ.ಬಿ. ಮಲ್ಲಪ್ಪ —ಜಾಗ್ರತೆಯಾಗಿ ಮುಗಿಸುತ್ತೇನೆ ಸ್ವಾಮಿ. ನಾನು ಮೊದಲೇ ಹೇಳಿದ ಹಾಗೆ ಇಷ್ಟು ರಿಯಾಯಿತಿ ಕೊಟ್ಟರಲ್ಲಾ ಎಂದು ಪರವಾಯಿಲ್ಲಾ ಎಂದು ಹೇಳಿಕೊಂಡು ಭಾರಿ ಹಿಗ್ಗಿದರು. ಸರ್ಕಾರದವರು ಈ ರೈತರಿಗೆ ಸುಸ್ತಿಬಡ್ಡಿ ವಜಾ ಮಾಡುತ್ತೇವೆಂದು ಏನು ಹೇಳಿದರು ಅದರ ಬಗ್ಗೆ ಹಳ್ಳಿಗಳಲ್ಲಿ ಹೋಗಿ ನೋಡಿದರೆ ಅವರಿಂದ ಈವೊತ್ತಿನ ದಿವಸ ತೆಗೆದುಕೊಂಡಿರತಕ್ಕಂಥಾ ಸುಸ್ತಿ ಬಡ್ಡಿ ಸಮೇತ ಸಾಲಕ್ಕೆ ವಸೂಲ್ ಮಾಡಲು ಸುಲಿಗೆ ಮಾಡುತ್ತಿದ್ದಾರೆ. ಸರ್ಕಾರದವರು ಇಂಥಾ ಹೇಳಿಕೆ ಕೊಟ್ಟರೂ ಕೂಡ ಆ ರೈತರನ್ನು ಸುಲಿಗೆ ಮಾಡುವುದು ತಪ್ಪಿಲ್ಲಾ. ಸಣ್ಣ ರೈತರಿಗೆ ಅತಿ ಸಣ್ಣ ರೈತರಿಗೆ ಸುಸ್ತಿ ಬಡ್ಡಿ ವಜಾ ಮಾಡಿದ್ದೇವೆ ಎಂದು ಸರ್ಕಾರದವರು ಹೇಳಿದ್ದರೂ ಕೂಡ ಅಧಿಕಾರಿಗಳು ಆ ಬಗ್ಗೆ ಗಮನಹರಿಸದೆ ಸುಸ್ತಿ ಬಡ್ಡಿ ಸಮೇತ ಆ ರೈತರಿಂದ ವಸೂಲ್ಮಾಡುತ್ತಿರುವುದರಿಂದ ಈಗಲಾದರೂ ಕೂಡ ಸರ್ಕಾರದವರೂ ಅತ್ತ ಕಡೆ ಗಮನ ಹರಿಸಿ ಈ ಬಗ್ಗೆ ಒಂದು ಸರಿಯಾದ ಸರ್ಕ್ಯುಲರ್ ಅನ್ನು ಆ ಅಧಿಕಾರಿಗಳಿಗೆ ಕಳುಹಿಸಿಕೊಡಬೇಕೆಂದು ತಮ್ಮ ಮುಖಾಂತರ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಅತಿ ಮುಖ್ಯವಾದ ವಿಷಯ ಏನೆಂದರೆ ಸೊಸೈಟಿ ಸಾಲದ ಬಗ್ಗೆ ಹಳ್ಳಿಗಳಲ್ಲಿರುವ ಜನರಿಂದ ವಸೂಲ್ಮಾಡಲು ಕೆಲವು ನ್ಯೂನತೆಗಳು ಇವೆ. ಉದಾಹರಣೆ ನನ್ನ ತಾಲ್ಲೂಕಿನ ಬಗ್ಗೆ ಹೇಳುವು

ದಾದರೆ ಆ ಜನರು ತೆಗೆದುಕೊಂಡಿರತಕ್ಕಂಥಾ ಸಾಲವನ್ನು ವಸೂಲ್ಮಾಡಲು ಅರ್ಧ ಭಾಗದಷ್ಟು ಜನರಿಂದ ವಸೂಲ್ಮಾಡಲು ಡಿ.ಸಿ.ಸಿ. ಬ್ಯಾಂಕ್‌ಗೆ ಅಧಿಕಾರ ಕೊಟ್ಟಿದ್ದಾರೆ, ಇನ್ನು ಅರ್ಧ ಭಾಗದಷ್ಟು ಜನರಿಂದ ವಸೂಲ್ಮಾಡಲು ಕಮರ್ಷಿಯಲ್ ಬ್ಯಾಂಕ್‌ಗೆ ಅಧಿಕಾರ ಕೊಟ್ಟಿದ್ದಾರೆ. ಈ ಡಿ.ಸಿ.ಸಿ. ಬ್ಯಾಂಕ್‌ನವರು ತಮ್ಮ ಸೇರಿದಂಥಾವರ ಬಗ್ಗೆ ಸುಸ್ತಿ ಬಡ್ಡಿಯನ್ನು ವಜಾ ಮಾಡಿ ಅವರು ತೆಗೆದುಕೊಂಡಿರತಕ್ಕಂಥಾ ಸಾಲವನ್ನು ವಸೂಲ್ಮಾಡಿದರೆ, ಈ ಕಮರ್ಷಿಯಲ್ ಬ್ಯಾಂಕ್‌ನವರು ಸುಸ್ತಿ ಬಡ್ಡಿ ಸಮೇತ ಸಾಲವನ್ನು ವಸೂಲ್ಮಾಡುತ್ತಾರೆ. ಒಂದು ವೇಳೆ ಅವರು ಕೊಡದೇ ಹೋದರೆ ಈ ಕಮರ್ಷಿಯಲ್ ಬ್ಯಾಂಕ್‌ನವರು ಅವರ ಮೇಲೆ ದಾವಾ ಹಾಕಿ ವಸೂಲ್ಮಾಡುತ್ತಾರೆ. ಆದುದರಿಂದ ಈ ಸಂದರ್ಭದಲ್ಲಿ ಹೇಳುವುದೇನೆಂದರೆ ದಯವಿಟ್ಟು ಆ ಕಮರ್ಷಿಯಲ್ ಬ್ಯಾಂಕ್‌ನವರಿಗೆ ಸರ್ಕಾರದವರು ಸಬ್ಸಿಡಿ ಮುಖಾಂತರವಾಗಲೂ ಹಣ ಕೊಟ್ಟು ಸುಸ್ತಿ ಬಡ್ಡಿ ಬಿಟ್ಟು ಬಾಕಿ ಸಾಲವನ್ನು ತೆಗೆದುಕೊಳ್ಳುವ ಹಾಗೆ ಮಾಡಿದರೆ ಸರ್ಕಾರ ಈ ಬಗ್ಗೆ ಏನು ಘೋಷಣೆ ಮಾಡಿತು ಅದು ಆ ರೈತರಿಗೆ ಅನುಕೂಲವಾದಂತಾಗುತ್ತದೆ ಇಲ್ಲದೇ ಹೋದರೆ ಆ ರೈತರಿಗೆ ತೊಂದರೆಯಾಗುತ್ತದೆ. ಅದರಲ್ಲಿ ಅರ್ಧ ಭಾಗ ರೈತರಿಗೆ ಅನುಕೂಲವಾಗುತ್ತದೆ ಇನ್ನು ಅರ್ಧ ಭಾಗ ರೈತರಿಗೆ ತೊಂದರೆಯಾಗುತ್ತದೆ. ಈ ಬಗ್ಗೆ ಸರ್ಕಾರದವರು ಗಮನಪರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರೀ ನೌಕರರಿಗೆ ಕರ್ನಾಟಕದ ಬೆಳ್ಳಿಹಬ್ಬದ ಉಡುಗೊರೆ ಎಂದು ಎಲ್ಲ ಅಧಿಕಾರಿಗಳಿಗೂ ನೂರು ರೂಪಾಯಿ ಕೊಟ್ಟರು, ಅದಕ್ಕೆ ಸುಮಾರು ೧-೨ ಕೋಟಿ ರೂಪಾಯಿ ಖರ್ಚಾಗಿದೆ ಅಷ್ಟೇ ಅಲ್ಲದೆ ಈ ವರ್ಷ ಜೀವನ ವೆಚ್ಚದಲ್ಲಿ ಉಂಟಾದ ಏರಿಕೆಯನ್ನು ಸರಿದೂಗಿಸಲು ತನ್ನ ನೌಕರರಿಗೆ ತುಟ್ಟಿ ಭತ್ಯದ ನಾಲ್ಕು ಕಂತುಗಳನ್ನು ಮಂಜೂರು ಮಾಡಿತು. ಇದರಿಂದ ಇಡೀ ವರ್ಷಕ್ಕೆ ೩೦ ಕೋಟಿ ರೂಪಾಯಿ ಹೆಚ್ಚಿನ ವೆಚ್ಚ ತಗಲುತ್ತದೆ ಎಂದು ಹೇಳಿದ್ದಾರೆ. ಹೀಗೆ ಸುಮಾರು ಇಷ್ಟೊಂದು ದುಡ್ಡನ್ನು ಇವರಿಗೆ ಖರ್ಚು ಮಾಡುವಾಗ, ಸರ್ಕಾರದಲ್ಲಿ ೧-೨ ಪರ್ಸೆಂಟ್ ಇರತಕ್ಕಂಥಾ ಅಧಿಕಾರಿಗಳಿಗೆ ಇಷ್ಟು ದುಡ್ಡು ಖರ್ಚು ಮಾಡುವಾಗ ನಮ್ಮ ಹಳ್ಳಿ ಗಾಡಿನಲ್ಲಿ ಇರತಕ್ಕಂಥಾ ಸುಮಾರು ೮೦ ಭಾಗ ಜನಕ್ಕೆ ಅಲ್ಲೇ ವಾಸ ಮಾಡತಕ್ಕಂಥಾ ಜನರಿಗೆ ೧೦-೧೨ ಕೋಟಿ ರೂಪಾಯಿಯನ್ನು ಕೊಟ್ಟಿದ್ದರೆ ಅದರಿಂದ ಸರ್ಕಾರಕ್ಕೇನೂ ಬಡತನ ಬರುತ್ತಿರಲಿಲ್ಲಾ; ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನಪರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಮೇಜರ್ ಇರ್ರಿಗೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅದರ ಬಗ್ಗೆ ಈ ಕಾಲಾವಕಾಶ ಇಲ್ಲವಾದ್ದರಿಂದ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಸಾಮಾನ್ಯವಾಗಿ ಎಲ್ಲಾ ಮಾನ್ಯ ಸದಸ್ಯರೂ ಹೇಳಿದ್ದಾರೆ. ನಾನು ಈ ಏರಿಯಾ ಡೆವಲಪ ಮೆಂಟ್ ಅಥಾರಿಟಿ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಈ ಕಾಡಾ ಸ್ಕೀಂ ಬಗ್ಗೆ ಹೇಳುವುದಾದರೆ ಮೈಸೂರಿನಲ್ಲಿ ಈ ಒಂದು ಏರಿಯಾ ಡೆವಲಪಮೆಂಟ್ ಅಥಾರಿಟಿಗೆ ಒಬ್ಬರು ಆಡ್ಮಿನಿಸ್ಟ್ರೇಟರ್ ಅನ್ನು ಅಪಾಯಿಂಟ್ ಮಾಡಬೇಕು ಎಂದು ೧೯೮೦ ರಲ್ಲೇ ಆಗಿದೆ. ಸುಮಾರು ಎರಡು ವರ್ಷವಾಗಿದರೂ ಕೂಡ ಅಲ್ಲಿಗೆ ಇದುವರೆಗೂ ಸಹ ಆಡ್ಮಿನಿಸ್ಟ್ರೇಟರ್ ಅವರನ್ನು ಅಪಾಯಿಂಟ್ ಮಾಡಿಲ್ಲಾ. ಅದರಿಂದ ಅಲ್ಲಿಯ ಕೆಲಸಗಳು ಬಹಳ ಸ್ಥಗಿತವಾಗಿವೆ ಆ ಏರಿಯಾ ಡೆವಲಪ್‌ಮೆಂಟ್ ಅಥಾರಟಿಯವರು ಆ ಬಗ್ಗೆ ಏನೇನು ಕೆಲಸಗಳು ಮಾಡಬೇಕೋ ಅವೆಲ್ಲವೂ ಸ್ಥಗಿತವಾಗಿವೆ. ೧೯೮೦-೮೧ ರಲ್ಲಿ ಅಲ್ಲಿಗೆ ಸರ್ಕಾರದವರು ಗ್ರ್ಯಾಂಟನ್ನು ಸುಮಾರು ೧ ಕೋಟಿ ೧೨ ಲಕ್ಷ ರೂಪಾಯಿಯನ್ನು ಕೊಟ್ಟಿದ್ದಾರೆ. ಅಲ್ಲಿ ಖರ್ಚಾಗಿರತಕ್ಕಂಥಾದ್ದು ಈ ಬಜೆಟ್ಟಿನಲ್ಲಿ ಇಷ್ಟು ಅಂತ ಕೊಟ್ಟಿದ್ದಾರೆ. ತಮಗೆ ಹೇಳಬೇಕಾದರೆ ೩೧-೩ ೧೯೮೧ ರಲ್ಲಿ ಅಲ್ಲಿಗೆ ಅಲಾಟ್ ಮಾಡಿರತಕ್ಕಂಥಾದ್ದು ನಾನಾ ಐಟಂಗಳಿಗೋಸ್ಕರವಾಗಿ ಕೊಟ್ಟಿರತಕ್ಕಂಥಾ ಮೊಬಲಗು ೭೫ ಲಕ್ಷ ೬೨ ಸಾವಿರದ ೩೫೫ ರೂಪಾಯಿ. ಅಲ್ಲಿ ಖರ್ಚಾಗದೇ ಉಳಿದಿರತಕ್ಕಂಥಾದ್ದು ೧೭,೧೧,೯೫೦ ರೂಪಾಯಿಗಳು; ಅಂದರೆ ಸುಮಾರು $\frac{1}{4}$ ಭಾಗದ ದುಡ್ಡು ಹಾಗೆಯೇ ಉಳಿದಿದೆ. ಅಲ್ಲಿ ಅಚ್ಚುಕಟ್ಟಿನಲ್ಲಿ ಐ.ಟಿ. ರೋಡುಗಳನ್ನು ಮಾಡಬೇಕು; ಅದನ್ನು ಮಾಡಿಲ್ಲ. ಅಲ್ಲಿ ಸರಿಯಾಗಿ ಕಲ್ಲಿನ ಒಡ್ಡುಗಳನ್ನು ಕಟ್ಟಿಲ್ಲ. ಅಲ್ಲದೇ ಫೀಲ್ಡ್ ಚಾನಲ್‌ಗಳನ್ನು ತೆಗೆಯಬೇಕು; ಅವನ್ನು ತೆಗೆದಿಲ್ಲ. ಇಷ್ಟೆಲ್ಲಾ ಆಗಿ ಕೂಡ ಅಲ್ಲಿ ಒಬ್ಬ ಆಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿ ಈ ಬಗ್ಗೆ ಸರಿಯಾದ ವ್ಯವಹಾರ ಮಾಡದೇ ಇರುವುದರಿಂದ ಆ ಹಣವೆಲ್ಲಾ ಲ್ಯಾಪ್ಸ್ ಆಗುವುದಕ್ಕೆ ಅವಕಾಶವಾಯಿತು. ಈ ಬಗ್ಗೆ ತಕ್ಷಣ ಸರ್ಕಾರ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳ

ಬೇಕು ಎಂದು ಹೇಳಬಯಸುತ್ತೇನೆ. ಕೊನೆಯದಾಗಿ ಈ ಹೆಲ್ತ್ ಡಿಪಾರ್ಟ್‌ಮೆಂಟಿನ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಮಾನ್ಯ ಆರೋಗ್ಯ ಮಂತ್ರಿಯವರಾದ ಶ್ರೀ ಅಬ್ದುಲ್ ಸಮದ್‌ರವರು ಇವತ್ತು ಈ ಸಭೆಯಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು; ಆದರೆ ಅವರು ಇಲ್ಲಿ ಇಲ್ಲ. ಅವರ ಬಗ್ಗೆ ಒಂದು ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹೆಲ್ತ್ ಮಿನಿಸ್ಟರ್ ಅಬ್ದುಲ್ ಸಮದ್‌ರವರ ಬಗ್ಗೆ ನನಗೆ ಅಭಿಮಾನವಿದೆ. ಅವರು ಬಹಳ ನಿಷ್ಠಾವಂತರು ಹಾಗೂ ದಕ್ಷರು. ಅವರ ಮೇಲೆ ಒಂದು ಅಪಾದನೆ ಏನಿದೆ ಎಂದರೆ ಅವರು ಸ್ವಲ್ಪ ಕಮ್ಯೂನಲ್ ಎಂದು ಹೇಳುತ್ತಾರೆ. ಅದನ್ನು ಸಾಬೀತು ಮಾಡುವುದಕ್ಕೆ ನನ್ನ ಹತ್ತಿರ ಸ್ವಲ್ಪ ಮಾಹಿತಿಗಳು ಇವೆ. ಈ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಅಡಿಷನಲ್ ಡೈರೆಕ್ಟರ್ ಪೋಸ್ಟನ್ನು ಕ್ರಿಯೇಟ್ ಮಾಡಿದ್ದಾರೆ. ಅದಕ್ಕೆ ಅವರ ಜಾತಿಗೆ ಸೇರಿದವರೊಬ್ಬರನ್ನು ಅಪಾಯಿಂಟ್ ಮಾಡಿದ್ದಾರೆ. ಶ್ರೀ ರಜಾಕ್ ಅಹಮದ್ ಎನ್ನುವವರು ಜಾಯಿಂಟ್ ಡೈರೆಕ್ಟರ್ ಆಗಿದ್ದಾರೆ. ಇವರೂ ಸೇರಿದಂತೆ ೪ ಜನ ಅವರ ಜಾತಿಗೆ ಸೇರಿದವರೇ ಇದ್ದಾರೆ. ಬೆಂಗಳೂರು ಡಿಸ್ಟ್ರಿಕ್ಟ್ ಸರ್ಜನ್ ಪೋಸ್ಟ್‌ಗೆ ಬೇರೆಯವರು, ಅರ್ಹರಾದವರು ಅಲ್ಲಿದ್ದರೂ ಕೂಡ ಅವರನ್ನು ಸೂಪರ್ ಸೀಡ್ ಮಾಡಿ ಅವರ ಜಾತಿಯರೊಬ್ಬರನ್ನು ಡಿಸ್ಟ್ರಿಕ್ಟ್ ಸರ್ಜನ್ ಆಗಿ ನೇಮಕ ಮಾಡಿದ್ದಾರೆ. ಒಂದೇ ಡಿಪಾರ್ಟ್‌ಮೆಂಟ್‌ನಲ್ಲಿ ಮೇಲಿನ ಹುದ್ದೆಗಳೆಲ್ಲಕ್ಕೂ ಅವರ ಜಾತಿಯವರನ್ನೇ ಅಪಾಯಿಂಟ್ ಮಾಡಿದ್ದಾರೆ. ನಾನು ಕೇಳುತ್ತೇನೆ, ಅಲ್ಲಿ ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಬೇರೆಯವರಲ್ಲಿ ಇನ್ನು ಯಾರೂ ಇರಲಿಲ್ಲವೇ? ಅವರಿಗಿಂತಲೂ ಉತ್ತಮರಾಗಿರತಕ್ಕಂಥವರು, ಸರ್ವೀಸ್ ಆಗಿರತಕ್ಕಂಥವರು, ಮೇಧಾವಿಗಳು, ಅನುಭವಿಗಳಾಗಿರತಕ್ಕಂಥವರು ಅಲ್ಲಿದ್ದಾಗ ಒಂದೇ ಆಫೀಸಿನಲ್ಲಿ ಆ ಬೇರೆಯವರನ್ನೆಲ್ಲಾ ಬಿಟ್ಟು ಅವರ ಜಾತಿಯವರನ್ನೇ ಮೇಲ್ಮಟ್ಟದ ಹುದ್ದೆಗಳಿಗೆ ಭರ್ತಿ ಮಾಡಿರತಕ್ಕಂಥಾದ್ದು ತುಂಬಾ ಶೋಚನೀಯವಾದ ಸಂಗತಿ. ಈ ಒಂದು ತಾರತಮ್ಯವನ್ನು ಅವರು ಸರಿ ಮಾಡಬೇಕು ಅವರಿಗೆ ಇರತಕ್ಕಂಥ ಒಂದು ಒಳ್ಳೆಯ ಹೆಸರನ್ನು ಕೆಡಿಸಿಕೊಳ್ಳಬಾರದು ಎಂದು ಹೇಳುತ್ತೇನೆ. ನಾನು ಇನ್ನೂ ಹೆಚ್ಚು ವಿಷಯಗಳನ್ನು ಮಾತನಾಡಬೇಕೆಂದು ಇದ್ದರೂ ಕೂಡ ಸಮಯ ಇಲ್ಲ; ಕೊನೆಯದಿವಸ ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನಾನು ಅಭಾರಿಯಾಗಿದ್ದೇನೆ ಮತ್ತು ಈ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI P. A. PAWASHE.—Mr. Speaker Sir, so far several hon Members from both the sides have participated in the discussion on the Budget and they have pointed out various defects in the Budget. So far as I am concerned, I will confine myself only to the problems of my constituency and the border areas.

First of all, I would like to submit that the present Government as well as previous Governments have neglected the interest of the border areas. No developmental works have been taken up in those areas. Sir, it can be observed that there are many villages without roads, without school buildings and without water facilities. During the last summer, about 8 to 10 villages of my constituency were supplied water in tanks. Where all the open wells and borewells failed, I requested the concerned authorities to make alternative arrangements for drinking water facilities in those villages, but so far, no steps have been taken. I requested the Government to take up NRWS Scheme in all those villages in Belgaum taluka as well as in border areas where borewells and open wells have failed.

So far as roads are concerned, both PWD roads as well as Taluka Development Board roads are only on record. The condition of

those roads is very bad and they are not at all fit for traffic. The funds that are alloted for the improvement or maintenance of roads are not adequate. The amount granted for maintenance and improvements of PWD roads in villages is Rs. 1,000 per kilo meter including labour charges. It is practically impossible for the PWD authorities to maintain these roads in proper condition for want of funds. In and around Belgaum city there are number of villages which are connected by these village roads. During the last monsoon they have been damaged to a great extent and are not in a fit condition for traffic. Several buses are plying on these roads. Thousands of students come daily from those villages to the city. Since the condition of these roads is very bad, on certain routes, the KSRTC authorities are reluctant to ply buses. I request the Government to give special grants for repairing these roads to avoid inconvenience caused to the public as well as to the students

As regards irrigation facilities, recently the Government has taken up few schemes. Some of the schemes have not yet been completed. Irrigation works in our areas fail under three categories, namely. (i) old tanks constructed about 300 or 400 years back, (ii) new Bandharas constructed by this Government as well as previous Governments and (iii) Minor Irrigation tanks. As far as old tanks are concerned, they are full of silt and their capacity to store water has been lessened. Whenever there are no rains, there will be no water in these tanks. The land revenue agreement of command areas of coming under these tanks, include water rate also. Earlier neither the Bombay Government nor the Princely States used to recover water rate from agriculturists there.

As regards newly constructed Bandharas, they are not properly maintained No Channels have been constructed and some of them are full of silt. Therefore, the agriculturists have not been supplied water from these Bandharas also. As per rules and regulations, it is necessary to make a joint inspection by the revenue authorities every year to see that water is supplied to each and every agriculturist and to see that water rate is not levied wherever water is not supplied. The revenue authorities instead of making joint inspection go through the records and issue demand notices to agriculturists. The revenue authorities in our area are forcibly recovering water rate from agriculturists. As a result there is discontentment among agriculturists. I request the Government to direct the PWD as well as Revenue authorities to make a Joint Survey of all the irrigation works in the area and see that water is properly supplied to agriculturists and then only the concerned authorities should

recover the water rate. The present recovery of the water rate should be stopped till then. I request the Hon. Minister for Finance as well as the Hon. Minister for Revenue to take a special interest in the matter and see that recovery of the water is stayed forthwith. The agriculturist are ready to pay water rate wherever water is really supplied.

Sir, the next pointthat I would like to submitis about the shortage of Veterinary Dispensaries. There is only one Veterinary Dispensary in Belgaum City. There are no dispensaries in the eastern part of Belgaum Taluka. A proposal to start Veterinary Dispensaryat village Belgundi in Belgaum taluka is pending with the Government since 1967. People of Belgundi village are ready to give place, building to house the dispensary and have complied with all the conditions prescribed by the Government. They have paid the necessary contribution also In spite of the assurance given by the previous Chief Minister, the dispensary has not been started till today. I would request the Government to see that Veterinary Dispensary at village Belgundi in Belgaum taluka is started this year.

Another thing, the Government has taken up various schemes to improve the lot of agriculturists. Particularly in border areas, the persons who are appointed in Revenue Department as well as Agriculture Department, they do not know the language of the people.

Now-a-days agriculturists want to adopt advanced techniques in agriculture. They are interested in improving production. So, they must learn new techniques. The officials who have to teach all these things do not know the language of the people there. It will not be possible for agriculturists to understand the language of officials. So, I request the Government to see that officers knowing Marathi language are appointed in that area and protect the interests of agriculturists. By this, the Government can see that plans and schemes of the Government are implemented and the real benefits are acquired by agriculturists. In border area. the village officers were maintaining all the revenue records in Marathi since hundreds of years. Now, some village officers knowing Kannada have changed them into Kannada. This attitude must be stopped, because the border area people do not know Kannada. This point should be taken into consideration by the Government. This will cause a great inconvenience to the people who are living there. 90% of the people do not know Kannada in that area, they speak only Marathi, Therefore, I request the Government to see that officers knowing Kannada are not posted in border areas.

Now, I will come to the Education Department. There is an acute shortage of teaching staff. Repeated requests and representations have been made to the A. E. O. and other concerned authorities to provide adequate teaching staff in the border area. Everybody representations have been received especially from village serpanchas. But, for the last four years the Government is not in a position to meet the demands of the people. I would like to make a submission with regard to school buildings. For the construction of a school building Government gives Rs. 4,500 and public has to contribute Rs. 8,500, That means we have to construct a school building out of Rs. 7,500. It is not possible to construct a school building within Rs. 7,500 when we take into consideration the cost of building materials that are to be used for construction. Another thing is, the system of collecting local contribution is imposed only on rural areas, Whereas the collection of local contribution is not in practice in the case of urban areas. In the case of some villages where the panchayats are economically sound, they can contribute local contribution and construct school buildings. But, in case of certain villeges which are poor and where backward tribes live it is practically impossible forthem to collect local contribution and they will have to go without school building. So, I request the Government to give a grant of Rs. 10,000 for constructing school buildings in each village. In other words, the system of local contribution should be abolished and the entire cost of construction should be borne by the Government in rural arers.

SRI BHEEMANNA KANDRE.—So many Kannada schools have been closed in Maharastra. Do you want us to treat the Marathi schools also on par with them ?

SRI P. A. PAWASHE.—Recently it has been clarified that there is no injustice done to Kannada schools in Maharastra. That question does not arise. So. the hon. Member Sri Bheemanna Khandre has no right to express anything about it. We have requested the Government to open new Marathi medium high schools n border areas. I hope the Government will favourably consider our request and will not neglet the people of border areas.

SRI BHEEMANNA KHANDRE.—Sir.........

(*Interruptions*)

MR. SPEAKER.—He is not yielding.

SRI P. A. PAWASHE.—Sir, I am not concerned with what is happening elsewhere.

(*Interruptions*)

SRI P. A. PAWASHE.—Sir, I am putting forth my grievances.

SRI BHEEMANNA KHANDRE,—They have closed 100 Kannada schools in Maharastra- Whether the Government of Maharastra intends to do away with Kannada schools ?

(Interruptions)

SRI P. A. PAWASHE.—I am not yielding. I think the hon. Member has no right to intervene. The amount that is placed for the development of our area is very little and I request the Government to enhance the same. Under Western Ghat Development scheme, they are taking up works concerned with horticulture and Agriculture department Instead of spending on horticulture, and agriculture, I request the Government to spend the same amount on the development of roads,bridges and other connected things in our border area. I also request the Government to give full consideration to the demands of the people of border areas so that these areas are also developed along with other areas of the State. Another important thing is, the barder dispute between Karnataka and Maharastra is pending since 25 years. I request the Government to solve this issue on just principles and see that justice is give to the people of border areas. We have won in elections and the people have expressed their willingness and wishes to join the State of Maharastra. Taking into consideration the wishes of the people of border areas the Central and State Governments should solve this problem amicably and justice should be given to Marathi people in border areas. With these few words I thank the Chair and conclude my speech.

† ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೆ ಈ ವರ್ಷದ ಆಯವ್ಯಯ ಪಟ್ಟಿಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ, ಒಂದು ವಿಚಿತ್ರ ಸಂಗತಿ ಏನೆಂದರೆ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದಕ್ಕೆ ನಮ್ಮ ಮುಂದೆ ಇಟ್ಟಿದ್ದಾರೆ. ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವ ವಿಷಯವಾಗಿ ಮಾತನಾಡಬೇಕಾಗಿದೆ. ಉಳಿದ ವಿವರಗಳನ್ನು ಮುಂದೆ ಸಮಯ ಬಂದಾಗ ಮಾತನಾಡುವ ದೃಷ್ಟಿಯಿಂದ ಈಗ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಪ್ರಯತ್ನ ಪಡುತ್ತೇನೆ. ಈ ವರ್ಷದ ಆಯವ್ಯಯ ಪಟ್ಟಿಯನ್ನು ತಯಾರು ಮಾಡುವ ಯಾವ ನಿಯಮವನ್ನು ಅನುಸರಿಸಿದ್ದಾರೆ, ಅದು ಮೇಲ್ನೋಟಕ್ಕೆ ಹೇಗಿದೆ ? ಅದನ್ನು ಬಿಚ್ಚಿ ನೋಡಿದರೆ ಅಂತರ ಹೇಗಿದೆ ಆದರ ಗುರಿಯೇನು ? ಎಂಬ ವಿಚಾರವನ್ನು ನಮ್ಮ ನಾಯಕರಾದ ಅರಸುರವರು ಬಹಳ ಚೆನ್ನಾಗಿ ತಿಳಿಸಿದ್ದಾರೆ. ಹಣಕಾಸಿನ ಮಂತ್ರಿಗಳು ಚಿಕ್ಕ ವಯಸ್ಸಿನವರಿದ್ದರು ಬಹಳ ಬುದ್ಧಿವಂತಿಕೆಯಿಂದ ಮಾಡಿದ್ದಾರೆ. ಏಕ ಪಾತ್ರಾಭಿನಯ ಇದ್ದಹಾಗೆ ಚೆನ್ನಾಗಿ ಮಾಡಿದ್ದಾರೆಂದು ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ. ನಿಜ ಹಣ ಕಾಸಿನ ಮಂತ್ರಿಗಳು ತರುಣರಿದ್ದಾರೆ. ಸಮಾಜ ಸುಧಾರಣಾ ವಿಚಾರದಲ್ಲಿ ಬಡವರ ವಿಚಾರದಲ್ಲಿ ಅವರಿಗೆ ಹೆಚ್ಚು ಆಶೆ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರು ಬಡವರಿಗಾಗಿ ಮಾಡಿರುವ ಪ್ರಯತ್ನಗಳು ಕಾರ್ಯಗತ ಮಾಡುವಲ್ಲಿ ಎಷ್ಟೋ ಎಡರುತೊಡರುಗಳು ಅಡ್ಡಿಆತಂಕಗಳು ಬಂದು ಎಷ್ಟೋ ಸಲ ಆ ಗುರಿಯನ್ನು ಮುಟ್ಟುವುದು ಕಷ್ಟವೆನ್ನುವ ರೀತಿಯಲ್ಲಿ ಕಾಣುತ್ತದೆ. ನಾನು ಆಯವ್ಯಯ ಪಟ್ಟಿಯನ್ನು ಕುರಿತು ಮಾತನಾಡುವಾಗ ಇದರಲ್ಲಿ ಏನು ಮಾಡಿಲ್ಲ

ವೆಂದು ಹೇಳತಕ್ಕದ್ದು ಸರಿಯಾಗಿರುವುದಿಲ್ಲ. ಆದರೆ ನಮ್ಮ ದೇಶ ಅನೇಕ ರೀತಿಯಲ್ಲಿ ಕ್ಷಾಮಡಾಮರಗಳಿಗೆ ತುತ್ತಾಗಿ ಬಹಳ ಕಷ್ಟ ಪರಿಸ್ಥಿತಿ ಇದೆ. ಈ ಬೃಹದಾಕಾರದ ಸಮಸ್ಯೆಯನ್ನು ಕಾಯಂ ಆಗಿ ಹೋಗಲಾಡಿಸಲು ಒಂದು ಪರಿಹಾರ ಕಂಡುಹಿಡಿಯುವುದಕ್ಕೋಸ್ಕರ ಒಂದು ಸಮಿತಿಯನ್ನು ಮಾಡಿದ್ದೇವೆಂದು ಈ ಪತ್ರದಲ್ಲಿ ಹೇಳಿದ್ದಾರೆ. ಇದು ಬಹಳ ವರ್ಷಗಳಿಂದ ದೇಶದ ಮುಂದೆ ಇದ್ದಂತಹ ಸಮಸ್ಯೆ ನಿಜ. ಆದರೆ ಕ್ಷಾಮಡಾಮರಗಳಿಗೆ ತುತ್ತಾಗುವ ಕಾರಣದಿಂದ ಅದನ್ನು ಪರಿಹರಿಸಲು ಗಂಗಾನದಿಯ ನೀರನ್ನು ಹರಿಸಿ ಕಾಯಂ ಪರಿಹಾರ ಕಂಡುಹಿಡಿಯುವ ಬಗ್ಗೆ ಪ್ರಯತ್ನ ಪಟ್ಟಿದ್ದಾರೆಯೆ ಎಂಬುವನ್ನು ನೋಡಬೇಕಾಗಿದೆ. ಅದೇರೀತಿ ಹರಿಜನ ಗಿರಿಜನರ ಬಗ್ಗೆ ಅವರ ಆರ್ಥಿಕ ಪ್ರಗತಿಯ ಬಗ್ಗೆ ಹೆಚ್ಚು ನಿಗಾ ಕೊಡುತ್ತೇವೆಂದು ಹೇಳಿಕೊಂಡಿದ್ದಾರೆ. ಹರಿಜನ ಗಿರಿಜನರಿಗೆ ಪ್ರಿಯಾರಿಟಿ ಕೊಡುವಾಗ ೧,೨,೩ ಎಂದು ಹೇಳುವಾಗ ಅದರಲ್ಲಿ ಗಿನೆಯುದಕ್ಕೆ ಪ್ರಯತ್ನಪಟ್ಟಿದ್ದಾರೆಯೇ ಎಂದು ನೋಡಿದರೆ ಅದರ ಕಾರ್ಯಕ್ರಮವೇನು ಅನ್ನುವುದು ಅಷ್ಟಾಗಿ ಕಾಣುತ್ತಿಲ್ಲ. ಯೋಜನಾ ರೂಪದಲ್ಲಿ ಹಣವನ್ನು ಖರ್ಚು ಮಾಡುವಾಗ ಆಧ್ಯತೆಯ ಮೇಲೆ ವಿದ್ಯುಚ್ಛಕ್ತಿ ಬಾಬಿಗೆ ಹಣವನ್ನು ಒದಗಿಸಿ ಬಿಟ್ಟರೆ ಆಗುವುದಿಲ್ಲ. ಉಳಿದ ಸಾಮಾಜಿಕ ಸೇವೆಗಳಿಗಾಗಿ ಬಡ ಜನರ ಕಲ್ಯಾಣಕ್ಕಾಗಿ ಹೆಚ್ಚು ಹಣವನ್ನು ಒದಗಿಸಿ ಕೊಟ್ಟಿದ್ದಾರೆ. ಇದು ನಿಜವಾಗಿಯೂ ಕಾರ್ಯರೂಪದಲ್ಲಿ ಹೇಗೆ ಆಗುತ್ತದೆ ಏನ್ನುವುದನ್ನು ನೋಡಬೇಕಾಗಿದೆ. ಕಾರ್ಯರೂಪದಲ್ಲಿ ಮಾಡಬೇಕೆನ್ನುವ ಒಂದು ಆಶೆಯನ್ನು ವ್ಯಕ್ತಪಡಿಸುತ್ತಾ, ಜನರ ಮನೆಯ ಬಾಗಿಲಿಗೆ ಸರ್ಕಾರದ ಸೇವೆ ಹರಿದುಕೊಂಡು ಹೋಗುವ ಹಾಗೆ ಮಾಡುತ್ತಿದ್ದೇವೆಂದು ಹೇಳಿಕೊಂಡಿದ್ದಾರೆ. ಆ ರೀತಿ ಮಾಡಲಾಗುತ್ತಿದೆ ಎಂದು ಅಕ್ಷರಶಃ ಒಪ್ಪಿಕೊಳ್ಳುವುದು ಕಷ್ಟ. ಜನರ ಮನೆಯ ಬಾಗಿಲಿಗೆ ಸರ್ಕಾರದ ಸೇವೆ ಪ್ರವಾಸ ರೂಪದಲ್ಲಿ ಮನೆ ಕೊಚ್ಚಿಕೊಂಡು ಹೋಗುವ ಹಾಗೆ ಹೋಗಿದೆಯೇ ? ಇದರ ಬಗ್ಗೆ ನಾವು ಅರ್ಥಮಾಡಿಕೊಳ್ಳುವುದು ಕಷ್ಟ. ಅಧಿಕಾರಿಗಳು ಹಳ್ಳಿಗಳಲ್ಲಿ ಎಲ್ಲೋ ಒಂದು ಕಡೆ ನಿಮ್ಮ ಕಷ್ಟವೇನು ಎಂದು ಕೇಳುತ್ತಾರೆ ಆ ರೀತಿ ಮಾಡಬೇಕೆಂದು ಸರ್ಕಾರಿ ಆಜ್ಞೆ ಇದೆ. ಅವರು ಏನು ಮಾಡಿದ್ದಾರೆಂಬುದು ಅವರ ಡೈರಿಯಿಂದ ಗೊತ್ತಾಗುತ್ತದೆ. ಆದರೆ ಯಾರು ಕೂಡ ಜನಗಳ ಮುಂದೆ ಹೋಗುವುದಿಲ್ಲ. ರಾಜ್ಯದ ಅನೇಕ ಕಡೆಗಳಲ್ಲಿ ಸಚಿವ ಸಂಪುಟದ ಸಭೆಗಳನ್ನು ನಡೆಸಿ ಅವರ ಕಷ್ಟಗಳೇನು ಎಂಬುದನ್ನು ಅರಿತು ಕೆಲಸ ಮಾಡಿದ್ದೇವೆಂದು ಒತ್ತಿ ಒತ್ತಿ ಹೇಳಿದ್ದಾರೆ, ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಅಧಿಕಾರಿಗಳ ಡೈರಿ ನೋಡಿದರೆ ಸಾಲದು. ಐ.ಎ.ಎಸ್ ಅಧಿಕಾರಿಗಳು ಗೆಜೆಟೆಡ್ ಅಧಿಕಾರಿಗಳು ಬಡವರ ಕಷ್ಟವನ್ನು ಅರಿತು ಕೆಲಸ ಮಾಡಬೇಕಾಗಿದೆ. ತಾವು ಹೇಳತಕ್ಕ ರೀತಿಯಲ್ಲಿ ಯಾವ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಬಡವರಿಗೆ ಕೊಟ್ಟಿರುವ ಸಾಲವನ್ನು ವಸೂಲಿ ಮಾಡುವಾಗ ಮಾತ್ರ ಅಧಿಕಾರಿ ಬಡವರ ಮನೆಯ ಬಾಗಿಲಿಗೆ ಹೋಗುತ್ತಾರೆ. ಆಗ ಅಧಿಕಾರಿಗಳು ಎಲ್ಲಿ ನೋಡಿದರೂ ಸಿಗುತ್ತಾರೆ. ಪ್ರಿಯಾರಿಟಿಯ ಮೇಲೆ ಬಡವರಿಗೆ ಕೆಲಸ ಮಾಡುವಾಗ ಯಾರು ಕೈಗೆ ಸಿಗುವುದಿಲ್ಲ, ವಸೂಲಿ ಮಾಡುವಾಗ ಅವರ ವಾಹನ ಸಿಬ್ಬಂದಿ ಸಮೇತ ಎಲ್ಲಾ ಕಡೆ ತಿರುಗುತ್ತಾರೆ. ಅವರು ಕೆಲಸ ಮಾಡುವಾಗಲೂ ಅದೇ ರೀತಿ ಎಲ್ಲಾ ಮಟ್ಟಗಳಲ್ಲಿಯೂ ತಿರುಗಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಅಧಿಕಾರಿಗಳನ್ನು ಒಡೆದು ಎಬ್ಬರಿಸಬೇಕಾಗಿದೆ, ಎಲ್ಲರೂ ಕೂಡ ಹಾಗೆ ಇರುತ್ತಾರೆಂದೂ ಹೇಳುವುದಿಲ್ಲ. ಅವರಲ್ಲಿ ಒಂದು ದೋಷವಿದೆ. ಈಗ ಸ್ವಲ್ಪ ಮಟ್ಟಿಗೆ ಬದಲಾವಣೆಯಾಗುತ್ತಾ ಇದೆ. ಎಲ್ಲರೂ ಕೂಡ ಬದಲಾವಣೆಯಾಗಿಲ್ಲ. ಹಳೆಯ ಪದ್ಧತಿಯನ್ನು ಮನಸ್ಸಿನಲ್ಲಿಟ್ಟುಕೊಂಡಿರುವವರ ಸಂಖ್ಯೆ ಜಾಸ್ತಿ ಇದೆ. ಅದನ್ನು ಸರಿಪಡಿಸಬೇಕಾಗಿದೆ ಜನನಾಯಕರು ಹೇಳಿಕೊಳ್ಳುವ ಹಾಗೆ ನಮ್ಮ ಮಾನ್ಯ ನಿಜಲಿಂಗಪ್ಪನವರು ಒಂದು ಮಾತು ಹೇಳುತ್ತಾರೆ We are the servants of the people, ಕಾರ್ಯರೂಪಕ್ಕೆ ತರುವಾಗ ಅವರನ್ನು ಎಚ್ಚರಿಸತಕ್ಕಂತಹ ಕೆಲಸವನ್ನು ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಭೂ ಸುಧಾರಣೆಯ ಬಗ್ಗೆ ಪ್ರಸ್ತಾಪ ಮಾಡುವಾಗ ೮ ಲಕ್ಷ ಅರ್ಜಿಗಳು ಬಂದಿದ್ದು ಅವುಗಳಲ್ಲಿ ಬಹುತೇಕ ಅರ್ಜಿಗಳು ವಿಲೇವಾರಿ ಆಗಿವೆ ಎಂದು ಹೇಳಿದ್ದಾರೆ. ಹೆಚ್ಚುವರಿ ಭೂಮಿಯನ್ನು ಹಂಚುವಾಗ ಅದರಲ್ಲಿ ಶೇಕಡ ೫೦, ೬೦ರಷ್ಟು ಭೂಮಿ ಹರಿಜನ ಗಿರಿಜನರಿಗೆ ದೊರೆತಿದೆ ಎಂದು ಹೇಳಿದ್ದಾರೆ. ಅವರು ಕೊಟ್ಟಿರುವ ಅಂಕಿಅಂಶಗಳನ್ನು ಒಪ್ಪುವುದು ಕಷ್ಟವಾಗಿದೆ. ಇರುವ ಭೂಮಿಯಲ್ಲಿ ೫೦, ೬೦ ರಷ್ಟು ಭೂಮಿಯನ್ನು ಹರಿಜನ ಗಿರಿಜನರಿಗೆ ಕೊಡಬೇಕೆಂದು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿದೆ. ಆದರೆ ಭೂಸುಧಾರಣೆಯಲ್ಲಿ ಉಳಿಯತಕ್ಕ ಭೂಮಿಯನ್ನು ಕಾನೂನಿಗೆ ಅನುಸಾರವಾಗಿ ಸ್ವಲ್ಪ ಮಟ್ಟಿಗಾದರೂ ಮಾಡಲಾಗುತ್ತದೆ ಎಂಬುದನ್ನು ನನಗೆ ತಿಳಿದಮಟ್ಟಿಗೆ ಹೇಳುವುದು ಕಷ್ಟವಾಗಿದೆ. ಶೇಕಡ ೬೦ರಷ್ಟು ಭೂಮಿ ಹರಿಜನ ಗಿರಿಜನರಿಗೆ ದೊರೆತಿದೆ ಎಂಬುದನ್ನು ಒಪ್ಪಿಕೊಳ್ಳುವುದು ಕಷ್ಟ.

ಮತ್ತೊಂದು ವಿಚಾರವೇನೆಂದರೆ ಬೆಲೆಗಳನ್ನು ಹತೋಟಿಯಲ್ಲಿಡುವುದು, ಬೇಸಾಯ ಉತ್ಪಾದನಾ ಸಾಮಾನುಗಳನ್ನು ಬಂದೋಬಸ್ತಿನಲ್ಲಿ ಇಡುವುದು, ಸಂಗ್ರಹಿಸಿದಂತಹ ವಸ್ತುಗಳನ್ನು ಹೊರತೆಗೆಯುವುದು ಮುಂತಾದ ಬಿಗಿ ಕ್ರಮಗಳನ್ನು ಕೈಗೊಂಡು ಕೆಲಸ ಮಾಡಲಾಗುತ್ತದೆ ಎನ್ನುವ ಬಗ್ಗೆ ಮೆಚ್ಚಲಾಗುವುದಿಲ್ಲ. ಆ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ತರಕಾರಿ ಬೆಳೆಗಾರರ ಸಹಕಾರ ಸಂಘಗಳು ಅವರಿಗೆ ನಾವು ಧನ ಸಹಾಯವನ್ನು ಕೊಡುತ್ತೇವೆಂದೂ ಅದರಿಂದ ಅವರು ಬೆಳೆದಂತಹ ಧಾನ್ಯಗಳನ್ನು ಸಂಗ್ರಹ ಮಾಡಲು ಉಪಯುಕ್ತವಾಗುತ್ತದೆಂದು ಹೇಳಿದ್ದಾರೆ. ಬೆಲೆಗಳ ಹತೋಟಿಯನ್ನಿಡಲು ಹಾಗೂ ರೈತರಿಗೆ ಅನುಕೂಲ ಮಾಡಲು ಇರತಕ್ಕ ಸಹಕಾರ ಸಂಘಗಳು ಇದುವರೆಗೆ ದಾಸ್ತಾನು ಮಳಿಗೆಗಳನ್ನು ಮಾಡುವುದಕ್ಕೆ ಆಗಿಲ್ಲ. ಇದುವರೆಗೆ ಚೆನ್ನಾಗಿ ಮಾಡುವುದಕ್ಕೆ ಆಗಿಲ್ಲ. ತರಕಾರಿ ಸಹಕಾರ ಸಂಘಗಳನ್ನು ಮಾಡುತ್ತೇವೆಂದು ಏತಕ್ಕೆ ಕಾಣಿಸುತ್ತಾರೋ ಇದು ನಿಜವಾಗಿಯೂ ನನಗೆ ಅರ್ಥವಾಗುತ್ತಿಲ್ಲ. ಪ್ರಿಯಾರಿಟಿ ಮೇಲೆ ದಾಸ್ತಾನು ಮಳಿಗೆಗಳನ್ನು ದೇಶದಲ್ಲಿ ಯಾವಾಗ ರೂಢಿಸುತ್ತಾರೋ ಕಟ್ಟುತ್ತಾರೋ ಗೊತ್ತಿಲ್ಲ. ಅದರ ಜೊತೆಗೆ ಇದರಿಂದ ಲಕ್ಷಾಂತರ ರೂಪಾಯಿಗಳನ್ನು ಜೋಡಿಸತಕ್ಕಂತಹ ಯೋಜನೆಯನ್ನು ಇಟ್ಟುಕೊಂಡಿದ್ದೇವೆಂದು ಹೇಳಿದ್ದಾರೆ. ಪ್ರತಿಯೊಂದು ಸಂತೆಯನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಉತ್ತಮಪಡಿಸಬೇಕು. ಪ್ರತಿಯೊಂದು ಸಂತೆಯು ಮಾರುಕಟ್ಟೆಯಾಗಿ ಒಂದು ಬದಲಾವಣೆಯಾದ ಕೆಲಸ ಮಾಡುತ್ತೇವೆ ಎನ್ನತಕ್ಕದ್ದನ್ನು ಕೂಡ ಹೇಳಿದ್ದಾರೆ. ಇದೂ ಕೂಡ ಎಷ್ಟರಮಟ್ಟಿಗೆ ಫಲದಾಯಕವಾಗುತ್ತದೆ ಎನ್ನುವುದನ್ನು ನಾವು ನೋಡಬೇಕಾಗಿದೆ.

ಇನ್ನು ರಸ್ತೆಗಳ ವಿಚಾರವಾಗಿ ಬಹಳವಾಗಿ ಹೇಳಿಕೊಂಡಿದ್ದಾರೆ. ನಾವು ಹಿಂದೆ ಎಂದೂ ಈ ತರಹ ಯೋಜನೆಯನ್ನು ಕಂಡಿರಲಿಲ್ಲ. ಇದು ಬೃಹದಾಕಾರವಾದ ಸಮಸ್ಯೆ. ಟೈಮ್ ಬೌಂಡ್ ಪ್ರೋಗ್ರಾಂ ಪ್ರಕಾರ ಮಾಡಿದರೆ ಆಗುತ್ತದೆ, ವಿನಹ ಇಲ್ಲದಿದ್ದರೆ ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ಗ್ರಾಮಾಂತರ ಪ್ರದೇಶಗಳಿಗೆ ರಸ್ತೆಗಳಿಲ್ಲವೆಂದು ಮಣ್ಣಿನ ರಸ್ತೆಗಳನ್ನು ಮಾಡಿದಾಗ ವರುಣನ ಪ್ರಕೋಪಕ್ಕೆ ತುತ್ತಾಗಿ ರಸ್ತೆಗಳ ಗುರುತೇ ಇಲ್ಲದಂತೆ ಆಗಿದೆ. ರಸ್ತೆ ಮಾಡುವಾಗಲೂ ಅವರು ಸರಿಯಾಗಿ ಮಾಡಿರುವುದಿಲ್ಲ ದಡ ಕಡಿದು ಸುಮ್ಮನೆ ಮಣ್ಣು ಎರಚಿರುತ್ತಾರೆ, ಮಳೆ ಬಂದಾಗ ಎಲ್ಲಾ ಕೊಚ್ಚಿಕೊಂಡು ಹೋಗಿ ಯಾರು ಓಡಾಡದಂತೆ ಆಗಿರುತ್ತವೆ. ಆಲ್ ವೆದರ್ ರೋಡ್ಸ್ ಎನ್ನತಕ್ಕಂತಹ ಒಂದು ಸ್ಕೀಂ ಏನಿದೆ ಇದು ಬಹಳ ಗಟ್ಟಿಯಾಗಿ ಉಳಿದಿದೆಯೋ ವಿನಹ ರಸ್ತೆಗಳನ್ನು ಮಾಡುವುದರಲ್ಲಿ ಈ ಹಿಂದೆ ಕೋಟ್ಯಾಂತರ ರೂಪಾಯಿಗಳ ಒಂದು ಯೋಜನೆಯನು ಶ್ರೀಮಾನ್ ಬಂಗಾರಪ್ಪನವರ ಹೆಸರಿನಲ್ಲಿ ಮಾಡಿದ್ದರು. ಅದೇ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರ ಕಾಲದಲ್ಲಿ ಹಾಕಿದ್ದ ಯೋಜನೆ ಎಂದು ಕೈಬಿಟ್ಟಿದ್ದಾರೋ ಏನೋ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಎಷ್ಟೋ ವಿಚಾರಗಳು ಮ್ಯಾಟರ್ ಆಫ್ ಪಾರ್ಲಿಮೆಂಟ್ ಎಂದು ಹೇಳಿದ್ದಾರೆ. ಅಂದರೆ ಯಾರೇ ಮುಖ್ಯಮಂತ್ರಿಗಳಾದರೂ ಕೂಡ ಯಾರೇ ಅಧಿಕಾರಕ್ಕೆ ಬಂದರೂ ಕೂಡ ಹಿಂದೆ ಹಾಕಿದ್ದಂತಹ ಯೋಜನೆಗಳನ್ನು ಬಿಡದೆ ಅವುಗಳನ್ನೇ ಅನುಸರಿಸಿಕೊಂಡು ಬರುವ ಒಂದು ಪದ್ಧತಿಗೆ ನ್ಯಾಷನಲ್ ಪಾಲಿಸಿ ಆಫ್ ಪ್ರೋಗ್ರಾಂ ಎಂದು ಹೇಳುತ್ತಾರೆ. ಈ ಒಂದು ಪ್ರೋಗ್ರಾಂ ದೇಶದ ಹಿತದೃಷ್ಟಿಯಿಂದ ಒಂದು ರೀತಿಯಲ್ಲಿ ಮೆಚ್ಚತಕ್ಕಂತಹ ಪದ್ಧತಿಯೇ ಸರಿ. ಇದಕ್ಕೆ ನಾನು ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈವತ್ತು ಏನಾಗಿದೆ ಎಂದರೆ ಯಾರೋ ಅಧಿಕಾರಕ್ಕೆ ಬರುತ್ತಾರೆ. ಹಿಂದೆ ಇದ್ದಂತಹ ಸರ್ಕಾರ ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡಿದ್ದರೂ ಸಹ ಅದನ್ನು ಸಂಪೂರ್ಣವಾಗಿ ನಿರ್ನಾಮ ಮಾಡುತ್ತಾರೆ. ಇಲ್ಲವೇ ಅದೇ ಯೋಜನೆಗಳನ್ನು ಮುಂದುವರಿಸುತ್ತಾರೆ. ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು ಆದರೆ ಕಾಲಾವಕಾಶ ಇಲ್ಲ. ಉದಾಹರಣೆಗೆ ಹೇಳುವುದಾದರೆ ನಮ್ಮ ದೇಶದಲ್ಲಿರತಕ್ಕಂತಹ ಗ್ರಾಮಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡ್‌ಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಬರಬೇಕಾದರೆ ನಮ್ಮ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಹಾಗೂ ಅಧಿಕಾರವನ್ನು ಅವರಿಗೆ ಕೊಟ್ಟು ಮಾರ್ಗದರ್ಶನ ಮಾಡಿ ಅವರಿಂದ ನಾವು ಹೆಚ್ಚಿನ ಕೆಲಸವನ್ನು ದುಡಿಸಿಕೊಳ್ಳಬಹುದು. ಎಂದು ಹೇಳಿ ಈ ಹಿಂದೆ ದಿನಾಂಕ ೨-೧೦-೧೯೭೭ರಲ್ಲಿ ಬೆಂಗಳೂರಿನ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಒಂದು ಮಹಾ ಸಭೆಯನ್ನು ಕರೆದು ಅದರಲ್ಲಿ ಕೆಲವು ನಿರ್ಣಯಗಳನ್ನು ಕೈಗೊಂಡಿದ್ದರು. ಹಾಗೂ ಒಳ್ಳೆಯ ರೂಪುರೇಷಗಳನ್ನು ಹಾಕಿಕೊಂಡು ಬಹಳ ಸುಂದರವಾಗಿ ಯೋಜನೆಗಳನ್ನು ಹಾಕಿಕೊಂಡಿದ್ದರು. ಅದನ್ನು ಅದ್ಯಾವ ಕಾರಣದಿಂದಲೂ ಏನೋ ಸಂಪೂರ್ಣವಾಗಿ ಸೆಟಸೈಡ್ ಅಂತಲೋ

ಅಥವಾ ಇಂಪ್ರೂವ್ ಮಾಡುತ್ತೇವೆ ಅಂತಲೂ ಇಲ್ಲ ಮಾಡಿಫೈಡ್ ಅಂತಲೋ ಯಾವುದೋ ಕಾರಣ ದಿಂದಲೂ ಅದನ್ನು ಜಾರಿಗೆ ಕೊಡಲಿಲ್ಲ. ಒಂದು ಸಲ ಯಾವುದೇ ಮಂತ್ರಿಮಂಡಲ ಒಂದು ಕಾರ್ಯ ಕ್ರಮವನ್ನು ಹಾಕಿಕೊಂಡರೆ ಅದೇ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋದರೆ ಒಳ್ಳೆಯದು ಎಂದು ನನಗನಿಸುತ್ತದೆ. ಯಾರೇ ಅಧಿಕಾರಕ್ಕೆ ಬರಲಿ ಯಾರೇ ಮಂತ್ರಿಮಂಡಲವನ್ನು ರಚಿಸಲಿ ಮೆನ್ ಮೇ ಕಂ ಮೆನ್ ಮೇ ಗೋ ಅಂದಹಾಗೆ ಕಾಲ ಮತ್ತು ನದಿಗಳ ವೇಗವನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ಆ ರೀತಿಯಾಗಿ ತಾವು ಯಾವ ಕೆಲಸವನ್ನು ಮಾಡಿದರೂ ಕೂಡ ಜನ ಮೆಚ್ಚಿಗೆಗೆ ಕೆಲಸ ಮಾಡ ಬಾರದು. ಆ ರೀತಿ ತಾವು ಜನ ಮೆಚ್ಚಿಗೆಗೆ ಕೆಲಸ ಮಾಡುವುದಕ್ಕೆ ಹೋಗಿ ದಿಢೀರನೇ ತಾವು ತಮ್ಮ ತಲೆಯ ಮೇಲೆ ಹಾಕಿಕೊಳ್ಳುವುದಕ್ಕೆ ಹೋಗಬೇಡಿ. ತಾವು ಮಾಡುವ ಕೆಲಸವನ್ನು ಲಾಂಗ್ ರೇಂಜ್ ಪಾಲಿಸಿಯ ಮೇಲೆ ಮುಂದುವರಿಸಿಕೊಂಡು ಹೋಗಬೇಕು. ನನ್ನ ಮನಸ್ಸಿನಲ್ಲಿರುವುದನ್ನು ನಾನು ಹೇಳುವುದಾದರೆ ಇವತ್ತು ನಗರಗಳನ್ನು ಕೈಬಿಟ್ಟ ಹಾಗೆ ಕಾಣುತ್ತದೆ. ಕಾರಣವೇನೆಂದರೆ ನಮ್ಮ ಬೆಂಗಳೂರು ನಗರದಲ್ಲಿ ಸುಮಾರು ಕೊಳಚೆ ಪ್ರದೇಶಗಳು ಅಭಿವೃದ್ಧಿಯನ್ನು ಮಾಡುವುದಕ್ಕೆ ಈ ಬಾರಿ ಆಯವ್ಯಯ ಪತ್ರದಲ್ಲಿ ಸುಮಾರು ೨೪ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಎಂದು ವ್ಯಕ್ತಪಡಿಸಿದ್ದಾರೆ. ಇದನ್ನು ತಾವು ಪದೇ ಪದೇ ಹೇಳದೆ ಖಚಿತವಾಗಿ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯಗತ ಮಾಡಿ ಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿಲ್ಲ. ಜನರನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಬದಲಾವಣೆ ಮಾಡುವಾಗ ಅವರಿಗೆ ಯಾವ ನೋವನ್ನುಂಟು ಮಾಡದೆ ಬದಲಾವಣೆ ಯಾವ ರೀತಿ ಮಾಡುತ್ತೀರೋ ಆ ರೀತಿಯಲ್ಲಿ ಯೋಜನೆಗಳನ್ನು ಹಾಕಿಕೊಂಡು ಮುಗಿಸಬೇಕು. ನಾವು ಇವರ ಬಗ್ಗೆ ಸಲಹೆಗಳನ್ನು ಕೊಡುತ್ತಲೇ ಬಂದಿದ್ದೇವೆ. ತಾವು ಮಾತ್ರ ಇದನ್ನು ಕಾರ್ಯರೂಪಕ್ಕೆ ತರಲಿಲ್ಲ. ಇನ್ನು ಬೆಂಗಳೂರು ನಗರದಲ್ಲಿರುವ ಗುಡಿಸಲುಗಳನ್ನು ಧ್ವಂಸ ಮಾಡುವ ಕೆಲಸಕ್ಕೆ ಕೈ ಹಾಕಿದ್ದೀರಿ ನಾವು ಏನಾದರೂ ಅದನ್ನು ಕೇಳಿದರೆ ನಾವು ಉದ್ದೇಶಪೂರ್ವಕವಾಗಿಯೇ ಆ ಕೆಲಸವನ್ನು ಮಾಡುತ್ತಿ ದ್ದೇವೆ ಕಾರಣವೇನೆಂದರೆ ಅವರು ಇರುವ ಜಾಗದಲ್ಲಿ ನಾವು ಇನ್ನೂ ಒಳ್ಳೆಯ ಮನೆಯನ್ನು ಕಟ್ಟಿಕೊಡು ತ್ತೇವೆ ಎಂದು ಅಹಾಕಾರವನ್ನು ಹೇಳುತ್ತೀರಿ ಇನ್ನು ಈ ಬಾರಿಯ ಆಯವ್ಯಯ ಪಟ್ಟಿಯಲ್ಲಿ ನಮ್ಮ ಮಾನ್ಯ ಅರ್ಥ ಮಂತ್ರಿಗಳು ಏನೇನೋ ಹೊಸ ಹೊಸ ಪದಗಳನ್ನು ಹೊಸ ಹೊಸ ವಿಚಾರಗಳನ್ನು ಹಾಕಿದ್ದಾರೆ. ಅವು ಏನೆಂದರೆ ನೇಗಿಲಭಾಗ್ಯ, ಸಾಗರದೀಪ, ಪ್ರಗತಿ ಮುನ್ನಡೆ ಜೂರು ಪಾರು ಸಹಕಾರ ಸಂಘಗಳ ಪ್ರಗತಿ ಜ್ಞಾನ ಮಂದಿರಗಳು ಇತ್ಯಾದಿ ಹೊಸ ಹೊಸ ವಿಚಾರಗಳನ್ನು ಹೇಳಿದ್ದಾರೆ. ಇದರಲ್ಲಿ ಹಿಂದೆ ಕಮ್ಯುನಿಟಿ ರಿಕ್ರಿಯೇಷನ್ ಬಿಲ್ಡಿಂಗ್ಸ್ ಎಂದು ಇತ್ತು. ಗ್ರಾಮಾಂತರ ಪ್ರದೇಶ ಗಳಲ್ಲಿರುವ ಹರಿಜನ ಮತ್ತು ಗಿರಿಜನರು ಕಲ್ಯಾಣ ಮಾಡಿಕೊಳ್ಳುವುದಕ್ಕೆ ಹಾಗೂ ಶುಭ ಕಾರ್ಯಗಳನ್ನು ಮಾಡಿಕೊಳ್ಳುವುದಕ್ಕೆ ಕಟ್ಟಿಸಿಕೊಟ್ಟಿದ್ದರು. ಆದರೆ ಈಗ ಅದನ್ನು ಜ್ಞಾನ ಮಂದಿರಗಳು ಎಂದು ಸಂಸ್ಕೃತದ ಪದಗಳನ್ನು ಬಳಸಿ ಈ ಆಯವ್ಯಯ ಪತ್ರವನ್ನು ತಯಾರು ಮಾಡಿದ್ದಾರೆ ಇದರ ಒಂದು ಕಂಟೆಕ್ಸ್ ಏನಾಗುತ್ತದೆ ಎಂದರೆ ಬಡವರು ಯಾರು ಇದ್ದಾರೆ ಅವರು ಓದುವ ಉದ್ದೇಶಕ್ಕಾಗಿ ಈ ಜ್ಞಾನ ಮಂದಿರಗಳನ್ನು ಕಟ್ಟಿಸಿಕೊಡುತ್ತಾರೆ. ಆದರೆ ಇದರಲ್ಲಿ ಅದರ ಒಂದು ಪ್ರಚಾರವೇ ಇಲ್ಲ. ಅದರ ಒಂದು ಸದ್ದೇ ಇಲ್ಲಿ ಇಲ್ಲ. ಆದರೆ ಅದನ್ನು ನಾವು ಊಹೆ ಮಾಡಿಕೊಳ್ಳಬೇಕು ಎಂದು ಹೇಳಿದರೆ ಇದರಲ್ಲಿ ಯಾವ ತಪ್ಪು ಸಹ ಆಗುವುದಿಲ್ಲ. ನಾವು ಮಾಡತಕ್ಕಂತಹ ಯೋಜನೆಗಳು ಬಲುಸುಲಲಿತವಾಗಿ ನಡೆಯಬೇಕು ಎಂದು ನಾನು ಈ ಸಂದರ್ಭದಲ್ಲಿ ಸೂಚನೆ ಕೊಡುತ್ತೇನೆ. ಇದನ್ನು ಮಾಡಬೇಕಾದರೆ ಸರ್ಕಾರಕ್ಕೆ ಮನಸ್ಸು ಬೇಕು ಅಷ್ಟೇ. ಅದನ್ನು ಬಿಟ್ಟು ತಾವು ಯಾವುದೋ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಯಾವುದೋ ಒಂದು ಪ್ಲಾನ್ ಹಾಕಿಕೊಂಡಿದ್ದೇವೆ ಎಂದು ಹೇಳಿದರೆ ಆಗುವುದಿಲ್ಲ. ನಾವು ನಮ್ಮ ಸರ್ಕಾರದ ಆಡಳಿತ ಸೂತ್ರವನ್ನು ರಿವ್ಯೂ ಮಾಡಬೇಕು. ಫಾಲೋ ಆಫ್ ಮೆಥೆಡ್ಸ್ ಹಾಕಿಕೊಳ್ಳಬೇಕು. ಇವತ್ತು ನಮ್ಮ ಸಮಾಜ ಕಲ್ಯಾಣ ಇಲಾಖೆಯಲ್ಲಿ ಬೇಕಾದಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಈ ಒಂದು ಇಲಾಖೆಗೆ ಸುಮಾರು ಹತ್ತಾರು ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಯಾವ ವಿಧವಾದ ಸಹಾಯ ಕೂಡ ದೊರೆಯುತ್ತಿಲ್ಲ. ಇವತ್ತು ಈ ಒಂದು ಇಲಾಖೆಯ ವತಿಯಿಂದ ಹೆಣ್ಣು ಮಕ್ಕಳಿಗೆ ಟೈಲರಿಂಗ್ ತರಬೇತಿ ಶಾಲೆಗಳನ್ನು ತೆರೆದಿದ್ದಾರೆ. ಈ ಶಾಲೆಯಲ್ಲಿ ಹೆಣ್ಣು ಮಕ್ಕಳು ಕೆಲಸ ಕಲಿತುಕೊಂಡು ಒಂದು ನಾಲ್ಕಾಣೆ ಕಾಸು ಸಂಪಾದನೆ ಮಾಡಿಕೊಳ್ಳಲಿ ಎಂದು ಈ ಒಂದು ತರಬೇತಿ ಶಾಲೆಯನ್ನು ಇಟ್ಟಿದ್ದಾರೆ. ಆದರೆ ಈ ತರಬೇತಿ ಶಾಲೆಗೆ ಸರ್ಕಾರದಿಂದ ಎಷ್ಟು ಮಿಷಿನ್‌ಗಳನ್ನು ಕೊಟ್ಟಿದ್ದೇವೆ. ಇಲ್ಲಿ ತರಬೇತಿ ಕೆಲಸ ಚೆನ್ನಾಗಿ ನಡೆಯುತ್ತದೆಯೋ ಇಲ್ಲವೇ ಎಂಬುದನ್ನು ನೋಡುವವರು ಇಲ್ಲ, ನಾವು ಕೊಟ್ಟಂತಹ ಮಿಷಿನ್ ಅಲ್ಲಿ

ಇದೆಯೋ ಇಲ್ಲವೋ ಯಾರಾದರೂ ಮಾರಿಕೊಂಡು ಮನೆಗೆ ಹೋದರೆ, ಯಾರಾದರೂ ಬಂದು ವಿಚಾರಣೆ ಮಾಡುತ್ತಾರೋ ಎನ್ನುವ ಭಯ ಇರದಿದ್ದರೆ ಹೇಗೆ ? ಆದ್ದರಿಂದ ಫಾಲೋ ಅಪ್ ಮೆಥೆಡ್ ಜಾರಿಗೆ ತರಬೇಕೆಂದು ನಾನು ಹೇಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ತೋಟಿ ತಳವಾರರಿಗೆ ಸುಮಾರು ೭೫ ರೂಪಾಯಿಗಳ ಮಾಶಾಸನವನ್ನು ಕೊಡಬೇಕೆಂದು ಮಾಡಿದ್ದಾರೆ. ಆದರೆ ಇವರು ಬಳಸಿರುವ ಪದ ಎಂದು ಸಹಾನುಭೂತಿ. ಆದರೆ ಹಿಂದೆ ರೆವಿನ್ಯೂ ಇನ್ಸ್‌ಪೆಕ್ಟರ್ಸ್ ಮತ್ತು ಶಾನುಭೋಗರಿಗೆ ಕೊಡುತ್ತಿರುವ ಹಣಕ್ಕೆ ರೆಮ್ಯುನರೇಷನ್ ಎಂದು ಕರೆಯುತ್ತಾರೆ. ಆದರೆ ಹರಿಜನ ಗಿರಿಜನರಿಗೆ ಕೊಡುವ ಹಣಕ್ಕೆ ಸಹಾನುಭೂತಿ ಹಣವೆಂದು ಕರೆಯುತ್ತಾರೆ. ಏತಕ್ಕೆಂದರೆ ಅವನಿಗೆ ಊರ ಕಡೆ ಮನೆ ಇರುವುದಿಲ್ಲ. ಊರ ಹಿಂದೆ ಅವನಿಗೆ ಹೊಲ ಇಲ್ಲ. ಅವನನ್ನು ಕೇಳುವವರು ಇಲ್ಲ. ಆದ್ದರಿಂದ ಅಯ್ಯೋ ಪಾಪ ಎಂದು ಹೇಳಿ ಅವರಿಗೆ ನೀವು ಸಹಾನುಭೂತಿಯಿಂದ ಸಹಾಯ ಮಾಡುತ್ತಿದ್ದೀರಿ. ಆದ್ದರಿಂದ ನಾನು ಹೇಳುವುದೇನೆಂದರೆ ಆ ಪದವನ್ನು ತಾವು ಚೇಂಜ್ ಮಾಡಬಹುದಾಗಿತ್ತು. ಇನ್ನು ಗ್ರಾಮ ಸಹಾಯಕರಿಗೆ ತಿಂಗಳಿಗೆ ೧೦೦ ರೂಪಾಯಿಗಳಿಂದ ೨೨೦ ರೂಪಾಯಿಗಳನ್ನು ಹೆಚ್ಚು ಮಾಡಿದ್ದೇವೆಂದು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಈ ಗ್ರಾಮ ಸಹಾಯಕರಿಗೆ ಕೊಡುತ್ತಿರುವ ೧೦೦ ರೂಪಾಯಿಗಳನ್ನು ೬-೭ ತಿಂಗಳುಗಳಾದರೂ ಕೊಡುವುದಿಲ್ಲ. ಅವರು ಬಂದು ಕೇಳಿದರೆ ಇನ್ನೂ ಅಲಾಟ್‌ಮೆಂಟ್ ಆಗಿಲ್ಲ. ಇನ್ನೂ ದುಡ್ಡು ಬಂದಿಲ್ಲ ಎಂದು ಯಾವುದ್ಯಾವುದೋ ಕಾರಣಗಳನ್ನು ಹೇಳುತ್ತಾರೆ. ಈ ಒಂದು ನೀತಿಯನ್ನು ತಾವು ಅನುಸರಿಸಿದರೆ ನನಗೆ ನಿಮ್ಮನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ಇನ್ನು ನಿರುದ್ಯೋಗಿ ಪದವೀಧರರ ಕೆಲಸವನ್ನು ಮೂರು ತಿಂಗಳ ಕಾಲದವರೆವಿಗೆ ಮುಂದುವರಿಸಲಾಗಿದೆಯೆಂದು ತಾವು ಹೇಳಿದ್ದೀರಿ. ಆದ್ದರಿಂದ ನಾನು ಈ ಸಂದರ್ಭದಲ್ಲಿ ತಮಗೆ ಸಲಹೆ ಮಾಡುವುದೇನೆಂದರೆ ತಾವು ಅವರಿಗೆ ಖಾಯಂ ಉದ್ಯೋಗವನ್ನು ಒದಗಿಸಿಕೊಡುವುದಕ್ಕೆ ಪ್ರಾರಂಭ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೂ ತಾವು ತಮ್ಮ ಆಯವ್ಯಯ ಪತ್ರದಲ್ಲಿ ಏನೇನೊ ಹೊಸ ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ಒಂದನೇಯದಾಗಿ ಫೈಲ್ ಕ್ಲಿಯರೆನ್ಸ್ ಅಂದರೆ ಕಡತಗಳ ಯಜ್ಞ. ಇದನ್ನು ನಾವು ಹಿಂದಿನಿಂದಲೂ ಸಹ ಬಹಳ ಅಂತರಗತವಾಗಿ ನೋಡಿಕೊಂಡು ಬಂದಿದ್ದೇವೆ ಮತ್ತು ನವೀನ ಕಚೇರಿಗಳು ಎಂದು ಹೇಳಿ ಪಾಂಡವರು ಇದ್ದಂತಹ ಕಾಲದಲ್ಲಿ ಮಳೆಯಿಂದ ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ ಈ ರೀತಿಯ ಕಟ್ಟಿಸಿಕೊಡುತ್ತಿದ್ದರು. ಅದೇ ರೀತಿಯಾಗಿ ಹಿಂದಿನ ಕಾಲದಲ್ಲಿ ಮಾನ್ಯ ಶ್ರೀಮಾನ್ ಸಿದ್ಧಗಂಗಾ ಮಠದ ಸ್ವಾಮಿಯವರು ಅಥವಾ ಶ್ರೀಮನ್ ಮಹಾರಾಜರು ಎಲ್ಲಿಗಾದರೂ ಹೋಗುವಾಗ ಅವರ ವಾಹನಕ್ಕೆ ಒಂದು ಕೆಂಪು ದೀಪವಿತ್ತು. ಅದೇ ರೀತಿಯಲ್ಲಿ ಈಗ ತಾವು ಮುಂದುವರಿದಂತೆ ನಮ್ಮ ಕಾರಿನ ಮೇಲೂ ಸಹ ಕೆಂಪು ದೀಪವನ್ನು ಹಾಕಿಕೊಂಡು ತಿರುಗಾಡುತ್ತೀರಿ. ಇದನ್ನು ಒಂದು ಬಾರಿ ಡೇಂಜರಸ್ ಲೈಟ್ ಎಂದು ಸಹ ಕರೆಯುತ್ತಾರೆ. ಅದು ನಿಮಗೆ ಏನಾದರೂ ಡೇಂಜರಸ್ ಆದರೂ ಆಗಬಹುದು. ಇನ್ನು ಅನಿರೀಕ್ಷಿತ ಭೇಟಿ. ಈ ಅನಿರೀಕ್ಷಿತ ಭೇಟಿಯನ್ನು ಮಾನ್ಯ ಮಂತ್ರಿಗಳು ಕೊಟ್ಟಿದ್ದರಿಂದ ಏನಾದರೂ ಅನಿರೀಕ್ಷಿತ ಉಪಯೋಗವಾಯಿತೋ ಇಲ್ಲವೋ ಎಂಬುದನ್ನು ಕಿರು ಹೊತ್ತಿಗೆಯನ್ನು ಮಾಡಿಸಿ ಈ ಸಭೆಯ ಮುಂದೆ ಇಟ್ಟಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಇದರಿಂದ ಇಂತಹ ಅಪಾಯ ತಪ್ಪಿ ಇಂತಹ ಉಪಯೋಗವಾಯಿತು ಎಂದು ನಮಗೆ ಚೆನ್ನಾಗಿ ಗೊತ್ತಾಗುತ್ತಿತ್ತು.

ಇನ್ನು ಸರ್ಕಸ್ ದುರಂತ. ರಾಜ್ಯದಲ್ಲಿ ವಿಷಪೂರಿತ ಮದ್ಯವನ್ನು ಸೇವಿಸಿ ಸಾವಿರಾರು ಜನರು ಸತ್ತರು. ಇವುಗಳನ್ನು ತಾವು ವಿಚಾರಣೆ ಮಾಡಲು ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆಂದು ಜನರಿಗೆ ವಾಗ್ದಾನವನ್ನು ಕೊಡುತ್ತೀರಿ. ಆದರೆ ಇವುಗಳ ವಿಚಾರಣೆಯು ಸಹ ಮುಗಿಯುತ್ತದೆ. ಜನರು ಸ್ವಲ್ಪ ಕಾಲ ಹೋದ ಮೇಲೆ ಅವರು ಮರೆತು ಹೋದ ಹಾಗೆ ನೀವು ಸಹ ಇದನ್ನು ಮರೆತು ಹೋಗುತ್ತೀರಿ. ಆದ್ದರಿಂದ ನಾನು ಹೇಳುವುದೇನೆಂದರೆ ನೀವು ಯಾವುದಾದರೂ ಒಂದು ಕಮಿಟಿಯನ್ನು ಅಥವಾ ಒಂದು ಕಮಿಷನನ್ನು ಮಾಡಿದರೆ ಅವರು ಕೊಟ್ಟಂತಹ ಒಂದು ವರದಿಯನ್ನು ಈ ಸಭೆಯ ಮುಂದೆ ಇಟ್ಟರೆ ದೇಶಕ್ಕೆ ಇಡೀ ರಾಜ್ಯದ ಜನತೆಗೆ ವಿಷಯ ಗೊತ್ತಾಗುತ್ತದೆ. ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಆಯಿತು ಅಂದರೆ ಆಯಿತು, ಹೋಯಿತು ಅಂದರೆ ಹೋಯಿತು ಎಂದು ಬಿಟ್ಟುಬಿಡುವುದು ಸರಿಯಲ್ಲ ಎಂದು ನನ್ನ ಭಾವನೆ. ಇನ್ನು ರೈತರ ಸಮಸ್ಯೆ ವಿಷಯದಲ್ಲಿ ನಾನು ಎಲ್ಲವನ್ನೂ ಹೇಳುವುದಿಲ್ಲ.

ಅಧ್ಯಕ್ಷರು.—ಈಗ ನಾನು ಹೇಳುವುದಾದರೆ. ಹೆಚ್ಚು ಸಮಯ ಮುಖಂಡರುಗಳು ತೆಗೆದ ಕೊಳ್ಳುವುದರಿಂದ ಈ ಪರಿಸ್ಥಿತಿ ಬರುತ್ತದೆ. ನಾನು ತಮಗೆ ಸಮಯವನ್ನು ಏಕೆ ಮೊಟಕು ಮಾಡಬೇಕಾಗುತ್ತದೆ ಅಂದರೆ ಹೆಚ್ಚು ಕಾಲವನ್ನು ಮುಖಂಡರುಗಳು ತೆಗೆದುಕೊಳ್ಳುವುದರಿಂದ ಈ ರೀತಿ ಆಗುತ್ತದೆ. ವಿರೋಧ ಪಕ್ಷದವರಿಗೆ ಸುಮಾರು ೧೧ ಗಂಟೆ ಕೊಟ್ಟು ಆಗಿದೆ. ಇನ್ನೂ ತಾವು ಹೇಳುತ್ತಾ ಹೋದರೆ ಕಷ್ಟವಾಗುತ್ತದೆ.

ಶ್ರೀ ಕೆ. ಪ್ರಭಾಕರ್.—ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ೧೦-೧೨ ನಿಮಿಷ ಆಗಿರಬಹುದು.

ಅಧ್ಯಕ್ಷರು.—ತಾವು ಗಡಿಯಾರದ ಕಡೆ ನೋಡುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ನಾನು ರೈತರ ಸಮಸ್ಯೆಗಳ ವಿಷಯದಲ್ಲಿ ನೊಂದು ಹೇಳಬೇಕಾಗುತ್ತದೆ. ಇಲ್ಲಿರತಕ್ಕ ಅನೇಕ ಮಂತ್ರಿಗಳು ತರುಣರಿದ್ದಾರೆ. ನಾವೇನೂ ಭಾಷಣದಲ್ಲಿ ಕಡಿಮೆ ಇಲ್ಲ ಎಂದು ಹೇಳುತ್ತಾರೆ. ಪರದೇಶದಿಂದ ಬಂದು ಇಲ್ಲಿರುವವರು ನಮ್ಮ ದೇಶದವರು ಎಲ್ಲಾ ವಿಷಯ ಗೊತ್ತು ಎಂದು ಹೇಳುತ್ತಾರೆ. ನನಗನ್ನಿಸುತ್ತದೆ, ರೈತರ ಸಮಸ್ಯೆ ಏನು ಎನ್ನುವುದನ್ನು ಸರ್ಕಾರ ಸಂಪೂರ್ಣವಾಗಿ ಅರ್ಥಮಾಡಿಕೊಂಡಿಲ್ಲ ಎನ್ನತಕ್ಕ ಶಂಕೆ ನನಗೆ ಇದೆ ಇದಕ್ಕೆ ಕಾರಣವೇನೆಂದರೆ. ರೈತರ ಸಮಸ್ಯೆ ಬೃಹದ ಕಾರವಾಗಿದ್ದರೂ ಕೂಡ ಅವರಿಗೆ ಸಹಾಯ ಮಾಡಬೇಕಾದ್ದು ಎರಡು. ಮೂರು ವಿಚಾರ ಇದೆ ಅದನ್ನು ಸುಲಲಿತವಾಗಿ ತಿಳಿದುಕೊಂಡು ಸಹಾಯ ಮಾಡುತ್ತಾ ಇಲ್ಲ ಎನ್ನುವ ಶಂಕೆ ಇದೆ. ಇವತ್ತು ಲಕ್ಷ ಅರ್ಜಿಗಳು ಬಂದಿದ್ದು ೧೦-೧೨ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುವುದಕ್ಕೆ ಆಗುತ್ತಾ ಇತ್ತು. ಸರ್ಕಾರ ಹಿಂದು ಮುಂದು ನೋಡದೆ ವಾಗ್ದಾನ ಮಾಡಿದ್ದರಿಂದ ಇಷ್ಟು ಸಾಲ ತೀರುವಳಿಗೆ ಒಪ್ಪಬೇಕು ಎಂದು ಸರ್ಕಾರಕ್ಕೆ ಗೊತ್ತಿರಲಿಲ್ಲ ಬಡವರು ಏನು ಮಾಡಿದರು ಅಂದರೆ, ಸರ್ಕಾರ ಎನ್ನುವುದು ದೊರೆ ಅಪ್ಪಣೆಯಂತೆ. ಅವರು ಹೇಳಿದಂತೆ ನಡೆದುಕೊಳ್ಳುತ್ತಾರೆ. ಎಂದು ಸಾಲ ಮಜಾ ಮಾಡಿ ಎಂದು ಅರ್ಜಿ ಹಾಕಿ, ಪರದಾಡಿ ಎಲ್ಲಾ ಕೊಟ್ಟರು. ೧೨ ಕೋಟಿ ರೂಪಾಯಿ ಎಂದು ಮನವರಿಕೆಯಾದ ಕೂಡಲೆ ಎಷ್ಟೋ ವಿಚಾರಗಳಿಗೆ ಹಣ ಖರ್ಚು ಮಾಡುತ್ತೇವೆ, ಈ ೧೨ ಕೋಟಿ ಬಿಟ್ಟು ಬಿಟ್ಟು ಇನ್ನು ಮುಂದೆ ಸಾಲದಲ್ಲಿ ಎಚ್ಚರವಾಗಿರಿ ಎಂದು ಹೇಳಿದ್ದರೆ ಮೆಚ್ಚಬಹುದಾಗಿತ್ತು. ಆ ರೀತಿ ಮಾಡದೇ ಇರುವುದರಿಂದ ಕೊಟ್ಟ ಮಾತನ್ನು ಬಿಟ್ಟುಬಿಟ್ಟಿದ್ದಾರೆ. ಅದು ಜನಗಳ ಮನಸ್ಸಿನಲ್ಲಿ ಅಪಘಾತವಾಯಿತು. ಮಾನ್ಯ ಶ್ರೀಕಂಠಯ್ಯನವರು ನನಗೆ ಕಾಣುತ್ತಾ ಇಲ್ಲ. ಅವರ ಕಡೆಗೆ ನೋಡದೆ ಇರಲಾರೆ. ಅವರು ರೈತರ ಪರವಾಗಿ ಉತ್ತರವನ್ನು ಕೊಡುವಾಗ ಕೋಟಿ. ಲಕ್ಷಗಟ್ಟಲೆ ಸಾಲವನ್ನು ಮನ್ನಾ ಮಾಡಿದ್ದೇವೆ ಎಂದು ಹೇಳುತ್ತಾರೆ. ಅವರು ಇದನ್ನು ಸಂಪೂರ್ಣವಾಗಿ ಕೂಲಂಕಷವಾಗಿ ನೋಡಿ, ಸರ್ಕಾರದ ಮಟ್ಟದಲ್ಲಿ ಇದನ್ನು ವಿಭಜನೆ ಮಾಡಿ ೧೨ ಕೋಟಿ ಸಾಲ ಏನಿದೆ ಅದನ್ನು ಮನ್ನಾ ಮಾಡಿ ಯಾವ ಯಾವ ರೂಪದಲ್ಲಿ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಬರುವುದರ ಜೊತೆಗೆ ನೊಂದ ರೈತರಿಗೆ ಹೆಚ್ಚಿನ ಉಪಕಾರವಾಗುವ ರೀತಿಯಲ್ಲಿ ಈ ಸಮಸ್ಯೆಯನ್ನು ಪರಿಶೀಲನೆ ಮಾಡಬೇಕು ಎಂದು ನಾನು ಸಲಹೆ ಮಾಡುತ್ತಾ ಇದ್ದೇನೆ. ಹಿಂದೆ ಬಂಗಾರಪ್ಪ ಸಮಿತಿ ರಿಪೋರ್ಟ್ ಕೊಟ್ಟಿತ್ತು, ಆಗ ಬಂಗಾರಪ್ಪನವರು ಮಂತ್ರಿಗಳಾಗಿದ್ದರು. ಬಂಗಾರಪ್ಪ ಸಮಿತಿಯ ಸಲಹೆಗಳು ನೀರು ಪಾಲು ಆಗಿದೆಯೇ ಎಂದು ಕೇಳಿದ ಸಂದರ್ಭದಲ್ಲಿ ಅವನ್ನು ಕೂಲಂಕುಷವಾಗಿ ನೋಡಿ ಕಾರ್ಯಗತ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಒಂದು ವಾಗ್ದಾನ ಕೊಟ್ಟಿದ್ದರು. ಆದರೆ ಅದರ ಸ್ಥಿತಿ ಏನಾಗಿದೆ. ಅದು ಎತ್ತ ಹೋಯಿತು ಅಂದರೆ ಇಂಗ್ಲೀಷಿನಲ್ಲಿ ಬಂಕಂ ಎಂದು ಹೇಳುವ ರೀತಿ ಆಗಿಹೋಗಿದೆ. ಅದನ್ನು ಕೈಬಿಡದೆ ರೈತರ ಸಮಸ್ಯೆಯನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಬೇಕು. ನಮ್ಮ ಹಣಕಾಸಿನ ಮಂತ್ರಿಗಳು ದುಡ್ಡನ್ನು ಹತ್ತೆ ಮಾಡುವುದರಲ್ಲಿಲ್ಲ ರಿಸೋರ್ಸ್‌ಫುಲ್ ಮೈಂಡ್ ಎಂದು ಹೇಳುತ್ತಾರೆ, ಆದುದರಿಂದ ರೈತರ ಗೋಳನ್ನು ಪರಿಹಾರ ಮಾಡಿ, ಸಾಕಷ್ಟು ಹಣವನ್ನು ಒದಗಿಸಿಕೊಡಿ, ಎಂದು ಅವರನ್ನು ನಾನು ಕೇಳಿಕೊಳ್ಳುತ್ತೇನೆ. ತುಂಬು ಹೃದಯದ ಮನಸ್ಸು ಮಾಡಿ. ರೈತರ ಕಷ್ಟವನ್ನು ಪರಿಹಾರ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಂಪೂರ್ಣವಾಗಿ ಮನಸ್ಸು ಮಾಡಿ ಇದಕ್ಕೆ ಒಂದು ಸಮಿತಿ ಮಾಡಿ ಎಂದು ನಾನು ಹೇಳುವುದಕ್ಕಾಗುತ್ತಿಲ್ಲ. ಅದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ, ಪರಿಹಾರ ಮಾಡಿಕೊಡಬೇಕು ಎಂದು ನಾನು ಸಲಹೆ ಮಾಡುತ್ತಾ ಇದ್ದೇನೆ.

ಕಡೆಯದಾಗಿ, ಒಂದು ಮಾತನ್ನು ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆಯುತ್ತಾ ಇರತಕ್ಕಂಥ ಪ್ರತಿಯೊಂದು ಯೋಜನೆಯನ್ನೂ ಕೂಡ ಫಾಲೋಅಪ್ ಮೆತೆಡ್ ಇಟ್ಟುಕೊಳ್ಳಬೇಕು, ಕೊಡುವುದೇ ಹಣ ಕಡಿಮೆ. ಆ ಹಣವನ್ನು ಲ್ಯಾಪ್ಸ್ ಆಗದಂತೆ ನೋಡಿಕೊಂಡು ಒಂದು ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಎಂದು ಹೇಳುತ್ತೇನೆ. ಇನ್ನು ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಬಹಳ ಶೋಚನೀಯವಾಗಿ ನಾನು ಹೇಳಬೇಕಾಗುತ್ತದೆ. ಹೈಕೋರ್ಟಿನಲ್ಲಿ ಕೆಲಸ ಕೇಳಿದರೆ ಆಚೆಗೆ ಹೋಗು ಎಂದು ಹೇಳುತ್ತಾರೆ. ಸುಮ್ಮನೆ ಇದ್ದರೆ ಹೊಟ್ಟೆಗಿಲ್ಲದೆ ಆಗುತ್ತದೆ, ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ, ಅವರು ಸತ್ಯಾಗ್ರಹ ಕೂತಿದ್ದಾರೆ. ಮೊನ್ನೆ ೨೭ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ರೆಗ್ಯುಲರೈಸ್ ಮಾಡಿಕೊಡಿ ಎಂದು ಹೇಳಿದರೆ ಸರ್ಕಾರದವರು ಯಾವ ವರ್ತನೆಯನ್ನು ತೋರಿಸಿದರೋ ಅದು ಹೃದಯವಿದ್ರಾವಕವಾದಂಥ ವಿಚಾರ. ೬ ಸಾವಿರ, ೭ ಸಾವಿರ, ೮ ಸಾವಿರ, ೫ ಸಾವಿರ, ೩ ಸಾವಿರ – ಹೀಗೆ ಲೋಕಲ್ ಅಪಾಯಿಂಟ್‌ಮೆಂಟ್ಸ್ ಮಾಡುವುದು ರೆಗ್ಯುಲರೈಸ್ ಮಾಡಿ ಎಂದು ಸ್ಟ್ಯಾಂಪ್ ಹಾಕುವುದು. ಅದರಲ್ಲಿ ೧೮ ಪರ್ಸೆಂಟ್‌ನವರಿಗೆ ಅನ್ಯಾಯವಾಯಿತು ಅಂದರೆ ಕೇಳಿಸಿದರೂ ಕೇಳಿಸದೇ ಇದ್ದಂಥ ಕಾಲ ಇತ್ತು, ನಾವು ನೋಡಿದ್ದೇವೆ. ಹೊಸ ಪದ್ಧತಿಯಲ್ಲಿ ಹರಿಜನರಿಗೆ ಬರೀ ೨೦ ಎಂದು ಹೇಳಿದ್ದಾರೆ. ಯಾರಿಗೂ ಲೋಕಲ್ ಅಪಾಯಿಂಟ್‌ಮೆಂಟ್ ಕೊಟ್ಟು ರೆಗ್ಯುಲರೈಸ್ ಮಾಡಬೇಡವೇನೋ ಎಂದು ವಜ್ರಮುಷ್ಟಿ ತತ್ವ ಅನುಸರಿಸುತ್ತಾರೆ. ವಜ್ರಮುಷ್ಟಿ ತತ್ವ ಅಂದರೆ ಹರಿಜನ-ಗಿರಿಜನರಿಗೆ ಅನ್ಯಾಯವಾಯಿತು ಬೇರೆಯವರು ಎಷ್ಟು ಜನರನ್ನು ಲೋಕಲ್ ಅಪಾಯಿಂಟ್‌ಮೆಂಟ್‌ಗೆ ತೆಗೆದುಕೊಂಡಿದ್ದೀರಿ ಎನ್ನುವುದನ್ನು ನೀವು ಉತ್ತರ ಕೊಡುವಾಗ ಹೇಳಬೇಕು. ಈ ಟೀಕೆಗೆ ಸರ್ಕಾರದಿಂದ ಉತ್ತರ ಸಿಕ್ಕಿಲ್ಲ. ಏನೆಂದರೆ, ನ್ಯಾಯಪೀಠ ಜುಡಿಷಿಯರಿಯೊಳಗೆ ನ್ಯಾಯ ಇಲ್ಲ ಅಂದರೆ ಪ್ರಪಂಚದಲ್ಲಿ ನ್ಯಾಯದ ಸುದ್ದಿ ಏಕೆ. ಇದು ಹೇಗೆ ಆಗುತ್ತದೆ ಅಂದರೆ, ಒಬ್ಬರು ತಿಳಿದವರು ಹೇಳುತ್ತಿದ್ದರು. ಜಸ್ಟೀಸ್ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ತಮ್ಮ ಮೂಗಿನ ನೇರಕ್ಕೆ ಕಾನೂನು ಮಾಡಿಕೊಂಡು ಗವರ್ನರ್‌ರಿಂದ ಸೈನ್ ಮಾಡಿಸಿಕೊಂಡು ಬಿಡುತ್ತಾರಂತೆ, ನ್ಯಾಯಮೂರ್ತಿಗಳು ಅನ್ಯಾಯ ಎಲ್ಲಿ ಮಾಡುತ್ತಾರೆ ಎಂದು ಅವರು ರುಜು ಹಾಕುತ್ತಾರಂತೆ. This application cannot be rectified. What a beautiful explanation in doing utmost injustice to the down-trodden people. ಇದು ಅಲ್ಲಿ ಹಾಗೆ ಇದೆ, ಇಲ್ಲಿ ಹೀಗೆ ಇದೆ. ಹೀಗಾದರೆ ಗೆದ್ದವರು ಯಾರು ಸೋತವರು ಯಾರು, ಸೋತವರು ಬಡವರು, ಹರಿಜನರು ಗೆದ್ದವರು ನ್ಯಾಯ ಹೇಳುವವರು, ಅನ್ಯಾಯ ಮಾಡುವವರು ಎಂದು ಇಷ್ಟು ಹೇಳಿ, ತಮ್ಮ ಕಾಲದಲ್ಲಾದರೂ ಇದನ್ನು ಸರಿಮಾಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ)—ಸನ್ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ, ತಾವು ನನಗೆ ಸಮಯ ಕೊಟ್ಟಿದ್ದಕ್ಕೋಸ್ಕರ ತಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಮಾನ್ಯ ಸ್ನೇಹಿತರು ಆಯವ್ಯಯದ ಮೇಲೆ ಸಾಕಷ್ಟು ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಅವರು ಮಾತನಾಡಿರತಕ್ಕ ವಿಚಾರವನ್ನು ನಾನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಬಿಟ್ಟುಹೋಗಿರತಕ್ಕ ವಿಚಾರವನ್ನು ತಮ್ಮ ಗಮನಕ್ಕೆ ಮತ್ತು ಸಭೆಯ ಗಮನಕ್ಕೆ ತರಬೇಕು ಎಂದು ಇದ್ದೇನೆ. ಬಹುಶಃ ಮಾನ್ಯ ಅರ್ಥಮಂತ್ರಿಗಳಾದ ವೀರಪ್ಪಮೊಯ್ಲಿಯವರು ಕೊಟ್ಟಿರತಕ್ಕ ಈ ಆಯವ್ಯಯ ಕೊನೆಯದು ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ, ೧೯೮೨–೮೩ರ ಆಯವ್ಯಯದಲ್ಲಿ ಅವರು ಚುನಾವಣೆ ಬಗ್ಗೆ ಏನಾದರೂ ಪ್ರಸ್ತಾಪ ಮಾಡುತ್ತಾರೆ. ಚುನಾವಣೆಗೆ ಹಣ ತೆಗೆದಿಟ್ಟಿರುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಇದಕ್ಕೆ ಕಾರಣವೇನೆಂದರೆ, ಕಳೆದ ವರ್ಷ ನಾವು ಸಿಟಿ ಲೆಜಿಸ್ಲೇಟರ್ಸ್ ಮಾನ್ಯ ಮುಖ್ಯಮಂತ್ರಿಗಳನ್ನು ನೋಡಿದಾಗ ಅವರು ಮೇ ತಿಂಗಳಲ್ಲಿ ಚುನಾವಣೆ ಮಾಡೇ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಆಡಿದ್ದರು. ಇನ್ನೂ ಮೇ ತಿಂಗಳು ಬಂದಿಲ್ಲ. ಅದಾದ ನಂತರ ಹಲವಾರು ಬಾರಿ ಈ ರಾಜ್ಯದಲ್ಲಿ ಈ ವರ್ಷ ಚುನಾವಣೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಕನ್ನಡಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳಲ್ಲಿ ಮೇ ೨೩ ರಂದು ವಿಧಾನಸಭೆಗೆ ಚುನಾವಣೆಯಾಗುತ್ತದೆಂದು ಬಂದಿದೆ. ಚುನಾವಣೆಯಾದರೂ ಪರವಾಗಿಲ್ಲ ಚುನಾವಣೆಯಾಗತಕ್ಕ ವಿಚಾರದಲ್ಲಿ ನಾವು ಹಿಂಜರಿಯಬೇಕಾಗಿಲ್ಲ. ಆದರೆ ಚುನಾವಣೆಗೆ ಕೆಲವು ಸುಧಾರಣೆಗಳಾಗಬೇಕು ಎಂದು ಒಪ್ಪಿದ್ದಾರೆ. ಇದು ಪಾರ್ಲಿಮೆಂಟ್‌ನಲ್ಲೂ ಕೂಡ ಬಂದಿದೆ. ಏನೆಂದರೆ, ಎಲೆಕ್ಟೋರೋಲ್ ರಿಫಾರ್ಮ್ಸ್ ಆಗಬೇಕು ಎನ್ನುವುದು. ಇದಕ್ಕೆ ಸಂಬಂಧಪಟ್ಟಹಾಗೆ ಒಂದಿಷ್ಟು ಹಣವನ್ನು ತೆಗೆದಿಟ್ಟಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ.

ನಾನಾದರೂ ಒಂದು ಮಾತನ್ನು ಇವರಲ್ಲಿ ಕೇಳಬೇಕು ಎಂದು ಇದ್ದೇನೆ. ಏನೆಂದರೆ, ಪದೇ ಪದೇ ಈ ರೀತಿ ಇನ್ನೇನು ಚುನಾವಣೆ ಬರುತ್ತದೆ, ಬರುತ್ತದೆ ಎಂದು ಮಾತನಾಡುವುದರ ಕಾರಣವೇನು, ಇದರ ಹಿನ್ನೆಲೆ ಏನು.

೧೦–೩೦ ಎ.ಎಂ.

ಶ್ರೀ ಆರ್. ಗುಂಡೂರಾವ್.—ಯಾರು ಹೇಳಿದ್ದಾರೆ.

ಶ್ರೀ ಪಿ. ರಾಮ್‌ದೇವ್.— ಸಿಟಿ ಲೆಜಿಸ್ಲೇಚರ್ಸ್ ಎಲ್ಲಾ ತಮ್ಮನ್ನು ಒಂದು ಸಾರಿಭೆಟ್ಟಿ ಮಾಡಿದ್ದಾಗ ತಾವು ಹೇಳಿದ್ದೀರಿ.

ಶ್ರೀ ಆರ್. ಗುಂಡೂರಾವ್.—ತಮ್ಮ ತಲೆಯೊಳಗೆ ಕೂತಿರುವ ಭ್ರಮೆ ಅದು.

ಶ್ರೀ ಪಿ ರಾಮ್‌ದೇವ್.—ಇಲ್ಲ ಸ್ವಾಮಿ, ಮೊನ್ನೆ ದಿವಸ ೨೬–೬–೮೨ರ ಪತ್ರಿಕೆಯಲ್ಲಿ ವಿಧಾನ ಸಭಾ ಚುನಾವಣೆ ಎಂದು ಪತ್ರಿಕೆಗಳಲ್ಲಿ ಬಂದಿದೆ ಅದು ದೆಹಲಿಯಿಂದ ಬಂದಿರತಕ್ಕ ವರ್ತಮಾನ.

ಶ್ರೀ ಆರ್. ಗುಂಡೂರಾವ್.—ಸ್ವಾಮಿ, ಇದಕ್ಕೇನು ಹೇಳಬೇಕು ನಾನು ?

ಶ್ರೀ ಪಿ. ರಾಮ್‌ದೇವ್.— ರಹಸ್ಯವಾಗಿ ಏನಾದರೂ ಚುನಾವಣೆಯನ್ನು ಕೂಡಲೇ ನಡೆಸಿ ಬಿಡಬೇಕೆಂದು ಏನಾದರೂ ತೀರ್ಮಾನ ಮಾಡಿದ್ದೀರಾ ?

ಶ್ರೀ ಆರ್. ಗುಂಡೂರಾವ್.— ಅಧ್ಯಕ್ಷರೇ, ಚುನಾವಣೆಯಲ್ಲಿ ಈ ದೇಶದಲ್ಲಿ ಈ ರಾಜ್ಯದಲ್ಲಿ ಆಗಬೇಕೆಂದರೆ ಇಬ್ಬರು ತೀರ್ಮಾನ ಮಾಡಬೇಕು. ಒಬ್ಬರು ಪ್ರಧಾನ ಮಂತ್ರಿಗಳು ಇಲ್ಲವೇ ಮುಖ್ಯ ಮಂತ್ರಿಗಳು. ನಮ್ಮ ರಾಜ್ಯದಲ್ಲಿ ಚುನಾವಣೆ ನಡೆಸುವ ಸನ್ನಿವೇಶವೇ ಉಂಟಾಗಿಲ್ಲ, ಚುನಾವಣೆ ನಡೆಸುವುದಕ್ಕೆ ನಮ್ಮಲ್ಲಿ ಏನಾದರೂ ಮೆಜಾರಿಟಿ ಕಡಿಮೆಯಾಗಿದೆಯೇ ? ಅಥವಾ ಏನಾದರೂ ಲಾ ಅಂಡ್ ಆರ್ಡರ್‌ನ ತೊಂದರೆಯಾಗಿದೆಯೇ ? ಏತಕ್ಕೋಸ್ಕರ ನಮ್ಮ ರಾಜ್ಯದಲ್ಲಿ ಚುನಾವಣೆಯಾಗಬೇಕು ? ಯಾರು ಹೇಳಿದ್ದಾರೆ ಚುನಾವಣೆಯಾಗಬೇಕೆಂದು ? ಒಂದು ಸಾರಿ ಪ್ರಧಾನ ಮಂತ್ರಿಗಳವರನ್ನೇ ಚುನಾವಣೆ ಯಾವಾಗ ಆಗುತ್ತದೆಂದು ಕೇಳಿದಾಗ ಅವರೇ ಉತ್ತರ ಕೊಟ್ಟಿದ್ದಾರೆ ನಿಮ್ಮ ಮುಖ್ಯ ಮಂತ್ರಿಯವರನ್ನೇ ಕೇಳಿ ಎಂದು ಹೀಗಿರುವಾಗ ಚುನಾವಣೆ ನಡೆಸಬೇಕೇ ಬಿಡಬೇಕೇ ಎನ್ನುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದವನು ನಾನು. ನಾನು ತಮಗೆ ಸ್ಪಷ್ಟವಾಗಿ ಹೇಳುತ್ತೇನೆ ಚುನಾವಣೆಯಾಗುವುದಿಲ್ಲ. ನೀವು ಏತಕ್ಕೋಸ್ಕರವಾಗಿ ಯೋಚನೆ ಮಾಡುತ್ತೀರಾ ? ಸುಮ್ಮನೆ ಇವರಲ್ಲಿ ಏನೋ ಬರೆದಿದ್ದಾರೆ, ಬಂದಿದೆ, ಹೇಳಿದೆ, ಕೇಳಿದೆ ಅಂತಾ ಎಲ್ಲಾ ಇಲ್ಲಿಯೇ ಕುಳಿತುಕೊಂಡು ದೆಹಲಿಯಿಂದ ಬಂದ ಸುದ್ದಿ, ದೆಹಲಿ ವರ್ತಮಾನ ಎಂದು ಬರೆಯುತ್ತಿದ್ದಾರೆ ಅಷ್ಟೆ ! ದೆಹಲಿಯ ವರ್ತಮಾನ ಆಗಿದ್ದರೆ ಪರವಾಗಿಲ್ಲ ದೆಹಲಿಯಿಂದ ಎಲೆಕ್ಷನ್ ಕಮೀಷನರ್‌ರವರಿಂದ ವರ್ತಮಾನ ಬಂದಿದೆಯೇ ? ಇಲ್ಲ ಇನ್ನು ದೆಹಲಿಯಿಂದ ಯಾರಿಂದ ವರ್ತಮಾನ ಬಂದಿದೆ ? ಆದ್ದರಿಂದ ಅಧಿಕೃತವಾಗಿ ಯಾರಾದರೂ ಹೇಳಿದ್ದರೆ ಒಪ್ಪಿಕೊಳ್ಳೋಣ. ಅಕಸ್ಮಾತ್ ನಾನೇ ಏನಾದರೂ ಎಲ್ಲಿಯಾದರೂ ಹೋಗಿ ಹೇಳಿದ್ದರೆ ಇವತ್ತು ಈ ಸದನದಲ್ಲಿಯೂ ಕೂಡ ಹಾಗೆ ಚುನಾವಣೆಯಾಗುತ್ತದೆಂದು ಒಪ್ಪಿಕೊಳ್ಳುತ್ತಿದ್ದೆ. ಆ ರೀತಿ ಯಾರೂ ಹೇಳದೆ ಸುಮ್ಮನೆ ಯಾರೋ ಹೇಳುತ್ತಾರೆ ಎಂದರೆ ಹೇಗೆ ಚುನಾವಣೆಯಾಗುತ್ತದೆ ? ಚುನಾವಣೆಯನ್ನು ನಡೆಸಬೇಕಾಗಿದ್ದರೆ ಅದಕ್ಕೆ ಕಾರಣಗಳನ್ನಿಟ್ಟುಕೊಂಡೇ ನಾನು ರಾಜ್ಯಪಾಲರ ಹತ್ತಿರ ಹೋಗಿ ಇಂಥಾ ಕಾರಣಗಳಿಗೋಸ್ಕರವಾಗಿ ಡಿಸಾಲ್ವ್ ಮಾಡಿ ಎಂದು ಹೇಳಬಹುದು. ಯಾವ ಕಾರಣವಿದೆ ? ನಮಗೇನು ಮೆಜಾರಿಟಿ ಕಡಿಮೆಯಾಗಿದೆಯೇ ? ಅಥವಾ ಮೊನ್ನೆ ನಡೆದಂಥಾ ರಾಜ್ಯ ಸಭಾ ಚುನಾವಣೆಯಲ್ಲಿ ಒಂದು ಸೀಟು ಏನಾದರೂ ಕಡಿಮೆ ಬಂತೇ ? ಯಾವ ಕಾರಣ ಕೊಟ್ಟು ಚುನಾವಣೆ ನಡೆಸಬೇಕೆಂದು ಹೇಳಲಿ ?

ಶ್ರೀ ಎಚ್. ಗಂಗಾಧರನ್.—ನಾರ್ಥರನ್ ಸ್ಟೇಟ್‌ನಲ್ಲಿ ಚುನಾವಣೆ ನಡೆಯಲಿಲ್ಲವೇ ?

ಶ್ರೀ ಬಿ. ಮೈಕಲ್ ಫರ್ನಾಂಡೀಸ್.— ಆಂಧ್ರದಲ್ಲಿ ಅಂಜಯ್ಯನವರು ಹೋಗುತ್ತಾರೆಂದು ಸುದ್ದಿ ಬಂದಿತ್ತು ಅದೇ ರೀತಿ ಅವರು ಹೋಗಲಿಲ್ಲವೇ ? ಹಾಗೆ ಯಾವಾಗ ನೀವು ಇರುತ್ತೀರೋ ಇಲ್ಲ ಹೋಗುತ್ತೀರೋ ಎಂದು ಹೇಳುವುದಕ್ಕಾಗುವುದಿಲ್ಲ. ಏತಕ್ಕೆ ಹೇಳುತ್ತಿದ್ದೇನೆಂದರೆ ನಿಮಗೆ ಪ್ರಜಾ ಪ್ರಭುತ್ವದಲ್ಲಿನ ನಿಯಮಗಳನ್ನೇ ಪಾಲಿಸುತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ಶ್ರೀ ಅಂಜಯ್ಯರವರ ವಿಷಯ ಬಿಡಿ ಅದು ಪಕ್ಷದ ವಿಚಾರ, ಚುನಾವಣೆಗೂ ಅದಕ್ಕೂ ಏನು ಸಂಬಂಧ ? ಕೃಷ್ಣ ಪರಮಾತ್ಮ ಹುಟ್ಟುತ್ತಾನೆಂದು ಕಂಸ ಹುಟ್ಟಿದ ಎಲ್ಲಾ ಮಕ್ಕಳ ತಲೆಯನ್ನು ತೆಗೆಸುತ್ತಿದ್ದನಂತೆ ಹಾಗೆ ನಿಮಗೆ ಭ್ರಮೆ ಬಂದು ಯಾವಾಗ ಚುನಾವಣೆ ? ಯಾವಾಗ ಚುನಾವಣೆ ಎಂದು ಕೇಳುತ್ತಿದ್ದೀರಿ, ಈಗ ವಿಧಾನ ಸಭಾಧಿವೇಶನ ೧೫ ದಿವಸದಿಂದಲೂ ನಡೆಯುತ್ತಿದೆ ನನ್ನನ್ನು ನೀವು ಕೇಳಿದ್ದರೆ ನಾನು ಸ್ಪಷ್ಟವಾಗಿಯೇ ಹೇಳುತ್ತಿದ್ದೆ, ಒಂದು ವೇಳೆ ಯಾವುದೇ ಕಾರಣದಿಂದ ಚುನಾವಣೆ ನಡೆಯಬೇಕೆಂದು ಹೇಳಿದರೆ ನಿಮಗೆ ಯಾವಾಗ ಚುನಾವಣೆ ಇದೆ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ. ಆದುದರಿಂದ ಮಾನ್ಯ ಗಂಗಾಧರನ್‌ರವರು ಮೊನ್ನೆ ನಡೆದ ರಾಜ್ಯ ಸಭಾ ಸೀಟ್‌ಗಾಗಿ ಬಹಳ ಪ್ರಯತ್ನ ಮಾಡಿದರು ನಡೆಯಲಿಲ್ಲ. ಈ ರೀತಿ ಗಾಬರಿ ಹುಟ್ಟಿಸುವುದರಿಂದ ನಿಮಗೆ ಏನೂ ಲಾಭವಾಗುವುದಿಲ್ಲ. ಪಾಪ ಶ್ರೀ ಗಂಗಾಧರನ್‌ರವರು ಪುನಃ ತೋರಿಸಿಕೊಂಡರು ಇರುವ ೩—೪ ಜನರಲ್ಲಿ ಒಂದು ಹೋಯಿತು.

ಶ್ರೀ ಹೆಚ್. ಗಂಗಾಧರನ್.—ನಮ್ಮದು ಹೋಗಿರುವುದು ಇರಲಿ ನಿಮ್ಮದು ಹೇಳಿ.

ಶ್ರೀ ಆರ್. ಗುಂಡೂರಾವ್.—ಇರುವ ೩—೪ ಜನರೇ ನಿಮ್ಮ ಕಡೆಗೆ ಓಟು ಕೊಡಲಿಲ್ಲ. ಕೊನೆಯವರೆಗೂ ವ್ಯಾಪಾರ ಮಾಡುತ್ತಿದ್ದೀರಿ, ಲಾಸ್ಟನಲ್ಲಿ ವ್ಯಾಪಾರ ಗಿಟ್ಟಲಿಲ್ಲವೆಂದು ಏನೇನು ಮಾಡಿದಿರಿ.

ಶ್ರೀ ಎಚ್. ಗಂಗಾಧರನ್.—ನಿಮ್ಮದು ಹೇಳಿ ೪೭ಕ್ಕೆ ೪೨ ಬಂತಲ್ಲಾ ?...

ಶ್ರೀ ಆರ್. ಗುಂಡೂರಾವ್.—ಒಬ್ಬರಿಗೆ ೫೪ ಬಂತು ಇನ್ನೊಬ್ಬರಿಗೆ ೪೦ ಬಂತು ನಿಮಗೇನೂ ಬರಲಿಲ್ಲವಲ್ಲಾ...ನಮ್ಮ ಬುಟ್ಟಿಯೊಳಕ್ಕೇ ಬಂತು. ೫೪, ೪೦ ಬಂದಿದೆ ವ್ಯತ್ಯಾಸ ಏನೂ ಇಲ್ಲ ನಿಮ್ಮ ಬುಟ್ಟಿಯೊಳಗೇನೂ ಬರಲಿಲ್ಲವಲ್ಲಾ. ಅಂತೂ ಕೊನೆಯುವರೆಗೂ ವ್ಯಾಪಾರ ಮಾಡುತ್ತಿದ್ದೀರಿ ಗಿಟ್ಟಲಿಲ್ಲಾ.

ಶ್ರೀ ಎಚ್. ಗಂಗಾಧರನ್.—ಏನೂ ಮಾಡಿಲ್ಲ ಬಿಡಿ ಏತಕ್ಕೆ ಸುಮ್ಮನೇ ಹೇಳುತ್ತೀರಾ...

ಶ್ರೀ ಎಚ್. ಎಲ್. ತಿಮ್ಮೇಗೌಡ.—ದೆಹಲಿಯಿಂದ ವರ್ತಮಾನಗಳು ಬರುತ್ತಿದೆ, ಆಗಬಹುದು ಚುನಾವಣೆಗಳು ನಡೆಯಬಹುದೆಂದು ಬರುತ್ತಿದೆ ಇದನ್ನು ನೋಡಿದರೆ ನಮಗೆ ಸಂಶಯ ಬರುತ್ತಿದೆ. ಕಾಂಗ್ರೆಸ್ (ಐ) ಪಾರ್ಟಿಯೊಳಗೆ ಏನಾದರೂ ಹೆಚ್ಚು ಕಡಿಮೆ ಆದರೂ ಆಗುತ್ತದೆಯೋ ಎನ್ನತಕ್ಕ ಸಂಶಯ ಬರುತ್ತಿದೆ ಅದಕ್ಕೋಸ್ಕರ ಕೇಳಿದ್ದೇವೆ.

ಶ್ರೀ ಆರ್. ಗುಂಡೂರಾವ್.— ನಿಮ್ಮ ಸಂಶಯಕ್ಕೆ ಏನೂ ಔಷಧಿ ಕೊಡುವುದಕ್ಕಾಗುವುದಿಲ್ಲ. ಚುನಾವಣೆ ಬಗ್ಗೆ ನೀವು ನನ್ನನ್ನೇ ಕೇಳಿದ್ದರೆ ಹೇಳುತ್ತಿದೆ. ಸುಮ್ಮನೇ ದೆಹಲಿಯಿಂದ ಬಂತು ಪತ್ರಿಕೆಗಳಲ್ಲಿ ಬಂದಿದೆ ಎಂದರೆ ಏನೂ ಹೇಳುವುದಕ್ಕಾಗುವುದಿಲ್ಲ. ಯಾವ ಕಾರಣಕ್ಕೋಸ್ಕರವಾಗಿ ಚುನಾವಣೆ ನಡೆಸಬೇಕಾಗಿದೆ ? ಕಾರಣ ಇಲ್ಲವೇ ಇಲ್ಲ.

ಶ್ರೀ ಪಿ. ರಾಂದೇವ್.—ನಮ್ಮ ದೃಷ್ಟಿಯಲ್ಲಿ ಕಾರಣಗಳು ಬೇಕಾದಷ್ಟು ಇವೆ.

ಶ್ರೀ ಆರ್ ಗೂಂಡೂರಾವ್.—ಕಾರಣಗಳು ಇಲ್ಲವೇ ಇಲ್ಲ. ನಿಮಗೆ ಚುನಾವಣೆಗೆ ಹೋಗಬೇಕೋ ಬೇಡವೋ ಎಂಬುದನ್ನು ಹೇಳಿ.

ಶ್ರೀ ಪಿ ರಾಂದೇವ್.— ಚುನಾವಣೆಗೆ ಹೋಗಬೇಕು ಎಂಬುದೇ ನಮ್ಮ ಉದ್ದೇಶ. ಆದರೆ ಮಾನ್ಯ ಮುಖ್ಯಮಂತ್ರಿಗಳವರು ಸಧ್ಯಕ್ಕೆ ಚುನಾವಣೆ ಇಲ್ಲವೆಂದು ಹೇಳುತ್ತಿದ್ದಾರೆ. ಆದರೆ ತಮಗೇ ಗೊತ್ತಿದೆ ನಿಮ್ಮ ಮಂತ್ರಿಮಂಡಲದಲ್ಲಿ ಬಹಳ ಇನ್‌ಎಫೆಕ್ಟಿವ್ ಮತ್ತು ಇನ್‌ಎಫಿಶಿಯಂಟ್ ಮಂತ್ರಿಗಳಿದ್ದಾರೆ ಎನ್ನತಕ್ಕದ್ದು ನಿಮಗೇ ಗೊತ್ತಿದೆ. ತಾವು ಅನೇಕ ಬಾರಿ ಹೇಳಿದ್ದೀರಿ ಕೇಂದ್ರದ ಮಂತ್ರಿಗಳು, ಪ್ರಧಾನ ಮಂತ್ರಿಗಳವರು ನಮಗೆ ಬಹಳ ಹತ್ತಿರದವರಾಗಿದ್ದಾರೆ. ಆದರೆ ನಮ್ಮ ರಾಜ್ಯಕ್ಕೆ ಕೇಂದ್ರದವರಿಂದ ಏನಾದರೂ ಹೆಚ್ಚಿನ ಸಹಾಯ ದೊರಕಿದೆಯೇ ? ಇದಕ್ಕೆ ತಮಗೆ ಉದಾಹರಣೆಗೆ ಹೇಳುವುದಾದರೆ ಮೊನ್ನೆ ರೈಲ್ವೆ ಬಡ್ಜೆಟ್ಟನ್ನು ಮಂಡಿಸಿದಾಗ ಈ ವರ್ಷ ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದವರು ಕೇವಲ ೫೦ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ ಇದು ಯಾವ ನ್ಯಾಯ ?

ಶ್ರೀ ಆರ್. ಗುಂಡೂರಾವ್.— ಮಡಿಕೇರಿಗೆ ರೈಲ್ವೆ ಲೈನು ಹಾಕಿಸುವ ಬಗ್ಗೆ ಸರ್ವೆ ಮಾಡಿಸುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಪಿ ರಾಮ್‌ದೇವ್.—ಮಡಿಕೇರಿ ನಿಮ್ಮ ಕ್ಷೇತ್ರ ಅಲ್ಲಿಗೆ ಮಾಡಿಸಿಕೊಳ್ಳುತ್ತೀರಿ. ೧೯೭೮-೭೯ ರಲ್ಲಿ ಮಾನ್ಯ ಮಧು ದಂಡವತೆ, ಜನತಾ ಸರ್ಕಾರವಿತ್ತು ಆಗ ಇಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಕೇಂದ್ರದವರು ನಮ್ಮ ರಾಜ್ಯಕ್ಕೆ ೩ ಕೋಟಿ ರೂಪಾಯಿಗಳನ್ನು ಕೊಟ್ಟರು. ಮೈಸೂರು ಬೆಂಗಳೂರು ಬ್ರಾಡ ಗೇಜ್ ಲೈನ್ ಬಂತು. ೧೯೮೦ ೮೧ರಲ್ಲಿ ನಿಮ್ಮ ಸರ್ಕಾರ ಬಂತು ಆಗ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರು. ಈ ವರ್ಷ ಶ್ರೀ ಜಾಫರ್ ಶರೀಫ್ ಸಾಹೆಬರವರು ಕೇವಲ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಕೇವಲ ಮೇನ್‌ಟನೆನ್ಸ್, ಎಸ್ಟಾಬ್ಲಿಶಮೆಂಟ್ ಚಾರ್ಜಸ್‌ಗೆ ಹೋಗುತ್ತದೆ. ಕರ್ನಾಟಕ ರಾಜ್ಯದ ಬಗ್ಗೆ ಅಷ್ಟೊಂದು ಅಭಿಮಾನವಿದೆ, ನಿಮ್ಮ ಮಾತು ಚೆನ್ನಾಗಿ ನಡೆಯುತ್ತದೆಂದು ಹೇಳತಕ್ಕಂಥವರು ನೀವು ನಮ್ಮ ರಾಜ್ಯದ ಬಗ್ಗೆ ಇಷ್ಟು ಉಪೇಕ್ಷೆ ಮಾಡಿದ್ದರೂ ಸುಮ್ಮನೆ ಕೂತಿರುವುದಕ್ಕೆ ಕಾರಣವೇನು? ಈ ರೀತಿಯಾಗಿ ಕೇರಳದಲ್ಲಿ, ತಮಿಳುನಾಡಿನಲ್ಲಿ ನಡೆಯುತ್ತಿಲ್ಲ. ಏತಕ್ಕೆಂದರೆ ಅಲ್ಲಿ ವಿರೋಧಪಕ್ಷಗಳ ಸರ್ಕಾರವಿವೆ. ಎಲ್ಲೆಲ್ಲಿ ವಿರೋಧಪಕ್ಷಗಳ ಸರ್ಕಾರವಿದೆ ಅಲ್ಲಿ ಎಲ್ಲಾ ಕೇಂದ್ರಸರ್ಕಾರದವರು ಕೇಳಿದಷ್ಟು ಹಣವನ್ನು ಕೊಟ್ಟಿದ್ದಾರೆ. ಆದರೆ ಎಲ್ಲೆಲ್ಲಿ ಆಡಳಿತಪಕ್ಷದ ಸರ್ಕಾರಗಳಿವೆ ಅಲ್ಲಿಗೆಲ್ಲಾ ಹೆಚ್ಚಿನ ಗಮನವನ್ನು ಕೊಡುತ್ತಿಲ್ಲವೆಂದು ಬಹಳ ದುಃಖದಿಂದ ಈ ಮಾತನ್ನು ಹೇಳಬೇಕಾಗಿದೆ.

ಶ್ರೀ ಕೆ. ರಾಮಭಟ್.—ಈಗಿರುವಂಥಾ ಹಾಸನ ಮಂಗಳೂರು ರೈಲ್ವೆ ಲೈನನ್ನು ಯಶಸ್ವಿಯಾಗಿ ನಡೆಯಬಾರದು ಎನ್ನತಕ್ಕ ಪ್ರಯತ್ನ ಬೇರೆ ಕಡೆಯಿಂದ ನಡೆಯುತ್ತಿದೆ. ಇದರ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಬಂದಿದೆ. ಆದುದರಿಂದ ಅದನ್ನಾದರೂ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡಿ ಎಂದು ಹೇಳುತ್ತೇನೆ.

ಶ್ರೀ ಪಿ ರಾಮ್‌ದೇವ್ —ನಮ್ಮ ಮುಖ್ಯಮಂತ್ರಿಗಳವರು ಒಂದು ಕಮಿಟ್‌ಮೆಂಟ್ ಮಾಡಿದ್ದಾರೆ ಅದು ಏನೆಂದರೆ ಉಡನ್ ಸ್ಲೀಪರ್ಸ್ ಮತ್ತು ಅಲ್ಲಿ ಜಮೀನನ್ನು ಕೊಡುತ್ತೇವೆಂದು ಆದರೆ ಅದರಂತೆ ನಡೆಯದೇ ಇರುವುದರಿಂದ ಅಲ್ಲಿಗೆ ಹೆಚ್ಚಿನ ಹಣ ಕೊಟ್ಟಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದಾರೆ, ಹುಬ್ಬಳ್ಳಿ ಧಾರವಾಡದಿಂದ ಕಾರವಾರ ಲೈನ್ ಬಗ್ಗೆ ಎಷ್ಟು ವರ್ಷಗಳಿಂದ ಹೇಳುತ್ತಿದ್ದೇವೆ, ಅದೇ ರೀತಿ ರಾಯದುರ್ಗದಿಂದ ಚಿತ್ರದುರ್ಗ ಲೈನ್ ಮತ್ತು ಚಾಮರಾಜ ನಗರದಿಂದ ಸತ್ಯಮಂಗಲ ಲೈನ್ ಬಗ್ಗೆ ನಾವು ಎಷ್ಟು ವರ್ಷಗಳಿಂದಲೂ ಹೇಳುತ್ತಲೇ ಇದ್ದೇವೆ. ಕೇಂದ್ರದಲ್ಲಿ ರೈಲ್ವೆ ಮಂತ್ರಿಗಳಾಗಿ ಬಂದಿರತಕ್ಕವರಲ್ಲಿ ಹೆಚ್ಚು ಕಡಿಮೆ ನಮ್ಮವರೇ ಆಗಿದ್ದಾರೆ. ಮಾನ್ಯ ಶ್ರೀ ದಿವಂಗತ ಕೆಂಗಲ್ ಹನುಮಂತಯ್ಯ. ಶ್ರೀ ದಾಸಪ್ಪ, ಶ್ರೀ ಜಾಫರ್ ಶರೀಫ್ ಇವರೆಲ್ಲರೂ ನಮ್ಮವರೇ ಆಗಿದ್ದಾರೆ. ತಮಿಳುನಾಡಿನವರು ಏನು ಮಾಡಿದ್ದಾರೆ ಎಂದರೆ ಅವರು ಕೇಂದ್ರದವರಿಗೆ ಏನೇನು ಬರಬೇಕು ಎನ್ನತಕ್ಕದರ ಬಗ್ಗೆ ಒಂದು ಸೆಲ್ ಮಾಡಿದ್ದಾರೆ ಅವರಲ್ಲಿ ಎಕಾನಮಿಸ್ಟ್, ಪಾಲಿಟಿಕಲ್ ಎಕ್ಸ್‌ಪರ್ಟ್ಸ್ ಮತ್ತು ಇಂಡಸ್ಟ್ರಿಯಲಿಸ್ಟ್‌ರವರು ಇವರೆಲ್ಲಾ ಸೇರಿ ಕೇಂದ್ರ ಸರ್ಕಾರದಿಂದ ಏನೇನು ಸಹಾಯ ಬೇಕೋ ಆದನ್ನೆಲ್ಲಾ ಪಡೆಯುವುದಕ್ಕೆ ಸದಾಕಾಲ ಒಬ್ಬರನ್ನು ಕೇಂದ್ರದಲ್ಲಿ ಕೂರಿಸಿರುತ್ತಾರೆ. ಅವರು ಅಲ್ಲಿಯೇ ಕೂತುಕೊಂಡು ಸಾಕಷ್ಟು ಹಣವನ್ನು ತೆಗೆದುಕೊಂಡು ಬರುತ್ತಾರೆ. ತಾವು ಸಹ ಇಲ್ಲಿ ಒಬ್ಬರು ಸ್ಪೆಷಲ್ ಕಮಿಷನ್ ಅಪಾಯಿಂಟ್ ಮಾಡಿದ್ದೀರಿ. ಅವರು ಏನು ಮಾಡುತ್ತಿದ್ದಾರೆ ಎಂದರೆ ಕರ್ನಾಟಕ ಭವನವನ್ನೇ ಅವರಿಂದ ನೋಡಿಕೊಳ್ಳುವುದಕ್ಕೆ ಆಗುತ್ತಿಲ್ಲ ಇನ್ನು ನಮ್ಮ ಸರ್ಕಾರದ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಸಾಧ್ಯವೇ ?

ಇದು ಒಂದೇ ಅಲ್ಲ, ಗಡಿ ವಿವಾದವನ್ನು ಪರಿಹರಿಸಲಿಲ್ಲ, ಜಲವಿವಾದವನ್ನು ಪರಿಹರಿಸಲಿಲ್ಲ; ನೀರಾವರಿ ಯೋಜನೆಗಳಿಗಾಗಿ ಹಣ ಕೊಡಲಿಲ್ಲ, ವಿದ್ಯುಚ್ಛಕ್ತಿ ಕೊಡಲಿಲ್ಲ. ಸಿಮೆಂಟ್ ಕೊಡುತ್ತಿಲ್ಲ. ಸಾಕಷ್ಟು ಆಹಾರ ಪದಾರ್ಥಗಳನ್ನು ಕೊಡುತ್ತಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳುವುದೇನೆಂದರೆ, ಇದೆಲ್ಲ ಏತಕ್ಕೆ ಆಗಿದೆ ಎಂದು. ನಮಗೂ ಕೇಂದ್ರ ಸರ್ಕಾರಕ್ಕೂ ಚನ್ನಾಗಿದೆ, ಪ್ರಧಾನಿಗೂ ನಮಗೂ ಚೆನ್ನಾಗಿದೆ. ನಾವು ಹೇಳಿದ್ದನ್ನು ಅವರು ಕೇಳುತ್ತಾರೆಂದು ಹೇಳುತ್ತೀರಿ. ಅವರೂ ಕೂಡ, ನಾವು ಹೇಳಿದ್ದನ್ನು ಕೇಳುತ್ತಾರೆಂದು ನಿಮ್ಮ ಕಡೆ ಗಮನ ಕೊಡುತ್ತಿಲ್ಲ. ಒಂದು ವೇಳೆ ವಿರೋಧ ಪಕ್ಷದ ಸರ್ಕಾರ ಅಲ್ಲಿ ಇದ್ದಿದ್ದರೆ ಖಂಡಿತ ಮುನ್ನುಗ್ಗಿ ಹೊಡೆದಾಡಿ ಸಾಕಷ್ಟು ಹಣ ಬರತಕ್ಕ ವ್ಯವಸ್ಥೆಯಾಗುತ್ತಿತ್ತು.

ಇನ್ನು ಟಿ. ವಿ. ಸ್ಟೇಷನ್ ಬಗ್ಗೆ ಹೇಳುವುದಾದರೆ, ಕಳೆದ ನವೆಂಬರ್‌ನಲ್ಲಿ ಬೆಳ್ಳಿ ಹುಟ್ಟಿದ ದಿವಸ ಟಿ. ವಿ. ರಿಲೇ ಸ್ಟೇಷನ್ ಅನ್ನು ಪ್ರಾರಂಭಿಸಿದಿರಿ. ಆ ರಿಲೇ ಸ್ಟೇಷನ್ ಅನ್ನು ಮಾಡಿದ್ದರಿಂದಲೇ ಟಿ.ವಿ. ಸ್ಟೇಷನ್ ಆಗುವುದು ಹಿಂದಕ್ಕೆ ಹೋಯಿತು. ಅವರು ಅದಕ್ಕೆ ದುಡ್ಡು ಕೊಡಲಿಲ್ಲ. ಇವತ್ತಿನ ದಿವಸ ಬೆಂಗಳೂರನ್ನು ಪರಭಾಷಾ ನಗರವನ್ನಾಗಿ ಮಾಡಿದ್ದೀರಿ. ಆ ಟಿ.ವಿ.ಯುದಂತೂ ಕನ್ನಡದ ಕಾರ್ಯಕ್ರಮಗಳು ಬರುವುದಿಲ್ಲ. ಏನಿದ್ದರೂ ಹಿಂದಿ, ಮರಾಠಿ, ತಮಿಳು ಕಾರ್ಯಕ್ರಮಗಳು ಬರುತ್ತಿವೆ. ಕರ್ನಾಟಕದ ಜನ ಬೆಂಗಳೂರಿನಲ್ಲಿ ಟಿ ವಿ, ನೋಡಿದರೆ, ಇದು ಕರ್ನಾಟಕದ ರಾಜಧಾನಿಯೋ ಅಥವಾ ಬೇರೆ ಯಾವುದೋ ಪ್ರಾಂತ್ಯವೋ ಎನ್ನುವ ಪರಿಸ್ಥಿತಿ ಬಂದಿದೆ. ಆದ್ದರಿಂದ ನಮ್ಮ ಬೆಂಗಳೂರು ನಗರದಲ್ಲಿಯೇ ಒಂದು ಟಿ. ವಿ. ಸ್ಟೇಷನ್ ಅನ್ನು ಸ್ಥಾಪಿಸಲು ರಾಜ್ಯ ಸರ್ಕಾರದವರಾದರೂ ಹಣ ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ಸೋಮವಾರ ಪೇಟೆಯಲ್ಲಿ ಕೂಗಿ ಹೆಣ್ಣುಮಕ್ಕಳ ಮಾರಾಟವಾಗುತ್ತಿದೆ ಎಂದು ನಿನ್ನೆ ಪತ್ರಿಕೆಯಲ್ಲಿ ಬಂದಿದೆ. ಇದನ್ನು ತಪ್ಪಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಹೇಳಿ, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ. (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರ ವೇಳೆಯಲ್ಲಿ ರೈತರಿಗೆ ಸಂಬಂಧಪಟ್ಟ ಪ್ರಶ್ನೆಗೆ ಮಾನ್ಯ ಶ್ರೀಕಂಠಯ್ಯನವರು ನೀಡಿದ ಉತ್ತರ ಸಮಾಧಾನವಾಗದ ಕಾರಣ ಅದನ್ನು ತಡೆಹಿಡಿಯತಕ್ಕ ಸನ್ನಿವೇಶ ಬಂತು. ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಿಂದ ಸಾಲ ವಸೂಲ್ಮಾಡುವಲ್ಲಿ ರಿಯಾಯಿತಿ ನೀಡುವ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲು ಅವಕಾಶ ಕಲ್ಪಿಸಿ ಸರ್ಕಾರದ ಪರವಾಗಿ ಉತ್ತರ ಕೊಡಿಸುತ್ತೇನೆಂದು ಹೇಳಿದಿರಿ. ನಾಳೆ ನಾಡಿದ್ದರಲ್ಲಿ ಈ ಅಧಿವೇಶನ ಮುಕ್ತಾಯವಾಗುತ್ತದೆ. ಈಗ ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿದ್ದಾರೆ. ಆದ್ದರಿಂದ ಇವತ್ತೇ ಅದಕ್ಕೆ ಅವಕಾಶವಾದರೆ ಒಳ್ಳೆಯದು. ಮಾಜಿ ಮುಖ್ಯ ಮಂತ್ರಿಗಳು ಮಾತನಾಡುವಾಗ ೭ ಕೋಟಿ ರೂಪಾಯಿ ರೈತರಿಂದ ಸುಲಿಗೆಯಾಗಿದೆ ಎಂದು ಹೇಳಿದರು. ಇದನ್ನು ತಾವು ಗಮನಿಸಿದ್ದೀರೆಂದು ಕಾಣುತ್ತದೆ. ಸುಮಾರು ೫ ಲಕ್ಷ ಮಂದಿ ಸಣ್ಣ ಮತ್ತು ಮಧ್ಯಮ ಹಿಡುವಳಿದಾರರು ಈ ಒಂದು ರಿಯಾಯಿತಿ ಕೇಳಿ ವಿವಿಧ ಜಿಲ್ಲೆಗಳಿಂದ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆಂದು ಹೇಳಿದ್ದಾರೆ. ಅವರು ಕೇಳಿರುವ ರಿಯಾಯಿತಿಯು ಒಟ್ಟು ಮೊತ್ತ ೧೨ ಕೋಟಿ ರೂಪಾಯಿಗಳಾಗುತ್ತದೆಂದು ತಾವೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಹುಶಃ ೫ ಲಕ್ಷ ಮಂದಿ ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಿಗೆ ೧೨ ಕೋಟಿ ರೂಪಾಯಿಗಳ ರಿಯಾಯಿತಿ ತೋರಿಸತಕ್ಕದ್ದು ಬಹಳ ಏನು ಅಲ್ಲವೆಂದು ನನ್ನ ಭಾವನೆ. ಇವತ್ತಿನ ದಿವಸ ಸರ್ಕಾರೀ ನೌಕರರಿಗೆ ಎಷ್ಟು ಕೊಟ್ಟಿದ್ದಾರೆ ಎಂಬುದು ಗೊತ್ತಿದೆ, ಹೀಗೆ ಉದ್ದಕ್ಕೂ ನಡೆದುಕೊಂಡು ಬಂದಿದೆ, ಅವರನ್ನು ಎದುರಿಸತಕ್ಕ ಶಕ್ತಿ ನಿಮಗೆ ಇಲ್ಲ ಆದರೆ ರೈತರನ್ನು ನೀವು ಹೆದರಿಸಿ ಇಟ್ಟುಕೊಳ್ಳಬಹುದು. ಆದ್ದರಿಂದ, ಈ ವಿಷಯದಲ್ಲಿ ಸ್ವಲ್ಪ ಔದಾರ್ಯ ತೋರಿಸುವುದು ಅನ್ನಿಸುತ್ತದೆ. ಈಗ ಏನು ೫ಲಕ್ಷ ಅರ್ಜಿಗಳು ಬಂದಿವೆ ಅವುಗಳ ಬಗ್ಗೆ ವಾದವಿವಾದ ಅನಾವಶ್ಯಕವೆಂದು ಹೇಳುತ್ತೇನೆ. ಈ ಬಾರಿಯ ಆಯವ್ಯಯ ಪತ್ರದಲ್ಲಿ ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇವೆಂದು ಹೇಳಿದ್ದಾರೆ, ಅಲ್ಲದೆ ಮೊನ್ನೆ ಕೂಡ ಒಂದು ಸಂದರ್ಭದಲ್ಲಿ ಹೇಳಿದ್ದಾರೆ. ಪ್ರತಿ ತಾಲ್ಲೂಕಿನಲ್ಲೂ ಕೆಲವು ಗ್ರಾಮಗಳು ಸೆಂಟ್ರಲ್ ಕೋ-ಆಪರೇಟೀವ್ ಬ್ಯಾಂಕಿನ ವ್ಯಾಪ್ತಿಗೆ ಬರುತ್ತವೆ, ಮತ್ತೆ ಕೆಲವು ಗ್ರಾಮಗಳು ಕಮರ್ಷಿಯಲ್ ಬ್ಯಾಂಕಿನ ವ್ಯಾಪ್ತಿಗೆ ಬರುತ್ತವೆ. ಹೀಗಾಗಿ, ಕಮರ್ಷಿಯಲ್ ಬ್ಯಾಂಕಿನಿಂದ ಸಾಲ ಪಡೆದ ರೈತರಿಗೆ ಈ ರಿಯಾಯಿತಿ ಸಿಗುವುದಿಲ್ಲ. ದಯಮಾಡಿ, ಕಮರ್ಷಿಯಲ್ ಬ್ಯಾಂಕಿನಿಂದ ಸಾಲ ಪಡೆದಿರತಕ್ಕ ರೈತನಿಗೂ ಕೂಡ ಈ ರಿಯಾಯಿತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ನಾನು ಹೆಚ್ಚಿಗೆ ಚರ್ಚಿಸುವುದಕ್ಕೆ ಹೋಗದೆ, ಸರ್ಕಾರ ತನ್ನ ಬೊಕ್ಕಸದಿಂದ ಸುಸ್ತಿ ಬಡ್ಡಿಯನ್ನು ಕಮರ್ಷಿಯಲ್ ಬ್ಯಾಂಕಿಗೆ ತುಂಬಿಕೊಡುವ ಮುಖೇನ ರೈತರಿಗೆ ರಿಯಾಯಿತಿ ತೋರಿಸತಕ್ಕದ್ದು ಅವಶ್ಯಕ. ಇಲ್ಲದಿದ್ದರೆ, ಡಿಸ್‌ಪ್ಯಾರಿಟಿ ಮಾಡಿದ ಹಾಗೆ ಆಗುತ್ತದೆ. ಅದು ರೈತನ ತಪ್ಪಲ್ಲ, ಸರ್ಕಾರದ ಧೋರಣೆಯಿಂದ ಹಾಗೆ ಆಗಿದೆ. ಇನ್ನು ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಬಗ್ಗೆ ಹೇಳುವುದಾದರೆ, ತಕಾವಿ ಲೋನನ್ನು ವಜಾ ಮಾಡಿದ್ದೇವೆಂದು ಘೋಷಣೆ ಮಾಡಿದರು. ಆದರೆ ವಜಾ ಮಾಡಿಲ್ಲ. ಮಾನ್ಯ ಶ್ರೀಕಂಠಯ್ಯನವರು ಉತ್ತರ ಹೇಳುವಾಗ ಯಾವ ಯಾವ ನಿಬಂಧನೆಗಳಿವೆ ಎಂಬುದನ್ನು ತಿಳಿಸುತ್ತೇನೆಂದರು, ಆದರೆ ತಿಳಿಸಲಿಲ್ಲ. ಸಣ್ಣ ಹಿಡುವಳಿದಾರನಿಗೆ ೨ ಎಕರೆ ಭೂಮಿ

ಇದ್ದು ಅವರಲ್ಲಿ ಒಂದು ಗುಂಟೆ ತರಿ ಜಮೀನು ಇದ್ದರೆ ಅವನಿಗೆ ಈ ರಿಯಾಯಿತಿ ಸಿಗುವುದಿಲ್ಲ. ತಕಾವಿ ಸಾಲಗಳನ್ನು ಏನು ಬಿಡುತ್ತೇವೆಂದು ಹೇಳಿದ್ದಾರೆ ಅದನ್ನು ವಸ್ತುತಃ ಬಿಡಲಿಕ್ಕೆ ಸಾಧ್ಯವಾಗಿಲ್ಲ ಸುಮಾರು ೮-೧೦ ವರ್ಷಗಳ ಬಾಕಿಗೆ ಸುಸ್ತಿ ಬಡ್ಡಿಯನ್ನು ಹಾಕಿ ೩೦೧ ರೂಪಾಯಿ ಸಾಲ ಇದ್ದರೆ ೭೦೦-೮೦೦ ರೂಪಾಯಿಗಳನ್ನು ವಸೂಲ್ಮಾಡುತ್ತಿದ್ದಾರೆ. ಈ ತಕಾವಿ ಸಾಲ ಬಹಳ ಸಣ್ಣ ಮೊತ್ತ. ಅವರೆ ಇದು ಎಷ್ಟಿದೆ ಎಂಬುದು ಸರಕಾರಕ್ಕಾಗಿ ಗೊತ್ತಿಲ್ಲ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಮತ್ತು ತಕಾವಿ ಲೋನ್‌ಗಳಿಗೆ ಸುಸ್ತಿ ಬಡ್ಡಿ ವಿನಾಯಿತಿ ಅನ್ವಯವಾಗುವುದಿಲ್ಲವೆಂದು ತಹಶೀಲ್ದಾರರು ಹೇಳುತ್ತಾರೆ. ಇದು ಕೋ-ಆಪರೇಟೀವ್ ಲೋನಿಗೆ ಮಾತ್ರ ಅನ್ವಯವಾಗುತ್ತದೆ. ಈ ಸಾಲಗಳಿಗೂ ಕೂಡ ಈ ಒಂದು ವಿನಾಯಿತಿಯನ್ನು ಕೊಟ್ಟರೆ ಅದರಿಂದ ಸರ್ಕಾರಕ್ಕೇನು ಹೆಚ್ಚು ಭಾರ ಆಗುವುದಿಲ್ಲ. ಈ ಬಗ್ಗೆ ನಿಖರವಾಗಿ ಮಾನ್ಯ ಅರ್ಥ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಉತ್ತರಿಸಬೇಕು. ಇವತ್ತು ರೈತರಿಗಳ ಕಡೆ ಬಹಳ ತೊಂದರೆ ಇದೆ. ಆದುದರಿಂದ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಇನ್ನು ಸ್ಟೈಪೆಂಡರಿ ಪದವೀಧರರಿಗೆ ಇನ್ನು ಮೂರು ತಿಂಗಳ ಕಾಲ ಜೀವದಾನ ನೀಡಿದ್ದಾರೆ. ಈ ಒಂದು ಯೋಜನೆ ಕೆಳಗೆ ಸುಮಾರು ೧೪ ಸಾವಿರ ಜನ ಪದವೀಧರರು ಕೆಲಸ ಮಾಡುತ್ತಿದ್ದಾರೆ. ಮೊನ್ನೆ ತಾನೇ ಒಂದು ಪ್ರಶ್ನೆಗೆ ಉತ್ತರ ನೀಡುತ್ತಾ, ನಮ್ಮ ರಾಜ್ಯದ ನಾನಾ ಇಲಾಖೆಗಳಲ್ಲಿ ಸುಮಾರು ೪೨ ಸಾವಿರ ಹುದ್ದೆಗಳು ಖಾಲಿ ಇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ೪೨ ಸಾವಿರ ಹುದ್ದೆಗಳಲ್ಲಿ ಈ ೧೪ ಸಾವಿರ ಜನರನ್ನು ತುಂಬಿದರೆ ಅವರ ಸಮಸ್ಯೆಯನ್ನು ಪರಿಹರಿಸಿದಂತಾಗುತ್ತದೆ. ಅವರನ್ನು ಖಾಯಂ ಮಾಡುವ ಬಗ್ಗೆ ವೀರಪ್ಪ ಮೊಯಿಲಿಯವರದ್ದು ಮತ್ತು ಕಾಗೋಡು ತಿಮ್ಮಪ್ಪನವರದ್ದು ಅಡ್ಡಿ ಇದೆ ಎಂದು ಕೇಳಿದ್ದೇನೆ. ೪೨ ಹುದ್ದೆಗಳಲ್ಲಿ ಈ ೧೪ ಸಾವಿರ ಜನರನ್ನು ತುಂಬಿದರೆ ಇನ್ನು ಉಳಿದ ೨೮ ಸಾವಿರ ಹುದ್ದೆಗಳನ್ನು ಹರಿಜನ-ಗಿರಿಜನರಿಗೆ, ಹಿಂದುಳಿದವರಿಗೆ ಮತ್ತಿತರರಿಗೆ ಕೊಡಬಹುದು. ಆ ೧೪ ಸಾವಿರ ಹುಡುಗರಲ್ಲೂ ಕೂಡ ಹರಿಜನ-ಗಿರಿಜನರು ಹಿಂದುಳಿದವರು ಮತ್ತಿತರರು ಇದ್ದಾರೆ ಒಂದು ವೇಳೆ ಅವರನ್ನು ಖಾಯಂ ಮಾಡುವಾಗ ರಿಸರ್ವೇಷನ್ ರೇಷಿಯೋ ಮೆಯಿಂಟೇನ್ ಆಗದಿದ್ದರೆ ೨೮ ಸಾವಿರ ಹುದ್ದೆಗಳನ್ನು ಭರ್ತಿ ಮಾಡುವಾಗ ಎಲ್ಲಿ ಕೋತಾ ಬರುತ್ತದೆ ಅದನ್ನು ತುಂಬುವುದಕ್ಕೆ ಸಾಧ್ಯವಾಗುತ್ತದೆ. ಅವರಿಗೆ ಅಪಾಯವಾಗಬೇಕೆಂದು ನಾನಂತೂ ಹೇಳುತ್ತಿಲ್ಲ. ಆದ್ದರಿಂದ ಈ ಬಗ್ಗೆ ಶಾಸ್ತ್ರೀಯವಾಗಿ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ ಎಂದು ಹೇಳುತ್ತೇನೆ. ೪೨ ಸಾವಿರ ಹುದ್ದೆಗಳು ಖಾಲಿ ಇವೆ ಎಂದು ಒಪ್ಪಿಕೊಂಡಮೇಲೆ ಆ ಬಗ್ಗೆ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ನಿರುದ್ಯೋಗಿಗಳಿಗೆ ಅದರಲ್ಲೂ ಸ್ಟೈಪೆಂಡರಿ ಪದವೀಧರರಿಗೆ ಕೊಟ್ಟಿರುವ ಆಶ್ವಾಸನೆಯನ್ನು ಈಡೇರಿಸಬೇಕಾದುದು ಮುಖ್ಯವಾಗಿದೆ. ಸ್ಟೈಪೆಂಡರಿ ಪದವೀಧರರ ಬಗ್ಗೆ ಮತ್ತು ರೈತರ ಬಗ್ಗೆ ಸರ್ಕಾರದವರು ಎರಡು ಜಟಿಲವಾದ ಸಮಸ್ಯೆಗಳ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮೂರನೇ ದರ್ಜೆ ನೌಕರರನ್ನು ನೇಮಕ ಮಾಡುವಂಥ ಅಧಿಕಾರವನ್ನು ಲೋಕಸೇವಾ ಆಯೋಗದವರಿಗೆ ಕೊಡುವ ಬಗ್ಗೆ ಮಂತ್ರಿಮಂಡಲ ತೀರ್ಮಾನ ತೆಗೆದುಕೊಂಡಿದೆ. ಆದರೆ ಇವತ್ತಿನವರೆಗೆ ಯಾವುದೇ ಕ್ಲಾಸ್-೩ ಹುದ್ದೆಗಳಿಗೆ ನೇಮಕಾತಿಗಳನ್ನು ಮಾಡಿಲ್ಲ ಆ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಂಡಿಲ್ಲ. ರಾಜ್ಯಮಟ್ಟದಲ್ಲಿ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುವ ಬಗ್ಗೆ ಯಾವುದೇ ನಿರ್ಣಯವನ್ನೂ ತೆಗೆದುಕೊಂಡಿಲ್ಲ. ಸರ್ಕಾರಿ ಸೇವೆಗೆ ನಿಗದಿಪಡಿಸಿರುವ ವಯಸ್ಸು ಹುಡುಗರಿಗೆ ಮೀರಿಹೋಗುತ್ತಿದೆ. ಇದರಿಂದ ಹುಡುಗರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ವಿಳಂಬ ಮಾಡದಂತೆ ಈ ವಿಷಯದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಂಡು ಕಾಲವಿಲ್ಲದಿದ್ದರೂ ಕೆಲವು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—(ಮಾನ್ಯ ಹಣಕಾಸಿನ ಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ, ೧೯೮೨-೮೩ನೇ ಸಾಲಿನ ಆಯವ್ಯಯದ ಬಗ್ಗೆ ಮಾನ್ಯ ಸದಸ್ಯರು ಸಾಕಷ್ಟು ಚರ್ಚೆ ಮಾಡಿದ್ದಾರೆ. ಬಹಳ ವಿಸ್ತಾರವಾದ ಚರ್ಚೆಯನ್ನು ಮಾಡಿದ್ದಾರೆ. ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ ಆದರೆ ತೀವ್ರವಾದಂಥ ಟೀಕೆಯ ಅಭಾವ ಈ ಬಾರಿಯ ಚರ್ಚೆಯಲ್ಲಿ ಎದ್ದು ಕಾಣುತ್ತಿತ್ತು. ಬಾರಿ ಮಂಡನೆ ಮಾಡಿದಂಥ ಆಯವ್ಯಯ ದೋಷರಹಿತವಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಮುಂದೆ ಬರತಕ್ಕ ವರ್ಷವನ್ನು ಹೆಚ್ಚು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ಸಮಾಜದ ಎಲ್ಲವರ್ಗದ ಮಾತ್ರವಲ್ಲದೆ ಈ ಸದನದ ಸದಸ್ಯರ ಸಂಪೂರ್ಣವಾದ ಸಹಕಾರದಿಂದ ಸಾಧ್ಯವಾಗಬಹುದು ಎಂಬ ಭಾವನೆಯಿಂದ ನನ್ನ

ಉತ್ತರವನ್ನು ಪ್ರಾರಂಭ ಮಾಡುತ್ತಿದ್ದೇನೆ. ಆಯವ್ಯಯದ ಬಗ್ಗೆ ಮಾತನಾಡಿದ ಶ್ರೀ ಹೆಚ್. ಗಂಗಾಧರನ್ ಅವರು ತಮ್ಮ ಪ್ರಾಸ್ತಾವಿಕ ಭಾಷಣ ಮಾಡುತ್ತಾ ಕ್ಷಾಮಪರಿಹಾರ ಕಾರ್ಯಕ್ರಮದಿಂದ ತಮ್ಮ ಭಾಷಣವನ್ನು ಪ್ರಾರಂಭ ಮಾಡಿದ್ದೀರಿ ಎಂದು ಹೇಳಿದರು. ಮತ್ತು ಆ ಬಗ್ಗೆ ಕಳವಳವನ್ನು ಕೂಡ ವ್ಯಕ್ತಮಾಡಿದರು. ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯನ್ನು ಮಾಡಬೇಕು ಮತ್ತು ಬಡತನದಿಂದ ನರಳುತ್ತಿರುವ ಸಮಾಜದ ಕಡೆ ಸರ್ಕಾರದ ದೃಷ್ಟಿ ಪ್ರಥಮವಾಗಿ ಇರಬೇಕು ಎಂಬುದು ನಮ್ಮ ಮೂಲಭೂತವಾದ ನೀತಿಯಾಗಿದೆ. ಅದರ ಮನಸ್ಸಿನಲ್ಲಿರತಕ್ಕ ಕಳವಳವನ್ನು ನಾವು ಮರೆತು ವಿಚಾರ ಮಾಡಿದರೆ ಅದು ಬಹುಶ: ನಮ್ಮ ಸರ್ಕಾರದ ನೀತಿಗೆ ಅನುಗುಣವಾಗಿರುವುದಿಲ್ಲ ಎಂದೆನಿಸುತ್ತದೆ ನಮ್ಮ ಕರ್ನಾಟಕದ ಪರಂಪರೆಯಲ್ಲಿ ಬೇವು-ಬೆಲ್ಲ ಎಂಬ ಪದ ಸಮುಚ್ಚಯ ಇದೆ. ಆದ್ದರಿಂದಲೇ ನಮ್ಮ ಬಳಕೆಯಲ್ಲಿ ಕರ್ನಾಟಕದ ಪರಂಪರೆಯಂತೆ ಬೇವು ಮೊದಲು ಬಂದು ಅನಂತರ ಬೆಲ್ಲ ಬರುತ್ತದೆ. ಅದಕ್ಕನುಗುಣವಾಗಿ ನಮ್ಮ ಭಾಷಣದಲ್ಲಿ ಕ್ಷಾಮದ ಬಗ್ಗೆ ಮತ್ತು ಅದಕ್ಕೆ ಕೈಕೊಂಡ ಪರಿಹಾರ ಕಾರ್ಯಕ್ರಮವನ್ನು ಮೊದಲು ಪ್ರಸ್ತಾಪ ಮಾಡಿ ಮುಂದೆ ಬರತಕ್ಕ ವರ್ಷಗಳಲ್ಲಿ ಯಾವರೀತಿಯ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯನ್ನು ಕರ್ನಾಟಕದ ಜನ ಕಾಣುವುದಕ್ಕೆ ಸಾಧ್ಯವಿದೆ ಎಂಬುದನ್ನು ಅನಂತರ ಪ್ರಸ್ತಾಪ ಮಾಡಿದ್ದೇನೆ. ನಮ್ಮ ಸರ್ಕಾರ ಅಧಿಕಾರವನ್ನು ಪಡೆದುಕೊಳ್ಳುವಾಗ ನಮ್ಮ ಕರ್ನಾಟಕದ ಆರ್ಥಿಕ ಮತ್ತು ಸಾಮಾಜಿಕ ವಾತಾವರಣ ಕಹಿಯಾಗಿತ್ತೇ ಎಂದು ಕೆಲವರು ಪ್ರಶ್ನೆ ಮಾಡುತ್ತಿದ್ದರು. ಆ ಕಾಲವನ್ನು ನಾವು ಈಗ ಮರೆಯುವಹಾಗಿಲ್ಲ, ಆಗ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಖಂಡಿತವಾಗಿ ಹದಗೆಟ್ಟಿತ್ತು. ಕೃಷಿ ಕಾರ್ಮಿಕರಲ್ಲಿ ಆಗ ಅಶಾಂತಿ ಹಬ್ಬಿತ್ತು. ಅಷ್ಟೇ ಅಲ್ಲದೆ ರಾಜ್ಯದಲ್ಲೆಲ್ಲಿ ನೋಡಿದರೂ ಅಶಾಂತಿ ಹಬ್ಬಿತ್ತಲ್ಲದೆ ಚಳವಳಿಯ ವಾತಾವರಣ ಇತ್ತು, ಜನರಲ್ಲಿ ನೆಮ್ಮದಿ ಇರಲಿಲ್ಲ. ಉದ್ದಿಮೆಗಳಲ್ಲಿ ಮತ್ತು ಇತರ ಸಾಮಾಜಿಕ ಕ್ಷೇತ್ರಗಳಲ್ಲಿ ಕೂಡ ವಾತಾವರಣ ಸರಿಯಾಗಿರಲಿಲ್ಲ. ಕಾರ್ಮಿಕರು ಮತ್ತು ವಿವಿಧ ವರ್ಗದ ಜನರು ಚಳುವಳಿಯ ದಾರಿಯನ್ನು ಹಿಡಿದಿದ್ದರು ಉದ್ದಿಮೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳು ಇರಲಿಲ್ಲ. ಉತ್ಪಾದನೆ ಕುಸಿದಿತ್ತು. ಇವೆಲ್ಲಾ ಆಗ ಆಡಳಿತದಲ್ಲಿದ್ದಂಥ ಜನತಾಪಕ್ಷದ ದೆಸೆಯಿಂದಲೂ ಆಗಿತ್ತು. ಅದರ ಬೆನ್ನು ಹಿಡಿದಂಥ ಮುಖ್ಯಮಂತ್ರಿಗಳು ಆಗ ಇದ್ದುದರಿಂದ ಆ ಕಾಲದಲ್ಲಿ ಅವರಿಂದಲೂ ಇದಕ್ಕೆ ಪುಷ್ಟಿ ದೊರಕಿತ್ತು. ನಾನು ಆ ಬಗ್ಗೆ ಹೆಚ್ಚು ವಿಶ್ಲೇಷಣೆ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಕೃಷಿರಂಗದ ಅಸ್ತವ್ಯಸ್ತತೆ ಇದ್ದುದಲ್ಲದೆ ಬೆಲೆಯ ಹಂತ ಕೂಡ ವಿಷ ಏರಿದಂತೆ ಮೇಲೇರಿತ್ತು. ಈ ಗೊಂದಲದ ಮಧ್ಯದಲ್ಲಿ ನಾವು ಪ್ರವೇಶ ಮಾಡಬೇಕಾಯಿತು. ಅಸ್ತವ್ಯಸ್ಥತೆಯಲ್ಲಿ ವ್ಯಸ್ತತೆಯನ್ನು ತರುವುದಕ್ಕೆ ಮತ್ತು ಸಾಮಾಜಿಕ ಭದ್ರತೆಯನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಮಹಾ ಹೋರಾಟವನ್ನೇ ನಾವು ಮಾಡಬೇಕಾದ ಸಂದರ್ಭ ಆಗಿತ್ತು ಎಂದರೆ ಅದೇನೂ ಅತಿಶಯೋಕ್ತಿಯಾಗಲಾರದು ಎಂದು ನಾನು ಹೇಳುತ್ತಿದ್ದೇನೆ. ನಮ್ಮ ಸತತ ಪ್ರಯತ್ನದಿಂದ ಮತ್ತು ಪ್ರಾಮಾಣಿಕ ಹೋರಾಟದಿಂದ ಇದನ್ನು ಸರಿಪಡಿಸಲು ಸಾಧ್ಯವಾಯಿತು. ನಮ್ಮ ಮುಖ್ಯಮಂತ್ರಿಗಳ ದೃಢತೆ, ಮುಂದಾಳುತನ, ನಮ್ಮ ನಾಯಕರ ಮಾರ್ಗದರ್ಶನ, ನಿರ್ಭೀತವಾದ ವಾತಾವರಣವನ್ನು ಸ್ಪಷ್ಟ ಮಾಡಿ ಒಂದು ಭದ್ರ ಬುನಾದಿಯ ಮೇಲೆ ಕರ್ನಾಟಕವನ್ನು ಕಟ್ಟಬೇಕು, ಆರ್ಥಿಕ ಮತ್ತು ಸಾಮಾಜಿಕ ಸಮತೆಯನ್ನು ಸ್ಥಾಪನೆ ಮಾಡಬೇಕು ಎಂಬ ಛಲ, ರಾಜಕೀಯ ಇಚ್ಛಾಶಕ್ತಿಯ ತಳಹದಿ ಮತ್ತು ಶಾಸಕರ ಪ್ರೋತ್ಸಾಹ, ಸಹಕಾರ-ಇವುಗಳಿಂದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸಿ ಆ ಬಗ್ಗೆ ಸರಿಯಾದ ನೆಲೆಯನ್ನು ಕಾಣುವಂತೆ ಮಾಡಲು ಸಾಧ್ಯವಾಯಿತು ಎಂದು ಹೇಳುತ್ತೇನೆ. ಇದಕ್ಕೆ ೧೦ ತಿಂಗಳು ಬೇಕಾಯಿತು, ನಾವು ಅಧಿಕಾರವನ್ನು ವಹಿಸಿಕೊಂಡ ೮-೧೦ ತಿಂಗಳ ಕಾಲ ನಿಷ್ಠೆಯಿಂದ ಮತ್ತು ಪ್ರಾಮಾಣಿಕತೆಯಿಂದ ಹೋರಾಡಿ ನಾವು ಆರ್ಥಿಕ ಮತ್ತು ಸಾಮಾಜಿಕ ಭದ್ರತೆಯನ್ನು ಕರ್ನಾಟಕ ರಾಜ್ಯದಲ್ಲಿ ನೆಲೆಗೊಳಿಸುವುದಕ್ಕೆ ಸಾಧ್ಯವಾಯಿತು. ನಮ್ಮ ಶ್ರಮದ ಫಲದಿಂದ ಆರ್ಥಿಕ ಪುನಃಶ್ಚೈತನ್ಯ ಹೊಂದಿ ಕೆಲಸ ಮಾಡುವುದಕ್ಕೆ ಸಾಧ್ಯವಾಯಿತು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

೧೧-೦೦ ಎ. ಎಂ.

ತಾವು ಈಗಾಗಲೇ ೧೯೮೧-೮೨ರ ಎಕನಾಮಿಕ್ ಸರ್ವೇಯನ್ನು ನೋಡಿದ್ದೀರಿ. ಅದರ ಮೇಲೆ ಯಾರಾದರೂ ಕೂಡಾ ಟೀಕೆ ಇರಲಿಲ್ಲ. ೧೯೮೧-೮೨ರ ಆರ್ಥಿಕ ಸಮೀಕ್ಷೆಯನ್ನು ನೋಡಿದರೆ ಅದರಲ್ಲಿ ಎಲ್ಲರಿಗೂ ಸಮರ್ಪಕವಾದ ಆರ್ಥಿಕ ಸಮೀಕ್ಷೆ ಇತ್ತು. ಇದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾದ ವಿಚಾರ. ಅದರಲ್ಲಿ ಪ್ರಮುಖವಾಗಿ ಬಂದ ವಿಚಾರಗಳು ಇಷ್ಟು. In spite of adverse conditions,

the net State domestic production increased by 17.86%. ಇದು ಗಣನೀಯ ವಾದ ಒಂದು ಸಾಧನೆ. ಇನ್ನು ಎರಡನೆಯದಾಗಿ ಆಹಾರ ಧಾನ್ಯಗಳು. ಇದು ಸುಮಾರು ೫೯.೩೪ ಟನ್ ಹೆಚ್ಚಾಯಿತು. ದವಸಧಾನ್ಯಗಳು ಸುಮಾರು ೭.೬೯ ಲಕ್ಷ ಟನ್ ಹೆಚ್ಚಾಯಿತು. ಇನ್ನು ಮೂರನೆಯದಾಗಿ ಕಾಣತಕ್ಕುದ್ದು ಎಂದರೆ ಏಪ್ರಿಲ್‌ಗಿಂತ ಹಿಂದೆ ಇದ್ದ ಶೇಕಡಾ ೧೧.೫ ಬೆಲೆ ಏರಿಕೆಯನ್ನು ೩.೨ ಪರ್ಸೆಂಟಿಗೆ ನಾವು ಇಳಿಸಿರತಕ್ಕದ್ದು ಒಂದು ಯಶಸ್ವೀ ಪರಿಣಾಮಕಾರಿ ಕಾರ್ಯಕ್ರಮವಾಗಿದೆ. ಇನ್ನು ನಾಲ್ಕನೆಯದಾಗಿ ಅಭಿವೃದ್ಧಿ ವೆಚ್ಚಗಳು. ಇದು ಅಭಿವೃದ್ಧಿ ಪರ ಕಾರ್ಯಕ್ರಮಗಳಿಗೆ ಖರ್ಚು ಮಾಡತಕ್ಕ ಹಣ. ಇದು ಶೇಕಡಾ ೮.೫೧ ಜಾಸ್ತಿಯಾಯಿತು. ಇದಕ್ಕೆಲ್ಲಾ ಪ್ರಮುಖವಾರಿ ರಾಜಕೀಯ ಇಚ್ಛಾಶಕ್ತಿ ಅಗತ್ಯವೆಂದು ಹೇಳಿದಾಗ ಒಂದೆರಡು ವರ್ಷದಿಂದ ವಿರೋಧ ಪಕ್ಷದ ನಾಯಕರು ಹಾಗೂ ಇತರ ಕೆಲವು ಸದಸ್ಯರು ನಕ್ಕರು. ಆದರೆ ಅದರ ಫಲವನ್ನು ಈಗ ಅವರು ಕಾಣುತ್ತಿದ್ದಾರೆ. Non-developmental expenditure. We could effectively bring it down to 1.5%. This is because of the consistent efforts of the Government without allowing the development works to suffer. We have kept the development tempo as high as at 8.5%. This is an achievement which has not been achieved in any State in this country. ಬಹುಶ: ಅಭಿವೃದ್ಧಿ ವೆಚ್ಚದಲ್ಲಿ ಜಾಸ್ತಿ ಆಗಿದೇ ಇದ್ದಿದ್ದರೆ ಅದರ ಮೇಲೆ ಟೀಕೆ ಮಾಡಬಹುದಾಗಿತ್ತು. ಆದರೆ ಟೀಕೆಗೆ ಇಲ್ಲಿ ಸ್ವಲ್ಪವೂ ಅವಕಾಶ ಇಲ್ಲ. ಅಭಿವೃದ್ಧಿ ವೆಚ್ಚವನ್ನು ಶೇಕಡಾ ೮.೫ಕ್ಕೆ ಏರಿಸಿ, ಅಭಿವೃದ್ಧಿಯೇತರ ವೆಚ್ಚಗಳನ್ನು ಹತೋಟಿಯಲ್ಲಿ ಇಟ್ಟುಕೊಂಡಿದ್ದು ಮಾತ್ರವಲ್ಲದೆ ಅದನ್ನು ಶೇಕಡಾ ೧.೫ರಷ್ಟು ಹಿಂಜರಿತ ಮಾಡತಕ್ಕ ಆರ್ಥಿಕ ಕಾರ್ಯಕ್ರಮವನ್ನು ನಾವು ಮಾಡಿದ್ದೇವೆ. ಇನ್ನು ಐದನೆಯ ದಾಗಿ ಮಾನ್ಯ ಸದಸ್ಯರು ಹರಿಜನಗಿರಿಜನರ ಪ್ರಶ್ನೆಯನ್ನು ಎತ್ತಿದರು. ಹರಿಜನಗಿರಿಜನರನ್ನು ಬಡತನದ ರೇಖೆಯಿಂದ ಮೇಲಕ್ಕೆ ಎತ್ತುತಕ್ಕ ಕಾರ್ಯಕ್ರಮಗಳನ್ನು ಏನು ನೀವು ಮಾಡಿದ್ದೀರಿ ಎಂದು ಕೇಳಿದರು. ನಾವು ೧೯೮೧-೮೨ರ ವರ್ಷದಲ್ಲಿ ಸುಮಾರು ೫೪ ಸಾವಿರ ಹರಿಜನ ಕುಟುಂಬಗಳಿಗೆ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಮುಖಾಂತರ ಬಡತನದ ರೇಖೆಯಿಂದ ಮೇಲಕ್ಕೆ ಎತ್ತಿದ್ದೇವೆ. ಇಷ್ಟೇ ಅಲ್ಲದೆ ಇಂಟಿಗ್ರೇಟೆಡ್ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಮುಖಾಂತರ ಸುಮಾರು ೫೧ ಹರಿಜನ ಕುಟುಂಬಗಳನ್ನು ಮೇಲಕ್ಕೆ ಎತ್ತಿದ್ದೇವೆ. ಸ್ಪೆಷಲ್ ಕಾಂಪೊನೆಂಟ್ ಕಾರ್ಯಕ್ರಮದ ಮುಖಾಂತರ, ಡಿ.ಆರ್.ಡಿ.ಎಸ್. ಮುಖಾಂತರ ಹಾಗೂ ಬೇರೆ ಬೇರೆ ಕಾರ್ಯಕ್ರಮಗಳ ಮುಖಾಂತರ ಸುಮಾರು ೧ ಲಕ್ಷದ ೫ ಸಾವಿರ ಹರಿಜನ ಗಿರಿಜನ ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲಕ್ಕೆ ಎತ್ತಿದ್ದೇವೆ. ಇನ್ನೂ ಕೆಲವು ವಿಚಾರಗಳನ್ನು ತಮ್ಮ ಮುಂದೆ ಇಡುವ ಈ ಸಮಯದಲ್ಲಿ ರಾಜ್ಯದ ಆದಾಯದ ಬಗ್ಗೆ ಸಹಾ ಹೇಳಬೇಕಾಗುತ್ತದೆ. ಯಾವುದರಲ್ಲಿಯೂ ಕೂಡಾ ಮೈನಸ್ ಇಲ್ಲ. ಸಾಧನೆಗಳ ಬಗ್ಗೆ ಹೇಳುವುದಾದರೆ ಯಾವುದರಲ್ಲೂ ಕೂಡಾ ಹಿಂಜರಿತ ಇಲ್ಲ. ಬಹುಶಃ ಇಂತಹ ವರ್ಷವನ್ನು ಕರ್ನಾಟಕದಲ್ಲಿ ಹಿಂದೆಂದೂ ಕಾಣುವುದಕ್ಕೆ ಸಾಧ್ಯವಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಕೆಲವರು ಬಜೆಟ್ ಭಾಷಣ ಬಹಳ ಉದ್ದವಾಗಿದೆ ಎಂದು ಹೇಳಿದರು. ಅಭಿವೃದ್ಧಿಯ ಪಥ ಮತ್ತು ದೃಷ್ಟಿಯನ್ನು ನೋಡಿದರೆ ಹೇಳಬೇಕಾದಂಥ ವಿಚಾರವನ್ನು ಹೇಳಲೇ ಬೇಕಾಗುತ್ತದೆ, ಭಾಷಣ ಚಿಕ್ಕದಾದರೆ ಮಾತನಾಡುವುದು ಜಾಸ್ತಿಯಾಗುತ್ತದೆ. ಭಾಷಣ ದೊಡ್ಡದಾದರೆ ಮಾತನಾಡುವುದು ಸ್ವಲ್ಪ ಕಡಿಮೆಯಾಗುತ್ತದೆ. ಕೆಲವು ಕಾರ್ಯಕ್ರಮಗಳನ್ನು ಕೊಟ್ಟಾಗ ಎಲೆಕ್ಷನ್ ಮ್ಯಾನಿಫೆಸ್ಟೋ ಆಗಿದೆ, ರಾಜಕೀಯವಾಗಿ ಉಪಯೋಗ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಪ್ರಮುಖವಾಗಿ ೫ ಅಂಶದ ಕಾರ್ಯಕ್ರಮ ನೇಗಿಲಭಾಗ್ಯ ಸಾಗರ ದೀಪ, ಮುನ್ನಡೆ, ಗೃಹಕಲ್ಯಾಣ, ಆಶಾಕಿರಣ, ಇವೆಲ್ಲವೂ ಬಡವರಿಗೆ ಅನುಕೂಲವಾದ ಕಾರ್ಯಕ್ರಮಗಳು. ಈ ಒಂದು ಕಾರ್ಯಕ್ರಮ ಕೊಟ್ಟಿದ್ದರಿಂದ ಯಾರೂ ಕೂಡ ಈ ಸುಧಾರಣೆಯ ಬಗ್ಗೆ ಹೇಳಲಿಲ್ಲ. ಭೂ ಮಸೂದೆಯ ಬಗ್ಗೆ ಪ್ರತಿ ವರ್ಷವೂ ಚರ್ಚೆ ನಡೆಯುತ್ತಿತ್ತು. ಭೂ ಮಸೂದೆಯ ಬಗ್ಗೆ ಪ್ರಥಮವಾಗಿ ಏನು ಹೇಳುತ್ತಿದ್ದರು ಎಂದರೆ ಭೂಮಿಯನ್ನು ಕೊಡುತ್ತೀರಿ ಅದರ ಮುಂದಿನ ಫಾಲೋ ಆಫ್ ಆ್ಯಕ್ಷನ್ ಯಾವಾಗ ತೆಗೆದುಕೊಳ್ಳುತ್ತೀರಿ ಎನ್ನುವಂಥ ಟೀಕೆಗಳು ಸರ್ಕಾರದ ಮೇಲೆ ಬರುತ್ತಿತ್ತು. ಈ ವರ್ಷ ಅಂಥ ಟೀಕೆಗಳು ಇಲ್ಲ. ಅದರ ಬಗ್ಗೆ ಅವರು ಹೊಗಳಬಹುದಿತ್ತು. ಇವೊತ್ತು ನೇಗಿಲಭಾಗ್ಯ ಎಂಬ ಶಬ್ದ ಹೇಳಿ ರಾಜಕೀಯ ಉಪಯೋಗ ಮಾಡಿದ್ದೀರಿ ಅಂಥ ಅದಕ್ಕೆ ಅವರು ಸೀಮಿತಗೊಳಿಸಿದ್ದಾರೆ. ಇದಕ್ಕೆ ಮಾನ್ಯ ಸದಸ್ಯರು ಹಣ ಒದಗಿಸಿಲ್ಲ ಎಂದು ಹೇಳಿದರು. ಇದಕ್ಕೆ ಕೇಂದ್ರಸರ್ಕಾರದ ಸಹಾಯ

ಇದೆ, ೫೦ ಲಕ್ಷ ರೂಪಾಯಿ ಬಜೆಟ್‌ನಲ್ಲಿ ಇದಕ್ಕೆ ಕಾಣಿಸಿದ್ದೇವೆ. ಉದ್ದೇಶ ಏನು ಎಂದರೆ ಯಾರಿಗೆ ಸರ್‌ಪ್ಲಸ್ ಭೂಮಿ ಸಿಕ್ಕುತ್ತದೆ. ಪ್ರಮುಖವಾಗಿ ಸಿಕ್ಕುವುದು ಹರಿಜನರಿಗೆ. ಭೂ ನ್ಯಾಯ ಮಂಡಲಿಯಿಂದ ಭೂಮಿಯನ್ನು ಪಡೆದಂಥ ಅನೇಕ ಜನ ಸಣ್ಣ ಮತ್ತು ಮಧ್ಯಮವರ್ಗದವರಿಗೆ ಸರಿಯಾದಂಥ ಸಹಾಯ ಮಾಡಬೇಕು ಸಬ್ಸಿಡಿ, ಇನ್ನಿತರ ಕಾರ್ಯಕ್ರಮಗಳನ್ನು ಒದಗಿಸಬೇಕು ಎಂದು ನೇಗಿಲಭಾಗ್ಯ ಯೋಜನೆಯನ್ನು ಒದಗಿಸಿದ್ದೇವೆ. ಬರೀ ರಾಜಕೀಯವಾಗಿ ಭೂಮಿ ಕೊಟ್ಟು ಅವರಿಂದ ಓಟು ಪಡೆದು ತೃಪ್ತಿ ಪಡಿಸತಕ್ಕ ಒಂದು ಒಣಕಾರ್ಯಕ್ರಮ ಕೊಟ್ಟು ಅಲ್ಲಿಗೆ ನಿಲ್ಲಿಸಿದೆ ಎಂದು ತಾವು ಹೇಳುವುದು ಸರಿಯಲ್ಲ, ಸಾಮಾಜಿಕವಾಗಿ ಆರ್ಥಿಕವಾಗಿ ಸಂಪೂರ್ಣವಾಗಿ ಶುಭ್ರತೆಯಿಂದ ಅವರು ಮುಂದೆ ಬರಬೇಕು ಎನ್ನುವ ದೃಷ್ಟಿಯಿಂದ ನೇಗಿಲಭಾಗ್ಯ ಕಾರ್ಯಕ್ರಮವನ್ನು ಸರ್ಕಾರ ಒದಗಿಸಿದೆ. ಸುಮಾರು ೫-೬ ಲಕ್ಷ ಮಂದಿ ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆದು ದೇಶದ ಉತ್ಪನ್ನವನ್ನು ಹೆಚ್ಚಿಸಲಿಕ್ಕೆ ಸಕ್ರಿಯವಾದ ಪರಿಣಾಮಕಾರಿಯಾದ ಕೆಲಸ ಮಾಡಲಿಕ್ಕೆ ಇದರಿಂದ ಆಗುತ್ತದೆ ಎನ್ನುವ ವಿಚಾರವನ್ನು ನಾವು ಗಣನೆಗೆ ತೆಗೆದುಕೊಳ್ಳಬೇಕು. ಇದನ್ನು ಚುನಾವಣೆ ಇರುವಾಗ ತಂದಿದ್ದೀರಿ ಎಂದು ಕಾರ್ಯಕ್ರಮದ ಮಹತ್ವವನ್ನು ಸಣ್ಣದು ಮಾಡಬಾರದು ಎಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಕೇಳಿಕೊಳ್ಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಸಾಗರ ದೀಪ, ಅದರ ಬಗ್ಗೆ ತಮಗೆ ಗೊತ್ತೇ ಇದೆ. ಈ ಮೀನುಗಾರರ ಕಾರ್ಯಕ್ರಮದಲ್ಲಿ ನಾವು ಆಧುನೀಕರಣ ಮಾಡಬೇಕು ಅವರು ಹೆಚ್ಚು ಲಾಭ ಪಡೆಯಬೇಕೆಂಬ ಒಂದು ಯೋಜನೆಯನ್ನು ಹಾಕಿದ್ದೇವೆ. ಮೆರಿನ್ ಇಂಡಸ್ಟ್ರೀಸ್ ನಮ್ಮ ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿವೆ. ಮೀನು ರಫ್ತು ಮಾಡುವ ವಿಚಾರದಲ್ಲಿಯಾಗಲಿ, ಸಂಗ್ರಹಿಸುವ ವಿಚಾರದಲ್ಲಿಯಾಗಲಿ, ಮುಂದೆ ಇವೆ. ಆದರೆ ಯಾವುದೇ ಒಂದು ಕ್ಷೇತ್ರದ ಬೆಳವಣಿಗೆಯಾಗುವ ಸಂದರ್ಭದಲ್ಲಿ ಅಭಿವೃದ್ಧಿಯಾಗುವ ಸಂದರ್ಭದಲ್ಲಿ ಮೂಲಭೂತವಾಗಿ ಆ ಕ್ಷೇತ್ರದಲ್ಲಿ ದುಡಿಯತಕ್ಕ, ದುರ್ಬಲ ವರ್ಗದ ಜನರು ಯಾರೂ ಇದ್ದಾರೆ, ಈ ಸಾಂಪ್ರದಾಯಿಕ ಮೀನುಗಾರರ ಅವಶ್ಯಕತೆಗಳಿಗೆ ನಾವು ಹೆಚ್ಚು ಪ್ರಾಮುಖ್ಯತೆ ಕೊಡಬೇಕು, ಈ ಯಾಂತ್ರೀಕರಣದ ವೇಗದಲ್ಲಿ, ಆಧುನೀಕರಣದ ವೇಗದಲ್ಲಿ ಈ ಸಂಪ್ರದಾಯದ ಮೀನುಗಾರರಿಗೆ ಹೆಚ್ಚಿನ ಅವಶ್ಯಕತೆಗಳನ್ನು ಒದಗಿಸಿಕೊಡಬೇಕೆಂಬುದೇ ನಮ್ಮ ಉದ್ದೇಶ. ಮಧ್ಯಮ ಮತ್ತು ವೀಕರ್ ಸೆಕ್ಷನ್ ಜನರಿಗೆ ಅನುಕೂಲ ಆಗಲಿ ಎಂದು ಈ ಸಾಗರ ದೀಪ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮೆರಿನ್ ಫಿಷರೀಸ್ ಯೋಜನೆ ಬಾಬ್ತು ೩೩ ಕೋಟಿ ರೂಪಾಯಿ ಯೋಜನೆಯನ್ನು ನಾವು ವಿಶ್ವಬ್ಯಾಂಕಿಗೆ ಕಳುಹಿಸಿದ್ದೇವೆ. ಅದು ಬಂದಾಗ ಅವರಿಗೆ ಮನೆ ಕೊಡುವ ವಿಚಾರದಲ್ಲಿ ಆಗಲಿ, ಸಣ್ಣ ಸಣ್ಣ ಬೋಟ್‌ಗಳಿಗೆ ಯಂತ್ರ ಜೋಡಣೆ ಮಾಡುವ ವಿಚಾರದಲ್ಲಿ ಆಗಲಿ, ರಸ್ತೆ ಒದಗಿಸುವ ವಿಚಾರದಲ್ಲಿ ಆಗಲಿ, ಅನುಕೂಲ ಮಾಡಲಿಕ್ಕೆ ಆಗುತ್ತದೆ. ಇದರಿಂದ ಮೆರಿನ್ ಪ್ರಾಡಕ್ಟ್ಸ್ ಜಾಸ್ತಿಯಾಗುವುದೇ ಅಲ್ಲದೆ ಅಲ್ಲಿ ಉತ್ಪತ್ತಿಯಾಗುವ ಸಂಪತ್ತಿನಿಂದ ಹೆಚ್ಚು ಹಣ ಬರುತ್ತದೆ. ಈ ಸಂಪ್ರದಾಯದ ಮೀನುಗಾರರಿಗೆ ನಾವು ಇದರಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇವೊತ್ತು ಮೀನುಗಾರರು ಪಡತಕ್ಕ ಬವಣೆ ಏನಿದೆ, ಅವರು ಮಾಡತಕ್ಕ ಸಾಹಸ ಏನಿದೆ, ಅವರ ಜೀವನದ ಪ್ರಶ್ನೆ ಇವೆಲ್ಲಾ ಇದೆ ಇವುಗಳಿಗೆಲ್ಲಾ ಅನುಕೂಲ ಮಾಡಿಕೊಡತಕ್ಕದ್ದೇ ಸಾಗರ ದೀಪ, ಇದರಿಂದ ಹೆಚ್ಚು ಬದಲಾವಣೆ ಆಗತಕ್ಕ ವಿಶೇಷ ಕಾರ್ಯಕ್ರಮವನ್ನು ನಾವು ಹಾಕಿತ್ತಿದ್ದೇವೆ. ಇದರ ಬಗ್ಗೆ ಪ್ರಸ್ತಾಪ ಮಾಡುತ್ತಾ ಮಾನ್ಯ ಸದಸ್ಯರಾದಂಥ ಮಲ್ಲಪ್ಪನವರು ಒಂದು ಮಾತನ್ನು ಹೇಳಿದರು. ಇಂಗ್ಲೆಂಡ್ ಫಿಷರೀಸ್‌ಗೆ ಯಾವ ತರಹ ಪ್ರೋತ್ಸಾಹ ಇದರಲ್ಲಿ ಕಾಣಿಸಲಿಲ್ಲ ಎಂದು ಹೇಳಿದರು. ಇದು ಒಂದು ಸ್ಪೆಷಲ್ ಪ್ರೋಗ್ರಾಂ ಇದೆ. ಈಗ ಇದನ್ನು ನಾವು ಮೆನ್‌ಷನ್ ಮಾಡಿಲ್ಲ ಅಂದರೆ ಅದನ್ನು ಕೈಬಿಟ್ಟಿದ್ದೇವೆಂದು ಅಲ್ಲ. ತಾವು ಸಂಪೂರ್ಣವಾಗಿ ಡಾಕ್ಯುಮೆಂಟ್ಸ್ ನೋಡಿದರೆ ಅರ್ಥವಾಗುತ್ತದೆ. ಇಂಗ್ಲೆಂಡ್ ಫಿಷರೀಸ್ ಕಾರ್ಯಕ್ರಮವನ್ನು ಕೂಡ ಮುಂದುವರಿಸಿಕೊಂಡು ಹೋಗಿದ್ದೇವೆ. ಅದೇ ಪ್ರಕಾರ ಬೇರೆ ಬೇರೆ ಕಡೆ ಪ್ರಮುಖವಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಉದಾಹರಣೆಗೆ ಕಾರವಾರ, ಶಿವಮೊಗ್ಗ ಎರಡು ಕಡೆ ಫಿಷ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಪ್ರಾರಂಭ ಮಾಡಿದ್ದೇವೆ. ಅದು ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿದೆ. ಇಂಗ್ಲೆಂಡ್ ಫಿಷರೀಸ್‌ಗೂ ಕೂಡ ಹೆಚ್ಚಿನ ಡೆವಲಪ್‌ಮೆಂಟ್ ಮಾಡಬೇಕೆಂದು ವಿಶ್ವ ಬ್ಯಾಂಕಿನಿಂದ ೬ ಕೋಟಿ ರೂಪಾಯಿ ನೆರವು ಕೇಳಿದ್ದೇವೆ. ಆ ಒಂದು ಯೋಜನೆಯನ್ನು ವಿಶ್ವಬ್ಯಾಂಕಿಗೆ ಕಳುಹಿಸಿದ್ದೇವೆ. ಪುನಃ ಅದನ್ನು ಬಡ್ಜೆಟ್ ಸ್ಪೀಚ್‌ನಲ್ಲಿ ಪ್ರಸ್ತಾಪ ಮಾಡಲಿಲ್ಲ. ಆ ಒಂದು ಯೋಜನೆ ಇದೆ. ಈ ಇಂಗ್ಲೆಂಡ್ ಫಿಷರೀಸ್‌ನಲ್ಲಿಯೂ ಕೂಡ ಸಣ್ಣ ಸಣ್ಣ ವರ್ಗದ ಜನರಿಗೆ, ದುರ್ಬಲ ವರ್ಗದ ಜನರಿಗೆ ಈ ಕಾರ್ಯಕ್ರಮದಿಂದ ಅನುಕೂಲವಾಗುತ್ತದೆ. ಹೆಚ್ಚಿನ ಮಟ್ಟದಲ್ಲಿ ಪಂಚಾಯಿತಿಗಳು ಕೂಡ ಇದರಿಂದ ಉತ್ಪಾದನೆ ಹೊಂದುವಂತೆ ಸಂಯೋಜಿಸಬೇಕಾಗಿದೆ. ಇಂಗ್ಲೆಂಡ್ ಫಿಷರೀಸ್ ನಮ್ಮಲ್ಲಿ ಇದೆ.

ಅದನ್ನು ಕೈಬಿಟ್ಟಿಲ್ಲ. ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟು ಹೆಚ್ಚು ಹಣ ಕೊಟ್ಟು ಈ ಬಜೆಟ್ಟಿನಲ್ಲಿ ಸಂಯೋಜಿಸಿದ್ದೇವೆ. ಇನ್ನು ಮುನ್ನಡೆ ಕಾರ್ಯಕ್ರಮ ಅದು ಕೂಡ ಪೌರಕಾರ್ಮಿಕರು ನಮ್ಮ ಪುರ ಸಭೆಗಳಲ್ಲಿದ್ದಾರೆ ನಗರ ಸಭೆಗಳಲ್ಲಿದ್ದಾರೆ. ಇದುವರೆಗೆ ರೂರಲ್ ಪೂರ್ ಅವರಿಗೆ ಜನತಾ ಮನೆಗಳು, ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಕಾರ್ಯ ನಡೆಸುತ್ತಿದ್ದೇವು. ಆದರೆ ಈ ಅರ್ಬನ್ ಪೂರ್, ನಗರ, ಪಟ್ಟಣದಲ್ಲಿ ಯಾರು ಬಡವರು ಇದ್ದಾರೆ ಅವರನ್ನು ಗುರುತಿಸುವುದಕ್ಕೆ ಪ್ರಥಮವಾಗಿ ಈ ಕಾರ್ಯಕ್ರಮವನ್ನು ನಾವು ಈ ವರ್ಷದಲ್ಲಿ ಜೋಡಿಸಿದ್ದೇವೆ. ಅದರ ಜೊತೆಯಲ್ಲಿ ಮುನ್ನಡೆ ಅಂತ ಹೇಳಿ ಈ ಕಾರ್ಯಕ್ರಮವನ್ನು ಕೊಟ್ಟಿದ್ದೇವೆ. ಅದೇ ಪ್ರಕಾರ ಗೃಹ ನಿರ್ಮಾಣ ಕಾರ್ಯಕ್ರಮ ಕೊಟ್ಟಾಗ ಅದಕ್ಕೆ ಕೆಲವೇ ವರ್ಗದವರನ್ನು ಸೇರಿಸಿದ್ದೀರಿ ಎನ್ನುವ ಟೀಕೆ ಬಂದಿದೆ. ಇವೊತ್ತು ಗುಜರಾತ್‌ನಲ್ಲಿ ಲಿಜ್ಜತ್‌ಪಪ್ಪಡ್ ಎಂದು ಒಂದು ಚಳುವಳಿ ತರಹ ಕಾರ್ಯಕ್ರಮ ನಡೆಯುತ್ತಿದೆ. ಅದೇ ಪ್ರಕಾರ ನಮ್ಮ ಕರ್ನಾಟಕದಲ್ಲಿಯೂ ಕೂಡ ಸಾಕಷ್ಟು ಕೆಲಸ ಮಾಡಲಿಕ್ಕೆ ಸಾಧ್ಯ ಇದೆ. ನಿರ್ಗತಿಕರಾದಂಥ ಮಹಿಳೆಯರು, ವಿಧವೆಯರು ಇರುತ್ತಾರೆ. ಅವರನ್ನು ಗುರುತಿಸುವುದು, ವಿಶೇಷವಾಗಿ ಸಣ್ಣ ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು, ಬೇರೆ ಬೇರೆ ಕಸಬುಗಳನ್ನು ಅವರಿಗೆ ಒದಗಿಸಿ ಕೊಟ್ಟು ಮಾರ್ಕೆಟ್ ವ್ಯವಸ್ಥೆ ಒದಗಿಸಿಕೊಟ್ಟು ಬಂಡವಾಳದ ವ್ಯವಸ್ಥೆ ಒದಗಿಸಿಕೊಟ್ಟು, ಅವರಿಗೆ ತಾಂತ್ರಿಕ ತರಬೇತಿ ಕೊಟ್ಟು ಅವರನ್ನು ಸಂರಕ್ಷಿಸತಕ್ಕ ಕಾರ್ಯಕ್ರಮವೇ ಗೃಹ ಕಲ್ಯಾಣ ಕಾರ್ಯಕ್ರಮ, ಅನಂತರ ಆಶಾಕಿರಣ. ಇವರಲ್ಲಿ ಕೃಷಿ ಕಾರ್ಮಿಕರು ಇರುತ್ತಾರೆ, ಟಾಡಿ ಟ್ಯಾಪರ್ಸ್ ಇರುತ್ತಾರೆ. ಆಕಸ್ಮಿಕ ಮರಣಕ್ಕೆ ಈಡಾಗುವುದು ಇರುತ್ತದೆ, ಅವರು ಇನ್‌ಷ್ಯೂರೆನ್ಸ್ ಮಾಡಿರುವುದಿಲ್ಲ, ಕೆಲವು ಸಾರಿ ಮುಖ್ಯಮಂತ್ರಿಗಳ ಫಂಡ್‌ನಿಂದ ಸಹಾಯ ಮಾಡಬೇಕೆಂದು ವರದಿ ಬರುತ್ತದೆ. ಅದರಿಂದ ಕೆಲವರಿಗೆ ಸಿಕ್ಕುತ್ತದೆ, ಕೆಲವರು ಅರ್ಜಿ ಕೂಡ ಹಾಕುವುದಿಲ್ಲ. ಈ ರೀತಿ ಆಕಸ್ಮಿಕವಾಗಿ ಮರಣಕ್ಕೆ ಈಡಾದರೆ ಮೃತರ ಸಂಬಂಧೀಕರಿಗೆ ೫ ಸಾವಿರ ರೂ.ಗಳನ್ನೂ ಅಂಗಹೀನರಾದವರಿಗೆ ಎರಡೂವರೆ ಸಾವಿರ ರೂ.ಗಳನ್ನೂ ಪರಿಹಾರ ಧನವಾಗಿ ಕೊಡಬೇಕೆಂದು ಒಂದು ಆಶಾಕಿರಣ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಯೋಜನೆ ಹಾಕಿಕೊಂಡು, ಹೆಸರು ಪಡೆದುಕೊಂಡು ಅನಂತರ ಚುನಾವಣೆಗೆ ಅನುಕೂಲ ಆಗುವಂತೆ ಮಾಡಿಕೊಳ್ಳುತ್ತಾರೆಂದು ಯಾರಾದರೂ ಹೇಳುವುದಾದರೆ ಅದು ಸರಿಯಲ್ಲ. ದುರ್ಬಲವರ್ಗದವರಿಗೆ ಇದರಿಂದ ಅನುಕೂಲವಾಗುತ್ತದೆಯೋ ? ಇಲ್ಲವೆ ? ಎಂಬುದನ್ನು ತಾವು ತಿಳಿದು ನಮಗೆ ಹೇಳಿ. ಆದರೆ ಅದನ್ನು ಬಿಟ್ಟು ಅಧಿಕಾರದಲ್ಲಿರತಕ್ಕ ಪಕ್ಷದವರು ಇದನ್ನು ತಂದಿದ್ದಾರೆ, ಇದಕ್ಕೆ ನಾವು ಸಹಕಾರ ನೀಡುವುದು ಬೇಡ ಎಂದು ಗೇಲಿ ಮಾಡುವುದು ಸರಿಯಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಕಾರ್ಯಕ್ರಮಗಳನ್ನೂ ಕೂಡ ಆದ್ಯತೆಯ ಮೇಲೆಯೇ ರೂಪಿಸಿಕೊಂಡಿದ್ದೇವೆ. ರಾಜ್ಯದ ಯೋಜನೆಗಾಗಿ ಇಟ್ಟಿರತಕ್ಕ ಒಟ್ಟು ಹಣದಲ್ಲಿ ಸುಮಾರು ೫೦ ಭಾಗದಷ್ಟು ಹಣವನ್ನು ಕೇವಲ ನೀರಾವರಿ ಮತ್ತು ವಿದ್ಯುಚ್ಛಕ್ತಿಗೋಸ್ಕರವೇ ಕೊಡುತ್ತಿದ್ದೇವೆ.

ಮಾನ್ಯ ಸಭಾಧ್ಯಕ್ಷರೆ, ಪರಿಜನಗಿರಿಜನರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರಿಂದ ನಾನು ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಸೋಷಿಯಲ್ ಸೆಕ್ಯುರಿಟಿ ವೆಲ್‌ಫೇರ್‌ಗಾಗಿ ೬೧ ಕೋಟಿ ರೂ.ಗಳನ್ನು ಇಟ್ಟಿದ್ದೇವೆ. ಇದನ್ನೆಲ್ಲಾ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್, ಮತ್ತು ಹಿಂದುಳಿದವರ ಪ್ರಗತಿಗಾಗಿ ಖರ್ಚುಮಾಡುತ್ತಿದ್ದೇವೆ How is it biased towards the weaker section ? The provisions made for Special Component Plan and Tribal Sub Plan is Rs. 84 crores ; for Old age pension Rs. 17 crores ; outlay for Physically Handicapped Rs. 2 crores ; We have kept this much for the weaker sections. Regarding rural investment and urban investment, during the period 1980–85 for rural investment the amount is Rs. 1 453 crores which comes to 64% and for urban investment it is Rs, 809 crores which comes to 36% The amount provided for Rural Development during 1981–82 is Rs 208 crores i.e., 63% and for urban investment it is Rs. 156 crores i.e., 37% ; for 82-83 for rural development Rs. 304 crores i.e., 64% and for urban development Rs. 171 crores i.e., 36% have

been provided. In the Fifth Five Year Plan period rural investment was only 62%. That means we have stepped up the investment on the rural sector to 64% from 62%. This is what we have achieved. We have achieved that in the year 1982-83 itself even without awaiting for the main objective to be achieved by the close of the Sixth Five Year Plan. Maybe, we may be in a position to cross the target that is fixed for the Sixth Five Year Plan.

(MR. DEPUTY SPEAKER in the chair)

Economy in the administration may be another point which the hon. Members should not. Ours is the smallest Cabinet in the Country when compared to other States taking into account the population and the size of the investment we make. Squander mania is another allegation that you made. Perhaps is does not refer to this Ministry. Maybe to the earlier Ministry they must have referred. This shows the political determination and political stability, the uncompromising attitude to invest money on the development of the State and orientation of the mind of the Government for development. This is the smallest Cabinet in the entire country. Nobody can deny this. This could be the proper reply as far as the allegation of squander mania, which is presented by some of the Members, in concerned.

ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ, ವರ್ಗಾವಣೆ ವಿಚಾರದಲ್ಲಿ ಆಗಲಿ, ನೇಮಕಾತಿ ವಿಚಾರದಲ್ಲಾಗಲಿ ಯಾವುದಾದರೂ ಒತ್ತಡಕ್ಕೆ ಇವರು ಮಣಿದಿದ್ದಾರೆ ಎಂದು ಯಾರೂ ಕೂಡ ಹೇಳಲಿಲ್ಲ. ಅಲ್ಲದೆ ತಾವು ಅದನ್ನು ಹೇಳುವಂತೆಯೂ ಕೂಡ ಇಲ್ಲ.

ಇನ್ನು ಅಡಿಷನಲ್ ರಿಸೋರ್ಸಸ್ ಮೊಬಲೈಸೇಷನ್ ಬಗ್ಗೆ ಹೇಳುವುದಾದರೆ here we richly deserve appreciation. ಏಕೆಂದರೆ, ನಾವು ೨೫ ಕೋಟಿ ರೂ.ಗಳ ಹೊಸ ತೆರಿಗೆಯನ್ನು ಈ ವರ್ಷದಲ್ಲಿ ಹಾಕಿದ್ದೇವೆ. ಈ ರೀತಿ ತೆರಿಗೆಯನ್ನು ಹಾಕುವಾಗ ನಾವು ಹಾಕಿದಂಥ ತೆರಿಗೆಯನ್ನು ವಸೂಲ್ಮಾಡತಕ್ಕ ಕೆಲಸದಲ್ಲಿಯೂ ಕೂಡ ಪರಿಣಾಮಕಾರಿ ಪಾತ್ರವನ್ನೇ ತೋರಿಸಿದ್ದೇವೆ. ಈ ರೆಕಾರ್ಡ್ ಪರ್‌ಫಾರ್ಮೆನ್ಸ್ ಭೈ ಎಕ್ಸೈಸ್ ಡಿಪಾರ್ಟ್‌ಮೆಂಟ್ ಏನು ಎಂಬುದನ್ನು ನಾನು ಈಗಾಗಲೇ ಉತ್ತರ ಕೊಡುವಾಗ ಸಾಕಷ್ಟು ವಿವರವಾಗಿ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಅದು ಈಗಾಗಲೇ ಈ ಸದನದ ನಡವಳಿಕೆಯಲ್ಲಿ ಕೂಡ ಹೋಗಿದೆ. ಇಷ್ಟು ಮಾತ್ರವಲ್ಲದೆ, ೮೧–೮೨ರಲ್ಲಿದ್ದ ಡಿಫಿಸಿಟ್‌ನ್ನು ಈಗ ೮ ಕೋಟಿ ರೂ.ಗೆ ಇಳಿಸಿದ್ದೇವೆ. ನಾವು ತೆಗೆದುಕೊಂಡ ದಿನನಿತ್ಯದ ಕಾರ್ಯಕ್ರಮದ ಪ್ರಕಾರ ಹೇಳುವುದಾದರೆ ಬಹುಶಃ ಈ ತಿಂಗಳು ಮುಗಿಯುವುದರೊಳಗಾಗಿ ಈ ಡಿಫಿಸಿಟ್ ೮ ಕೋಟಿಗಿಂತಲೂ ಕಡಿಮೆಯಾಗುವ ನಿರೀಕ್ಷೆ ಇದೆ. ಈ ವರ್ಷದಲ್ಲಿ ತೆರಿಗೆಯನ್ನು ವಸೂಲ್ಮಾಡತಕ್ಕ ಕ್ರಮದಲ್ಲಿ ಯಶಸ್ವಿ ಮತ್ತು ಇರತಕ್ಕ ಡಿಫಿಸಿಟ್‌ನ್ನು ಕಳಗೆ ಇಳಿಸುವುದರಿಂದ ನಾನ್ ಡೆವಲಪ್‌ಮೆಂಟಲ್ ಎಕ್ಸ್‌ಪೆಂಡಿಚರ್‌ನ್ನು ಸಂಪೂಣವಾಗಿ ಹತೋಟಿಯಲ್ಲಿ ಇಟ್ಟುಕೊಂಡಿದ್ದು ಮಾತ್ರವಲ್ಲ ಅದಕ್ಕೆ ಕೆಳಗೆ ಇಳಿಸುವುದರ ಮೂಲಕ ಯಶಸ್ವೀ ಕಾರ್ಯವನ್ನೂ ನಾವು ಮಾಡಿದ್ದೇವೆ. ದೇಶದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಸಲುವಾಗಿ ನಾವು ೨೫ ಕೋಟಿ ರೂ.ಗಳ ಹೊಸ ತೆರಿಗೆಯನ್ನು ಹಾಕಿದ್ದೇವೆ. ಇದರ ಬಗ್ಗೆ ಯಾರೂ ಕೂಡ ಆತಂಕಪಡಬೇಕಾಗಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಭಾಸ್ಕರನಾಯ್ಡು.—ಸ್ವಾಮಿ ಅಧ್ಯಕ್ಷರೆ, ಇದುವರೆಗೂ ಸದನದಲ್ಲಿ ಯಾವ ಸಚಿವರೂ ಇಲ್ಲ, ಸದಸ್ಯರೂ ಹೆಚ್ಚಾಗಿಲ್ಲ ಎಂದು ಮಾನ್ಯ ವಿರೋಧ ಪಕ್ಷದವರು ಹೇಳುತ್ತಿದ್ದರು. ಅವರೆ ಕಳೆದ ಒಂದು ಗಂಟೆಯಿಂದಲೂ ನಮ್ಮ ಮಾನ್ಯ ಆರ್ಥಿಕ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಆದರೆ

ಅವರ ಉತ್ತರವನ್ನು ಕೇಳುವುದಕ್ಕೆ ವಿರೋಧ ಪಕ್ಷದ ಸದಸ್ಯರು ಯಾರೂ ಇಲ್ಲ, ಹಾಗಾದರೆ ಮಾನ್ಯ ಆರ್ಥಿಕ ಸಚಿವರು ಯಾರಿಗೋಸ್ಕರ ಈ ಉತ್ತರ ಕೊಡಬೇಕು?

ಶ್ರೀ ಎಂ. ವೀರಪ್ಪಮೊಯ್ಲಿ.—ಈ ದೇಶದ ಈತಿಹಾಸದಲ್ಲಿ ರಿಸೋರ್ಸಸ್ ಮೊಬಲೈಸೇಷನ್ ಬಗ್ಗೆ ಬಹಳ ವಿಸ್ತಾರವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರಿಂದ ನಮಗೆ ಸುಮಾರು ೮ ಕೋಟಿ ರೂ. ವಸೂಲಾಗಿದೆ. ಇಂಥ ಒಂದು ದೊಡ್ಡ ಸಾಧನೆಯನ್ನು ನಾವು ಮಾಡಿದ್ದೇವೆ. ಎಕ್ಸ್‌ಕ್ಲೂಸಿವ್‌ಲಿ ರಿಸೋರ್ಸ್ ಮೊಬಿಲೈಸೇಷನ್ ಮೀಟಿಂಗ್ ಹಾಕಿಕೊಂಡಿದ್ದರಿಂದ ಬಹಳ ಅನುಕೂಲವಾಯಿತು. ನಾನು ಆಗಲೇ ಹೇಳಿದಂತೆ ೮೧–೮೨ನೇ ಸಾಲಿನಲ್ಲಿ ರಿವೈಸ್ಡ್ ಟಾರ್ಗೆಟ್ ೫೩ ಕೋಟಿ ರೂ.ಗಳನ್ನು ಇಟ್ಟುಕೊಂಡಿದ್ದರೂ ಆ ವರ್ಷದಲ್ಲಿ ಸ್ಮಾಲ್ ಸೇವಿಂಗ್ಸ್‌ನಲ್ಲಿ ನಾವು ೫೫ ಕೋಟಿ ರೂ.ಗಳನ್ನು ಗಳಿಸಿದ್ದೇವೆ. ಇದರ ಹಿಂದಿನ ವರ್ಷ ಅಂದರೆ ೮೦–೮೧ನೇ ಸಾಲಿನಲ್ಲಿ ಕೇವಲ ೪೬ ಕೋಟಿ ರೂ. ಮಾತ್ರ ಇತ್ತು.

ಇನ್ನು ಸರ್ಕಾರಿ ಉದ್ಯಮಗಳ ಬಗ್ಗೆ ಹೇಳುವುದಾದರೆ ಯಾವಾಗಲೂ ಈ ಉದ್ಯಮಗಳ ಬಗ್ಗೆ ಟೀಕೆ ಇದ್ದೇ ಇರುತ್ತದೆ. ಸದಾಕಾಲದಲ್ಲಿಯೂ ನಮ್ಮ ಸರ್ಕಾರಿ ಉದ್ಯಮಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಲಾಭಗಳಿಸುತ್ತಿಲ್ಲ ಎನ್ನುವ ಒಂದು ಟೀಕೆ ಸದಾಕಾಲದಲ್ಲಿಯೂ ಇದ್ದೇ ಇರುತ್ತದೆ ಆದರೆ ಈಗ ಆ ಟೀಕೆ ಬಹಳ ಕಡಿಮೆಯಾಗಿದೆ, ಏತಕ್ಕೆಂದರೆ ಹೆಚ್ಚಿನ ಸರ್ಕಾರಿ ಉದ್ಯಮಗಳು ಲಾಭಗಳಿಸುತ್ತಿವೆ. ಮಾನ್ಯ ದಿವಂಗತ ವಿಶ್ವೇಶ್ವರಯನವರು ಕಟ್ಟಿದಂಥ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ೧೯೮೧–೮೨ರಲ್ಲಿ ಲಾಭ ಗಳಿಸಿ ದಾಖಲೆಯನ್ನು ಸ್ಥಾಪಿಸಿದೆ. ಕಳೆದ ವರ್ಷದ ಲಾಭ ೫.೨೨ ಕೋಟಿ ರೂಪಾಯಿಗಳು ಒಟ್ಟು ೨೮ ಉದ್ಯಮಗಳು ೧೫ ಕೋಟಿ ರೂಪಾಯಿಗಳಷ್ಟು ಲಾಭವನ್ನು ಗಳಿಸಿದೆ. ಉಳಿದ ಉದ್ಯಮಗಳಿಂದ ಗಳಿಸಿದಂಥ ಹಣ ೨ ಕೋಟಿ ರೂಪಾಯಿಗಳು. ಹೀಗೆ ೧೯೮೦–೮೧ರಲ್ಲಿ ಗಳಿಸಿದಂಥ ಲಾಭಾಂಶ ಶೇಕಡ ೬ರಷ್ಟು ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ೧೯೭೯–೮೦ರಲ್ಲಿ ಕೇವಲ ೨.೯ ಪರ್ಸೆಂಟ್ ಮಾತ್ರ ಗಳಿಸಿತ್ತು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ೧೯೮೧–೮೨ರ ಫೈನಾನ್ಸ್ ಅಕೌಂಟ್ಸ್ ಲೆಕ್ಕದ ಪ್ರಕಾರ ಕೇವಲ ಎರಡು ಫ್ಯಾಕ್ಟರಿಗಳು ಮಾತ್ರ ಲಾಭ ಗಳಿಸಿದೆ ಎಂದು ಅಕೌಂಟೆಂಟ್ ಜನರಲ್ ಹೇಳಿದ್ದಾರೆ. ಆದರೆ ನೀವು ಹೇಳುತ್ತಿದ್ದೀರಿ ೧೫ ಕೋಟಿ ರೂಪಾಯಿಗಳಷ್ಟು ಲಾಭಗಳಿಸಿದೆ ಎಂದು.

ಶ್ರೀ ಎಂ. ವೀರಪ್ಪಮೊಯಿಲಿ.—೧೯೮೧–೮೨ರ ಸಾಲಿನ ಆಡಿಟ್ ಆಗಬೇಕಾಗಿದೆ. I can give you the accounts for 1980-81. In respect of 81-82, accounts are yet to be finalised and audited. That I can give you later.

ಶ್ರೀ ಬಿ. ಬಸವಲಿಂಗಪ್ಪ.—೧೯೮೦–೮೧ರ ಪ್ರಕಾರ ಎರಡು ಫ್ಯಾಕ್ಟರಿಯನ್ನು ಬಿಟ್ಟರೆ ಉಳಿದ ಯಾವುದೇ ಫ್ಯಾಕ್ಟರಿ ಲಾಭಮಾಡಿಲ್ಲವೆಂದು ಹೇಳಿದ್ದಾರೆ.

ಶ್ರೀ ಪಿ. ರಾಮದೇವ್.—ಪಿ.ಎ.ಸಿ ಚೇರ್‌ಮೆನ್‌ರವರು ಹೇಳಿರುವುದನ್ನು ನಂಬಬೇಕೋ ಅಥವಾ ನೀವು ಹೇಳುವುದನ್ನು ನಂಬಬೇಕೋ ಅರ್ಥವಾಗುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಅವರು ಯಾವ ಆದಾರದ ಮೇಲೆ ಹೇಳುತ್ತಿರುತ್ತಾರೆ.

ಶ್ರೀ ಪಿ. ರಾಮದೇವ್.—ನೀವು ಹೇಳುತ್ತಿರುವುದು ಸರಿಯಲ್ಲ. ಮಿಸ್‌ಲೀಡ್ ಮಾಡುತ್ತಿರುತ್ತೀರಿ.

ಶ್ರೀ ಎಂ. ವೀರಪ್ಪಮೊಯಿಲಿ.—೧೯೮೦–೮೧ರ ಅಕೌಂಟ್ಸ್...I have got the list of the profits earned. I am not just stating it now.

SRI A. LAKSHMISAGAR.—Sir, the point to be noted is, if you take the total return in the context of the total investment you have made, you have got to give the percentage of return. This is No. 1. No. 2 is the companies which are said to have made some profits are companies some of whose accounts are not yet finalised. You have also taken them into consideration. A total picture has emerged where it can be said that some profit has been made. But the real question that you have got to answer is what is the return to the general

revenue flowed back out of the investment made in these Government companies. That is what you have to make it very clear.

SRI M. VEERAPPA MOILY.—I am giving the total climate. How they are coming out of rut one by one. How they are earning profits. That is very much important. After all profit is judged on the performance of the units and that is what I am stating.

SRI A. LAKSHMISAGAR.—Sir, in respect of 1980-81 Rs. 1.31 crores is the net profit and it works out to 1.4 percent return on the total investment That is as per the accounts.

SRI M. VEERAPPA MOILY.—I want to mention particularly the units which have gone into production, namely, Vikrant Tyres Ltd., and Mysore Paper Mills Ltd. I know even the units like M.A.C.C. which was just sinking, the M.E.I. which was a sick unit, the Mysore Sugar company which was suffering loss, all these companies have improved and they have been showing the record performance. This is a good symptom.

SRI A. LAKSHMISAGAR.—Performance has been improved, but net profit?

SRI M. VEERAPPA MOILY.—Mysore Sugar has made profit. It was under loss. Like that I can illustrate a number of such companies. ಇನ್ನು ಸ್ವಲ್ಪಮಟ್ಟಿಗೆ ಸನ್ಮಾನ್ಯ ಸದಸ್ಯರನೇಕರು ಕೆಲವು ವಿಚಾರಗಳನ್ನು ಹೇಳಿದರು. ಡಿಬೆಂಚರ್ ಸಾಲದ ಬಗ್ಗೆ ಹೇಳಿದರು. ಕೇಂದ್ರ ಸರ್ಕಾರದ ಸಾಲ ನಮ್ಮ ಮೇಲೆ ಇರುವಾಗ ಮತ್ತೆ ಸಾಲ ಎತ್ತ ಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಬೇಕಾಗುತ್ತದೆ ಮತ್ತು ರಿಸರ್ವ್ ಬ್ಯಾಂಕಿನಲ್ಲಿ ನಾವು ಎತ್ತ ತಕ್ಕಂಥ ಸಾಲದ ಮಿತಿಯುಮೇಲೆ ಹೋಗುತ್ತದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಸಾಲದ ಮಿತಿ ಹಾಕುತ್ತಾರೆ. ರಾಜ್ಯದ ಅಭಿವೃದ್ಧಿಗೆ ಗಣನೀಯ ಪೂರೈಕೆಯಾಗಿದೆ ಎಂಬ ಅಂಕಿಸಂಖ್ಯೆಗಳನ್ನು ನಾವು ಕೊಟ್ಟಿದ್ದೇವೆ. ನಾವು ಈ ವರ್ಷದ ಬಡ್ಜೆಟ್ ಎಸ್ಟಿಮೇಟ್‌ನ್ನು ಒಂದು ತರಹ ಮಾಡುತ್ತೇವೆ. ಈ ವರ್ಷ ಬೇರೆ ತರಹ ಮಾಡಿರುತ್ತೇವೆ. ಮಾನ್ಯ ಸದಸ್ಯರಾದ ಗಂಗಾಧರ್‌ರವರು ಮಾತನಾಡುವಾಗ ಹೇಳಿದರು ಬಡ್ಜೆಟ್ ಎಸ್ಟಿಮೇಟ್‌ನ್ನಿ ಬಹಳ ಹೆಚ್ಚು ಬದಲಾವಣೆ ಮಾಡಿದ್ದಾರೆ, ಸಾಲ ತೆಗೆದುಕೊಳ್ಳುವಾಗ ಬಹಳ ಕಡಿಮೆಮಾಡಿದ್ದಾರೆಂದು ಹೇಳಿದರು It is not correct position. ಎಸ್ಟಿಮೇಟ್ ಮಾಡುವಾಗ ರಿಸರ್ವ್ ಬ್ಯಾಂಕ್‌ನ ಮಿತಿಯನ್ನು ಆ ಮೇಲೆ ಹಾಕುತ್ತೇವೆ. ಇಲ್ಲದಿದ್ದರೆ ಕೇಂದ್ರ ಸರ್ಕಾರದ ಅನುಮತಿ ಬರುವುದಿಲ್ಲ. ಅಗತ್ಯವಿಲ್ಲದಿದ್ದರೆ ಸಾಲವನ್ನು ಕೂಡ ಎತ್ತುವುದಿಲ್ಲ. ಸಾಲದ ಪ್ರಮಾಣವನ್ನು ನಾವು ಹತೋಟಿಯಲ್ಲಿಡಬೇಕಾಗುತ್ತದೆ It is not an argument to say that to the Government of India ತಪ್ಪು ವಿವರಗಳನ್ನು ಕೊಟ್ಟರು ಎಂದು ಹೇಳತಕ್ಕದ್ದು ಸರಿಯಲ್ಲ. That does not stand to reason at all.

SRI A. LAKSHMISAGAR.—The point I was trying to make out on this issue was that the policy that is adopted by the Government of India has been crystallised as the permission it should give to the State Government to raise maximum amount of loans, that is the market borrowings. It has decidedly one advantage viz., the contributaries to this market borrowings are the Government companies and the Financial Institutions. The interest that is payable is very much less i.e 6% or even less than that. If the

State Government is in a position to get maximum share of lans to be raised from the market borrowings, it has decidedly an advntage. Of course, no definite policy has been finalised by the Government of India in consultation with the Reserve Bank of India. You ave got to improve upon it. Otherwise you will be compelled to borov from other sources by paying higher rate of interest.

ಶ್ರೀ ಎಂ. ವೀರಪ್ಪಮೊಯಿಲಿ.—ರಾಜ್ಯದ ವೆಚ್ಚದ ವಿಚಾರದಲ್ಲಿ ಬರುವುದಾದರೆ, ರಾಜ್ಯೋತ್ಸವದಲ್ಲಿ ಮಾಡಿದಂತಹ ವೆಚ್ಚ ಅಭಿವೃದ್ಧಿ ಪೂರಕವಾಗಿ ಆಗಿಲ್ಲ ಎನ್ನುವ ವಾದ ಬರುತ್ತಿದೆ. ಮಾನ್ಯ ಸದಸ್ಯರಾದ ಡಾ. ತಿಮ್ಮೇಗೌಡರು ಪ್ರಸ್ತಾಪ ಮಾಡಿದ್ದಾರೆ. ಫೈನಾನ್ಸ್ ಕಮಿಷನ್7 ವರದಿಯನ್ನು ಕೊಟ್ಟಾಗ ಅದರ ಪರಿಣಾಮ ಏನಾಯಿತೆಂದರೆ It was not only declared as surplus ಕರ್ನಾಟಕಕ್ಕೆ ಯಾವುದೇ ರೀತಿಯಾದಂತಹ .ಜಿರೋ' ಸಿಕ್ಕಿಲ್ಲ. even upto to tie construction of District Courts are concerned ರಾಜ್ಯೋತ್ಸವದಲ್ಲಿ ಕೆಲವು ಸಾರಿ ಅಭಿವೃದ್ಧಿ ವೆಚ್ಚದ ಅಂಶಗಳು ಕೆಲವು ಇವೆ. ರಾಜ್ಯೋತ್ಸವ ಅಭಿವೃದ್ಧಿಗೆ ಪೂರಕವಾಗಿ ಇಲ್ಲವೆಂದು ಹೇಳತಕ್ಕದ್ದು ಸರಿಯಲ್ಲ. ನಮ್ಮ ಆರ್ಥಿಕ ಸಮೀಕ್ಷೆಯನ್ನು ನೋಡಿದರೆ ನಮ್ಮ ಅರ್ಥ ವ್ಯವಸ್ಥೆ ಇಳಿಮುಖವಾಗಿಲ್ಲವೆಂಬುದು ಗೊತ್ತಾಗುತ್ತದೆ. ಎಲ್ಲೂ ಇಳಿಮುಖವಾಗಿಲ್ಲ ಪುಟ ೨೬ರ ಪ್ರಕರ ಒಟ್ಟು ವೆಚ್ಚ ೭೨ ಪರ್ಸೆಂಟ್ ಇದೆ. ಅಭಿವೃದ್ಧಿ ವೆಚ್ಚದಲ್ಲಿ ರಾಜ್ಯೋತ್ಸವದ ವೆಚ್ಚ, ಬಂಡವಾಳ ವೆಚ್ಚ ಅಭಿವೃದ್ಧಿ ಸಾಲಗಳೂ ಕೂಡ ಸೇರಿವೆ. ಆದ್ದರಿಂದ ಅಭಿವೃದ್ಧಿಗೆ ಖರ್ಚು ಮಾಡುವಂತಹ ಆಯಿದೆ ಸುವ್ಯವಸ್ಥೆಗೆ ಖರ್ಚು ಮಾಡುವಂತಹ ಹಣವನ್ನು ಸಾಲ ಮರಪಾವತಿ ಅಭಿವೃದ್ಧಿಗೆ ಹೊರತಾಗಿದೆ ಎಂದು ಹೇಳುವುದು ಸರಿಯಲ್ಲವೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಿತವ್ಯಯ ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. Loan from the Governmentof Idia ಕೇಂದ್ರ ಸರ್ಕಾರದಿಂದ ನಮಗೆ ಬರುವಂತಹದ್ದು ಕಡಿಮೆಯಾಗಿದೆ ಎಂದು ಹೇಳಿದ್ದಾರೆ. 4 to 5% internal debt has increased. I need not say it again ಮಿತವ್ಯಯ ಮಾಡಬೇಕಾಗಿದೆ. ನಾವು ಈಗ ಎನ್.ಆರ್.ಇ.ಪಿ. ಮಾಡಿದ್ದೇವೆ.

SRI A. LAKSHMISAGAR.—The point I was tryig to make out was that taking total effect of all these schemes whic are under way, do not touch the real problem of rural unemploymet or under cmplyment except the new plan which you termt as Cluster Villages Schemeor some such thing. The point was thaall these schemes put together provide only seasonal employmeot o rural people for a period of 100 days, You have integrated EA into NREP for full time but the special emphasis in the schemes to provide only seasonal emploment. This will not solve the ural unemployment or under employment. There is no plan as yet adumbrated by the Goverment which tries to root out the ru unemployment or under employment. It only touches the fringe f the problem.

ಶ್ರೀ ಎಂ. ವೀರಪ್ಪಮೊಯಿಲಿ.—ಈಗ ಎನ್.ಆರ್.ಇ ಮಾಡಿದ್ದೇವೆ. ಮೊದಲು ಇ.ಎ.ಎಸ್ ಸ್ಕೀಮ್ ಇತ್ತು. That scheme of course is for 100 days. It was seasonal. ಎನ್.ಆರ್.ಇ.ಪಿ. ಕಾರ್ಯಕ್ರಮ ಇಡೀ ವರ್ಷವರೆಡಿಕೊಂಡಿದೆ. Does not take care of one season or two season. ಸಾರ್ವಕವಾಗಿ ಉದ್ಯೋಗವನ್ನು ಕೊಡತಕ್ಕ ಕಾರ್ಯಕ್ರಮ. That is already answered. ನಾವು ಈಗಾಗಲೇ ನಮ್ಮ ಬಡ್ಜೆಟ್‌ನಲ್ಲಿ ಕಾಣಿಸಿದ ಹಾಗೆ ಉದ್ಯೋಗಸ್ಥರು ತಾಂತ್ರಿಕವಾದ ವಿಷಯನ್ನು ಪಡೆದು ಕೆಲಸ ಮಾಡುತ್ತಿದ್ದಾರೆ. ಗ್ರಾಜುಯೇಟ್ಸ್‌ಗಳಿಗೆ ಯಾವ ಕಾರ್ಯಕ್ರಮಗಳು ಇಲ್ಲವೆಂದು ಕ್ಷಪಡಿಸಿದ್ದಾರೆ. ಅದು ಸರಿಯಲ್ಲ ನಾವು ಕೆಲಸ ಮಾಡುತ್ತಿದ್ದೇವೆ. We have pronounced e enhancement from 30,000

to one lakh units to give employment to unemployed graduates or educated unemployed, By increasing it to one lakh, units, additional employment for about 15 lakhs educated unemployed youths will be provided within three years i.e., by 1985 or by the close of the sixth Five Year plan. Necessary training and seed money have been given for these programmes. Fifteen lakh more people will be employed under this crash programme to have one lakh small scal units. This is a very big programme which has never been thought of at any time. We are launching this programme right from 1982-83. ನಾವು ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗವನ್ನು ಕೊಡತಕ್ಕದ್ದು ಒಂದು ಕಡೆ ಆದರೆ ವಿದ್ಯಾವಂತ ಯುವಕ-ಯುವತಿಯರಿಗೆ ಉದ್ಯೋಗ ಕೊಡತಕ್ಕ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಆಳವಡಿಸಿಕೊಂಡಿದೆ. ಇದರಿಂದ ಒಂದು ರೀತಿಯ ನಿರುದ್ಯೋಗ ಸಮಸ್ಯೆ ಪರಿಹಾರ ಮಾಡಲಿಕ್ಕೆ ಪ್ರಯತ್ನಪಟ್ಟು ಹೆಚ್ಚಿನ ರೀತಿಯಲ್ಲಿ ಯುವ ಜನಾಂಗದಲ್ಲಿ ವ್ಯಾಪಾರ್ಡು ನಿರ್ಮಿಸುವಲ್ಲಿ ಸರಿಯಾದ ಪ್ರಯತ್ನವನ್ನು ಮಾಡಿದ್ದೇವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾವು ಈ ಸಲ ರೂರಲ್ ಎಲಕ್ಟ್ರಿಫಿಕೇಷನ್‌ಗೆ ಮತ್ತು ಇರಿಗೇಷನ್‌ಗೆ ಹೆಚ್ಚು ಹಣ ಒದಗಿಸಿದ್ದೇವೆ.

ಇನ್ನು ಮಾನ್ಯ ಸದಸ್ಯರಾದಂಥ ಶ್ರೀ ದೇವರಾಜ ಅರಸ್ ಅವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಅವರು ಸಭೆಯಲ್ಲಿ ಇಲ್ಲ. ಅವರು ಯಕ್ಷಗಾನಕ್ಕೆ ಈ ಬಡ್ಜೆಟ್‌ನ್ನು ಹೋಲಿಕೆ ಮಾಡಿದರು. ಯಕ್ಷಗಾನ ಮಾಡುವವರು ವೇಷಭೂಷಣದಲ್ಲಿದ್ದಾಗ ಚೆನ್ನಾಗಿ ಕಾಣುತ್ತಾರೆ, ಅದನ್ನು ಕಳಚಿದಾಗ ಬಡಕಲ ಶರೀರದಂತೆ ಕಾಣುತ್ತಾರೆಂದು ಹೇಳಿ, ಈ ಸಲದ ಬಡ್ಜೆಟ್‌ಗೆ ಉದಾಹರಣೆ ಕೊಟ್ಟು ಹೇಳಿದರು. ಈ ಯಕ್ಷಗಾನ ಒಂದು ಸಮುದಾಯಕ್ಕೆ ಸೇರಿದ್ದು. ಬಹಳಷ್ಟು ದೊಡ್ಡ ಸಮುದಾಯವನ್ನು ಪ್ರತಿನಿಧಿಸುವಂತಹ ದೊಡ್ಡ ಕಲೆ ಇದಕ್ಕಿಂತ ಬೇರೊಂದು ಇಲ್ಲ. ಆದ್ದರಿಂದ ಅದಕ್ಕೂ ಇದಕ್ಕೂ ಹೋಲಿಕೆ ಮಾಡುವುದು ಸರಿಯಲ್ಲ. ಇಲ್ಲಿ ನಾವು ಸರಿಯಾದ ಮಾಹಿತಿಗಳನ್ನು ಕೊಟ್ಟಿದ್ದೇವೆ. ನಾವು ನೀರಾವರಿ ಮೇಲೆ ಹೂಡಿರುವಂತಹ ಬಂಡಾವಳವನ್ನು ನೋಡುವುದಾದರೆ, as a Chief Minister who headed for 8 years would have not given this aualysis at all. Just for the statistics propose I will give figures. ಇದು ಅವರಿಗೂ ಗೊತ್ತಿದೆ. ಆದರೂ ಅವರು ಕೆಲವು ಅಂಕಿಅಂಶಗಳನ್ನು ಹೋಲಿಕೆ ಮಾಡಿಕೊಂಡು ಇಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ನೀರಾವರಿ ಮೇಲೆ ಬಂಡವಾಳ ಹೂಡಿ ಕೂಡಲೇ ಅದರಿಂದ ಪ್ರತಿಫಲ ಬರುವುದಿಲ್ಲವೆಂಬುದು ಅವರಿಗೂ ಗೊತ್ತಿದೆ. ಯಾರೇ ಅಧಿಕಾರದಲ್ಲಿರಲಿ, ಹಣ ಖರ್ಚು ಮಾಡಿದ ಕೂಡಲೇ ಇಂತಿಷ್ಟು ಎಕರೆಗಳಿಗೆ ನೀರು ಕೊಟ್ಟಿದ್ದೇವೆಂದು ಹೇಳುವುದಕ್ಕೆ ಖಂಡಿತವಾಗಿ ಬರುವುದಿಲ್ಲ. Let us have a clear picture about our irrigation projects. ಈಗ ನಾನು ೧೯೬೦-೬೧ ರಿಂದ ಇವರು ಅಧಿಕಾರಕ್ಕೆ ಬರುವವರೆಗೆ ಈ ಬಾಬಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ಇವರು ಅಧಿಕಾರದಲ್ಲಿದ್ದಾಗ ಎಷ್ಟು ಹಣ ಖರ್ಚು ಮಾಡಿದರು ಎಂಬ ಬಗ್ಗೆ ಕೆಲವು ವಿವರಗಳನ್ನು ಕೊಟ್ಟರೆ ಅವರಿಗೂ ಸಹ ನಿಜ ಸಂಗತಿ ಏನೆಂಬುದು ಗೊತ್ತಾಗುತ್ತದೆ. ೧೯೬೦-೬೧ ರಿಂದ ೧೯೭೧-೭೨ರ ವರೆಗೆ ೧೪೭ ಕೋಟಿ ರೂಪಾಯಿಗಳನ್ನು ಅಂದರೆ ಸರಾಸರಿಯಾಗಿ ೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆನಂತರ ೧೯೭೨-೭೩ ರಿಂದ ೧೯೭೯-೮೦ರ ವರೆಗೆ ಒಟ್ಟು ೪೫೩ ಕೋಟಿ ರೂ. ಗಳನ್ನು ಅಂದರೆ ಸರಾಸರಿ ೫೭ ಕೋಟಿ ರೂ.ಗಳನ್ನು ಇವರು ಅಧಿಕಾರದಲ್ಲಿದ್ದಾಗ ಖರ್ಚು ಮಾಡಿದ್ದಾರೆ. ಆನಂತರ ನಾವು ಅಧಿಕಾರಕ್ಕೆ ಬಂದಮೇಲೆ ಎರಡು ವರ್ಷಗಳಲ್ಲಿ ೨೧೪ ಕೋಟಿ ರೂ.ಗಳನ್ನು ಅಂದರೆ ಸರಾಸರಿ ೧೦೭ ಕೋಟಿ ರೂ.ಗಳ ಪ್ರಕಾರ ಖರ್ಚು ಮಾಡಿದ್ದೇವೆ. ಮೊದಲು ಸರಾಸರಿ ೧೫ ಕೋಟಿ ಇದ್ದದ್ದು ೫೭ ಕೋಟಿಗೆ ಹೆಚ್ಚಿತು ಅನಂತರ ೧೦೭ ಕೋಟಿಗೆ ಅಂದರೆ ಒಂದಕ್ಕೆ ಎರಡರಷ್ಟು ಜಾಸ್ತಿಯಾಯಿತು. ಇದೇರೀತಿ ಸಣ್ಣ ನೀರಾವರಿ ಬಗ್ಗೆಯೂ ಸಹ ೧೯೭೦ ರಿಂದ ೧೯೭೨ರವರೆಗೆ ೪೪ ಕೋಟಿ ರೂ. ಗಳನ್ನು ಖರ್ಚು ಮಾಡಿದ್ದಾರೆ. ಅಂದರೆ ವರ್ಷಕ್ಕೆ ನಾಲ್ಕು ಕೋಟಿ. ರೂ. ಗಳಾಯಿತು. ಅನಂತರ ೧೯೭೨-೭೩ ರಿಂದ ೧೯೭೯-೮೦ರವರೆಗೆ ೮೦ ಕೋಟಿ ರೂ. ಗಳನ್ನು ಅಂದರೆ ವರ್ಷಕ್ಕೆ ಸರಾಸರಿ ಹತ್ತು ಕೋಟಿ ರೂ.ಗಳ ಪ್ರಕಾರ ಖರ್ಚು ಮಾಡಿದ್ದಾರೆ. ಆದರೆ ನಾವು ಎರಡು ವರ್ಷಗಳಲ್ಲಿ ೩೪ ಕೋಟಿ.

ರೂ.ಗಳನ್ನು ಖರ್ಚ ಮಾಡಿದ್ದೇವೆ. ಆದ್ದರಿಂದ ಮಾನ್ಯ ದೇವರಾಜ ಅರಸ್ ಅವರು ಕೆಲವು ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದರಿಂದ ಅವರಿಗೆ ಏನೂ ಪ್ರಯೋಜನ ಬರುವುದಿಲ್ಲವೆಂದು ಹೇಳುತ್ತೇನೆ. ಹೆಚ್ಚುವರಿ ನೀರಾವರಿ ಪ್ರದೇಶ ಬಂದಿಲ್ಲವೆಂದು ಅವರು ಹೇಳಿದರು. ಈ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಬಹುದು ಆದರೆ ಅವರು ಅಧಿಕಾರದಲ್ಲಿದ್ದಾಗ ಅವರ ಜೊತೆಯಲ್ಲಿ ನಾವೂ ಸಹ ಇದ್ದ ಕಾರಣದಿಂದ ಈಗ ಹೆಚ್ಚು ಹೇಳುವುದು ಬೇಡ ಮಲಪ್ರಭಾದಿಂದ ನೀರನ್ನು ಕೊಡಲಾಯಿತೆಂದು ಹೇಳಿದರು. ಆದರೆ ನೀರು ಕೊಟ್ಟಿದ್ದು it is only on record. After we came to power we said that for such and such a survey number water should go and then only we will take into account. Till then ಅಂದರೆ ನೀರು ಕೊಟ್ಟಿದ್ದು ರೆಕಾರ್ಡಿನಲ್ಲಿ ಮಾತ್ರ. ಆದರೆ ನಿಜವಾಗಿಯೂ ಅಲ್ಲಿನ ಜಮೀನುಗಳಿಗೆ ನೀರು ಹೋಗಿರಲಿಲ್ಲ. ನೀರು ಗದ್ದೆ ಹತ್ತಿರ ಹೋಗುವುದು ಮುಖ್ಯವಲ್ಲ ನೀರು ಒಂದು ನಿರ್ದಿಷ್ಟವಾದಂಥ ಸರ್ವೆ ನಂಬರ್‌ಗಳಲ್ಲಿ ಹರಿದಾಗ ಮಾತ್ರ ಲೆಕ್ಕಕ್ಕೆ ಬರುತ್ತದೆ. ಆದರೆ ಈ ಹಿಂದೆ ಈ ರೀತಿ ಆಗಿರಲಿಲ್ಲ. ಕಾಲುವೆಯಲ್ಲಿ ನೀರು ಹರಿದರೆ ಸಾಕು, ನೀರು ಕೊಟ್ಟಿದ್ದೇವೆಂದು ಹೇಳುವುದು ಈ ಮೊದಲು ನಡೆಯುತ್ತಿತ್ತು. But, now we have changed the process of statistics. I am not deliberating on these thinks. I think this will meet the point raised by Sri Devaraj Urs, ಈಗ ಹೆಚ್ಚಾದ ನೀರಾವರಿ ಪ್ರದೇಶಗಳ ವಿವರಗಳನ್ನು ಕೊಡುವುದಾದರೆ ೧೯೭೦-೭೧ ರಿಂದ ೧೯೭೧-೭೨ರ ವರೆಗೆ ೨೧೮. ಅಂದರೆ ವಾರ್ಷಿಕ ಸರಾಸರಿ ೨೨. ೧೯೭೨ ರಿಂದ ೧೯೮೨ರ ವರೆಗೆ ೨೧೬, ಅಂದರೆ ಸರಾಸರಿ ೩೮ ಆಯಿತು. ಕಳೆದ ಎರಡು ವರ್ಷಗಳಲ್ಲಿ ೮೩. ಅಂದರೆ ಸರಾಸರಿ ೪೧ ಆಯಿತು.

ಇನ್ನು ಯು.ಕೆ.ಪಿ.ಯಲ್ಲಿ ಖರ್ಚು ಮಾಡಿದಂಥ ಹಣದ ವಿವರ ಕೊಡುವುದಾದರೆ, ೧೯೭೪ ರಿಂದ ೧೯೮೦ ರವರೆಗೆ ೮೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ೧೯೮೦-೮೧ ರಲ್ಲಿ ೪೨ ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ೧೯೮೧-೮೨ ರಲ್ಲಿ ಬಜೆಟ್‌ನಲ್ಲಿ ಹೇಳಿರುವುದಕ್ಕೂ ಮತ್ತು ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದಕ್ಕೂ ಹೆಚ್ಚು ಕಮ್ಮಿಯಾಗಿದೆ ಎಂಬ ವಿಚಾರವನ್ನು ಅವರು ಪ್ರಸ್ತಾಪ ಮಾಡಿದರು. ೧೯೮೧-೮೨ರಲ್ಲಿ ೩೫ ಸಾವಿರ ಹೆಕ್ಟೇರ್ ಜಮೀನುಗಳಿಗೆ ನೀರು ಕೊಡಬೇಕೆಂದಿದ್ದರೂ ಸಹ ಬರೀ ೧೪ ಸಾವಿರ ಹೆಕ್ಟೇರ್ಸ್‌ಗೆ ಮಾತ್ರ ನೀರನ್ನು ಕೊಡಲು ಸಾಧ್ಯವಾಯಿತು. Thereafter we made another exercise on some other projects, but not on U.K.P. ನಾವು ಆ ವರ್ಷದ ಗುರಿಯನ್ನು ಕಡಿಮೆ ಮಾಡಬಾರದೆಂದುಕೊಂಡು, ಮಲಪ್ರಭಾ, ಹೇಮಾವತಿ, ವಾಟೇಹೊಳೆ, ಕಬಿನಿ ಹಾರಂಗಿ ಮುಂತಾದ ಪ್ರಾಜೆಕ್ಟ್‌ಗಳ ಮೂಲಕ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆಯೇ ಎಂದು We are still retaining the target of covering and providing water to one lakh hectares more in the year 1981-82. As you know Water Year is up to June, 1982. We are going to meet that target. Th rewill not be any shortfall There may be a shortfall to the extent of 21,000 Hectares as far as U.K.P. is concerned. But, we are going to make up that by means of other projects by making up the figures as 1 lakh hectares.

೧೨-೦೦ ಮಧ್ಯಾಹ್ನ

ಮಾನ್ಯ ದೇವರಾಜ ಅರಸ್‌ರವರು ಹೇಳಿದರು ೧೯೭೮-೭೯ರಲ್ಲಿ ೧೦೮ ಕೋಟಿ ರೂಪಾಯಿ ಖರ್ಚು ಮಾಡಿ ೩೧ ಸಾವಿರ ಹೆಕ್ಟೇರ್ಸ್ ನೀರಾವರಿ ಪ್ರದೇಶ ಮಾಡಿದ್ದೇವೆ. ೧೯೮೦-೮೧ರಲ್ಲಿ ೧೨೨ ಕೋಟಿ ರೂಪಾಯಿ ಖರ್ಚು ಮಾಡಿ ೫೧ ಸಾವಿರ ಹೆಕ್ಟೇರ್ಸ್ ನೀರಾವರಿ ಪ್ರದೇಶ ಮಾಡಿದ್ದೇವೆ. ೧೯೮೧-೮೨ರಲ್ಲಿ ೧೨೬ ಕೋಟಿ ರೂಪಾಯಿ ಖರ್ಚು ಮಾಡಿ ೫೧೪೦೦ ಹೆಕ್ಟೇರ್ಸ್ ನೀರಾವರಿ ಪ್ರದೇಶ ಮಾಡಿದ್ದೇವೆ ಎಂದು. ನಾವು ಈಗ ಅದಕ್ಕಿಂತಲ್ಲೂ ಹೆಚ್ಚು ಮಾಡಿದ್ದೇವೆ, ಜೂನ್ ೧೯೮೨ರ ಒಳಗೆ ಇನ್ನೂ ಹೆಚ್ಚು ದುಡ್ಡು ಖರ್ಚು ಮಾಡಿ ಅದಕ್ಕಿಂತಲ್ಲೂ ಜಾಸ್ತಿ ಮಾಡುತ್ತೇವೆ. ಆದರೆ ಅವರು ೨೨೧ ಕೋಟಿ ರೂಪಾಯಿ ದುಡ್ಡು ಖರ್ಚು ಮಾಡಿದರೂ ಕೂಡ ಇನ್ನೂ ಒಂದು ಲಕ್ಷ ಹೆಕ್ಟೇರ್ಸ್ ಆಗಿಲ್ಲ ಅಂತ ಅವರು ಏನು ವಾದ ಮಾಡಿದ್ದಾರೆ, ಆ ವಾದ ಇದರ ಮೇಲೆ ಸರಿಹೋಗುವುದಿಲ್ಲ. This nullifies the argument. ಸನ್ಮಾನ್ಯ ಅಧ್ಯಕ್ಷರೇ, ಈ ೬ನೇ ಪ್ಲಾನ್‌ನಲ್ಲಿ ನಾವು ಒಟ್ಟು ೬,೬೦ ಹೆಕ್ಟೇರ್ಸ್ ಅಷ್ಟು

ನೀರಾವರಿ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ, ೧೯೮೧-೮೨ರಲ್ಲಿ ೧.೫೦ ಲಕ್ಷ ಹೆಕ್ಟಾರ್ಸ್‌ನಲ್ಲಿ ನೀರಾವರಿಯನ್ನು, ಒದಗಿಸತಕ್ಕಂಥಾ ಕಾರ್ಯಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ. ಈ ೬ನೇ ಪ್ಲಾನ್‌ನಲ್ಲಿ ನಾವು ಏನು ಉದ್ದೇಶ ಇಟ್ಟುಕೊಂಡಿದ್ದೇವೋ ಅದನ್ನು ನಾವು ಖಂಡಿತವಾಗಿಯೂ ಸಾಧನೆ ಮಾಡತಕ್ಕಂಥಾ ಹಂತದಲ್ಲಿ ಇದ್ದೇವೆ. ಒಟ್ಟು ೫ ಪ್ಲಾನ್‌ನಲ್ಲಿ ನೀರಾವರಿ ೧೫ ಲಕ್ಷ ಹೆಕ್ಟಾರ್ಸ್ ಆಗಿದ್ದರೆ ನಾವು ಒಂದೇ ಪ್ಲಾನ್‌ನಲ್ಲಿ ೬ನೇ ಯೋಜನೆಯಲ್ಲಿ ಒಂದರಲ್ಲೇ ೬.೭೦ ಲಕ್ಷ ಹೆಕ್ಟಾರ್ಸ್‌ನ್ನು ನೀರಾವರಿ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದರಂತೆ ಸಾಧನೆ ಮಾಡುತ್ತಾ ಇದ್ದೇವೆ. ಇದು ಒಂದು ದೊಡ್ಡ ಸಾಧನೆ ಅಲ್ಲವೇ, ಯೋಚನೆ ಮಾಡಿ. ಇದು ಒಂದು ದೊಡ್ಡ ಸಾಧನೆಗೆ ಒಂದು ಚಿಹ್ನೆ ಅಲ್ಲವೇ ? ೧೯೮೧-೮೨ರಲ್ಲಿ ನಾವು ಖಂಡಿತವಾಗಿಯೂ ೧೫.೭ ಲಕ್ಷದಲ್ಲಿ ಅದರ ಅರ್ಧ ೫೦ರಷ್ಟನ್ನಾದರೂ ಸಾಧನೆ ಮಾಡಬೇಕೆಂದು ಇದ್ದೇವೆ. We are going to achieve in one plan period as against all the plans put together. ಈ ಒಂದು ಕಾರ್ಯಕ್ರಮ ನಾವು ಏನು ಹಾಕಿಕೊಂಡಿದ್ದೇವೋ ಅದು ಈ ಒಂದು ವರ್ಷದಲ್ಲಿ ಅದರ ಡಬ್ಬಲ್ ಆಗುತ್ತದೆ ಆದುದರಿಂದ ಇದರಲ್ಲಿ ಪೋರ್ಟ್‌ಫೋಲ್‌ಸ್ಲಿಪೇಜ್ ಇಲ್ಲವೇ ಇಲ್ಲ. ಅದರ ಬದಲು ಎರಡು ಪಾಲು ವೃದ್ಧಿಸಲು ತಕ್ಕ ಎಲ್ಲಾ ಕಾರ್ಯಕ್ರಮಗಳನ್ನೂ ಸಂಬಂಧಪಟ್ಟ ಇಲಾಖೆಯವರು ಕೈಗೊಂಡಿದ್ದಾರೆ. ಅದಕ್ಕೆ ಬೇಕಾದ ಹಣವನ್ನೂ ಸಹ ನಾವು ಈ ಸಾರಿ ಒದಗಿಸಿದ್ದೇವೆ.

ಇನ್ನು ಕಾವೇರಿ ಬೇಸಿನ್ ವಿವಾದವಾಗಿ ಹೇಳಬೇಕಾದರೆ ಈ ವರ್ಷ ಇದಕ್ಕೆ ಹೆಚ್ಚು ಖರ್ಚು ಮಾಡಲಿದ್ದೇವೆ. ಈ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥಾ ಎಲ್ಲಾ ಕೆಲಸಗಳನ್ನೂ ತೆಗೆದುಕೊಂಡು ಮಾಡಬೇಕೆಂದು ಇದಕ್ಕೆ ಹೆಚ್ಚು ಹಣ ಒದಗಿಸಿದ್ದೇವೆ. ತಮಗೆ ಹೇಳಬೇಕಾದರೆ ಹೋದ ವರ್ಷ ಇದಕ್ಕೆ ೨೫ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿದರೂ ಕೂಡ ೨೭ ಕೋಟಿ ರೂಪಾಯಿ ಖರ್ಚಾಯಿತು ಈ ವರ್ಷ ಇದಕ್ಕೆ ಖರ್ಚು ಮಾಡಲು ಇನ್ನೂ ಹೆಚ್ಚು ಇಟ್ಟಿದ್ದೇವೆ. ಅಂದರೆ ೪೦ ಕೋಟಿ ರೂಪಾಯಿಗೆ ಏರಿಸಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ ಮಿಡ್‌ಟರ್ಮ್ ರಿವ್ಯೂನಲ್ಲಿ ನಾವು ಏನು ಇದಕ್ಕೆ ೪೦ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಇದ್ದೇವೆಯೋ ಅದನ್ನು ೫೦ ಕೋಟಿ ರೂಪಾಯಿ ಏರಿಸಬೇಕೆಂದು ಯೋಚನೆ ಮಾಡಿದ್ದೇವೆಂದು ಹೇಳಿದ್ದಾರೆ.

ಶ್ರೀ ಭೀಮಣ್ಣ ಎಸ್. ಖಂಡ್ರೆ.—ತಾವು ಹೀಗೆಲ್ಲಾ ಮಾಡಿರುವುದು ತುಂಬಾ ಸ್ವಾಗತಾರ್ಹವಾದುದು. ಆದರೆ ಈ ಕಾರಂಜ ಪ್ರಾಜೆಕ್ಟ್ ಏನು ಇದೆ ಇದನ್ನು ಬ್ಯಾಕ್‌ವರ್ಡ್ ಏರಿಯಾ ಎಂದು ಒಪ್ಪಿಕೊಂಡಿದ್ದೀರಿ. ಅಲ್ಲಿ ೬ ಪರ್ಸೆಂಟ್ ಇರ್ರಿಗೇಷನ್ ಇದೆ, ಸ್ಟೇಟ್ ಲೆವಲ್‌ನಲ್ಲಿ ೨೧ ಪರ್ಸೆಂಟ್ ಇರ್ರಿಗೇಷನ್ ಇದೆ. ಈ ವರ್ಷ ಇದಕ್ಕೆ ಕೊಟ್ಟಿರುವ ಹಣ ಕಡಿಮೆ. ಈ ವರ್ಷ ಇದಕ್ಕೆ ೫.೫೦ ಲಕ್ಷ ರೂಪಾಯಿ ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದರೆ. ಖರ್ಚು ಮಾಡಿರುವುದು ೨ ಕೋಟಿ ೨೦ ಲಕ್ಷ ರೂಪಾಯಿಗಳು. ಹೀಗಾಗಿ ಅಲ್ಲಿ ಕೆಲಸ ಕುಂಠಿತವಾಗುತ್ತಾ ಇದೆ. ಆದುದರಿಂದ ಈ ಬಗ್ಗೆ ನಾನು ಕೇಳುವುದೇನೆಂದರೆ ಈ ಕಾರಂಜ ಪ್ರಾಜೆಕ್ಟ್ ಅನ್ನು ಮುಗಿಸಲು ಉಳಿದ ಅಮೌಂಟ್‌ನ್ನು ಯಾವಾಗ ಕೊಡುತ್ತೀರಿ ಮತ್ತು ಈ ಪ್ರಾಜೆಕ್ಟ್ ಕೆಲಸವನ್ನು ಯಾವಾಗ ಕಂಪ್ಲೀಟ್ . ಮಾಡುತ್ತೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಮುಖ್ಯ ಮಂತ್ರಿಗಳು ಈಗ ತಾನೇ ಹೇಳಿದಂತೆ ನಾನೂ ಸಹ ಅದನ್ನೇ ಪುಷ್ಟೀಕರಿಸುತ್ತೇನೆ. ಈ ೬ನೇ ಪ್ಲಾನ್ ಮುಗಿಯುವುದರೊಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ಆಗದೇ ಹೋದರೆ ಮಿಡ್‌ಟರ್ಮ್‌ನಲ್ಲಿ ರಿವ್ಯೂ ಮಾಡಿ ಕಾರಂಜ ಪ್ರಾಜೆಕ್ಟ್‌ಗೆ ಬೇಕಾದ ಹಣ ಕೊಟ್ಟು ಅದನ್ನು ಕಂಪ್ಲೀಟ್ ಮಾಡುತ್ತೇವೆ. ಹೀಗೆ ಈ ನೀರಾವರಿ ಬಗ್ಗೆ ಈಗಾಗಲೇ ಸಾಕಷ್ಟು ಹಣದ ವ್ಯವಸ್ಥೆ ಮಾಡುತ್ತಾ ಇದ್ದೇವೆ. ಶ್ರೀಮಾನ್ ಡಿ. ದೇವರಾಜ ಅರಸ್ ರವರು ಒಂದು ಮಾತು ಹೇಳಿದರು ಐ. ಎಂ. ಸಿ. ಎಫ್. ಲೋನ್ ತೆಗೆದುಕೊಳ್ಳಬಹುದಲ್ಲಾ, ೧೦೦೦ ಕೋಟಿ ರೂಪಾಯಿಯನ್ನು ಅವರಿಂದ ತೆಗೆದುಕೊಂಡು ಈ ಸ್ಕೀಂಗಳನ್ನು ತೆಗೆದುಕೊಳ್ಳಬಹುದಲ್ಲಾ ಎಂದು ಹೇಳಿದರು.

ಶ್ರೀ ಹೆಚ್. ಟಿ. ಚೌಡಯ್ಯ.—ಕಾವೇರಿ ಯೋಜನೆಯಲ್ಲಿ ವರುಣಾ ನಾಲೆ ಸೇರುವುದಿಲ್ಲವೇ ? ಈ ವರುಣಾ ನಾಲೆಗೆ ತಾವು ಹೆಚ್ಚಿಗೆ ಹಣ ಕೊಟ್ಟಿಲ್ಲಾ. ಕೆ. ಆರ್. ಸಾಗರದಲ್ಲಿ ರೈಟ್ ಬ್ಯಾಂಕ್ ಕೆನಾಲ್ ಏನು ಇದೆ ಆ ವಿಶ್ವೇಶ್ವರಯ್ಯ ಕೆನಾಲ್‌ಗೆ ಹಿಂದೆ ೩೦ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಅದು ಬಹಳ

ಕಡಿಮೆಯೇ. ೧೯೭೮ರಲ್ಲಿ ಈ ವರುಣಾ ನಾಲೆ ಬಗ್ಗೆ ಒಂದು ಚಳುವಳಿಯಾಗಿ ಆ ಪ್ರದೇಶದ ಮುಖಂಡರನ್ನು ಕರೆಸಿ ಇನ್ನು ೪-೫ ವರ್ಷದಲ್ಲಿ ಇದನ್ನು ಮುಗಿಸುತ್ತೇವೆಂದು ಒಪ್ಪಿಕೊಂಡಿದ್ದಾರೆ. ಈಗ ನೋಡಿದರೆ ಈ ವರುಣಾ ನಾಲೆಗೆ ಹೆಚ್ಚು ಹಣ ಪ್ರೊವೈಡ್ ಮಾಡಿಲ್ಲಾ. ಇದು ಆ ಪ್ರದೇಶದ ಜೀವನಾಡಿ ಪ್ರಶ್ನೆಯಾಗಿದೆ. ಇದಕ್ಕೆ ಬಡ್ಜೆಟ್‌ನಲ್ಲೂ ಕೂಡ ಪ್ರೊವೈಡ್ ಮಾಡಿಲ್ಲ. ಆದುದರಿಂದ ಇದನ್ನು ಮಿಡ್ ಟರ್ಮ್ ರಿವ್ಯೂನಲ್ಲಾದರೂ ತೆಗೆದು ಈ ಕೆಲಸ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ವರುಣಾ ನಾಲೆ ಮತ್ತು ಕೆ. ಆರ್. ಸಾಗರ ನಾಲೆ ಎರಡೂ ಒಂದೇ ಅನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ. ಕಾವೇರಿ ಜಲಾಶಯದ ಪ್ರದೇಶಕ್ಕೆ ಎಷ್ಟು ಮಹತ್ವ ಕೊಡುತ್ತೇವೋ ಅಷ್ಟೇ ಮಹತ್ವವನ್ನು ಈ ಕೆ. ಆರ್. ಸಾಗರದ ನಾಲೆಗೂ ಕೂಡ ಮಹತ್ವ ಕೊಡಲಾಗಿದೆ. ಈ ಎರಡೂ ಕೆಲಸಗಳಿಗೂ ಸಹ ಹಣ ಕೊಟ್ಟು ತೀವ್ರವಾಗಿ ಮಾಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದೇವೆ. ಈ ವಿಶ್ವೇಶ್ವರಯ್ಯ ಕೆನಾಲ್ ಬಹಳ ಹಿಂದಿನ ವರ್ಷದ್ದಾದರಿಂದ ಅದನ್ನು ಮಾಡ್ರನೈಸ್ ಮಾಡಬೇಕೆಂದು ಈಗ ಹಣ ಒದಗಿಸಲಾಗಿದೆ.

ಶ್ರೀ ಹೆಚ್. ಟಿ. ಚೌಡಯ್ಯ.—ನಾವು ೩ ವರ್ಷದಿಂದ ಒತ್ತಾಯ ಮಾಡುತ್ತಿದ್ದರೂ ಕೂಡ ಈ ವರುಣಾ ಕೆನಾಲ್‌ಗೆ ಹೆಚ್ಚು ಹಣ ಒದಗಿಸಿಲ್ಲಾ. ಈ ಸಾರಿಯ ಬಡ್ಜೆಟ್‌ನಲ್ಲೂ ಸೇರಿಸಿಲ್ಲ. ಆದುದರಿಂದ ಮಿಡ್‌ಟರ್ಮ್ ರಿವ್ಯೂನಲ್ಲಾದರೂ ತೆಗೆದುಕೊಂಡು ಕೆಲಸ ಮಾಡುತ್ತೇವೆ ಅನ್ನುವ ಆಶ್ವಾಸನೆಯನ್ನು ತಾವು ಈಗ ಕೊಟ್ಟರೆ ಆ ಭಾಗದ ಜನಗಳಿಗೆ ಒಂದು ರೀತಿ ಸಮಾಧಾನವಾದರೂ ಆಗುತ್ತದೆ. ಈ ಬಗ್ಗೆ ನಿಖರವಾದ ಉತ್ತರ ಹೇಳುತ್ತೀರಾ ಸ್ವಾಮಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದ್ದರಿಂದ ಈ ನೀರಾವರಿ ಯೋಜನೆಗಳ ಬಗ್ಗೆ ಅಥವಾ ಕಾವೇರಿ ಜಲ ಯೋಜನೆಯೇ ಆಗಲಿ ನಾನು ಈಗಾಗಲೇ ಹೇಳಿದ್ದೇನೆ, ಈ ಎರಡು ಪ್ರಾಜೆಕ್ಟ್‌ಗಳನ್ನು ನಾವು ಗಮನದಲ್ಲಿಟ್ಟುಕೊಂಡು ವಿಶೇಷವಾಗಿ ಹಣ ಜಾಸ್ತಿ ಒದಗಿಸುವಾಗ ಹೆಚ್ಚು ಹಣವನ್ನು ಖಂಡಿತವಾಗಿ ಒದಗಿಸುತ್ತೇವೆ. ಇದರಲ್ಲಿ ಮಾನ್ಯ ಸದಸ್ಯರು ಅನುಮಾನ ಇಟ್ಟುಕೊಳ್ಳಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ, ಇದು ಬಹಳ ಪ್ರಾಮುಖ್ಯವಾದ ವಿಷಯ. ಹಿಂದೆ ೧೯೭೮ರಲ್ಲಿ ಒಂದು ಸರ್ಕಾರಿ ಹುಕುಂ ಇದ್ದಾಗ, ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಾಗ ಈ ಎರಡು ಪ್ರಾಜೆಕ್ಟ್‌ಗಳನ್ನು ಕೂಡ ಏಕ ರೀತಿಯಲ್ಲಿ ಮತ್ತು ಏಕ ಕಾಲದಲ್ಲಿ ಪ್ರಾರಂಭ ಮಾಡುತ್ತೇವೆ ಮತ್ತು ಈ ಎರಡು ಪ್ರಾಜೆಕ್ಟ್‌ಗಳಿಗೆ ಸರಿಸಮಾನವಾಗಿ ಹಣವನ್ನು ಒದಗಿಸಿಕೊಂಡು ನಾವು ಕೆಲಸವನ್ನು ಮುಂದುವರಿಸುತ್ತೇವೆ ಎಂದು ಅಂದಿನ ಸರ್ಕಾರ ಹೇಳಿದೆ. ಅದನ್ನು ದಯಮಾಡಿ ಮುಂದುವರಿಸಬೇಕೆಂದು ಹೇಳುತ್ತೇನೆ. ಅದರಲ್ಲಿ ವ್ಯತ್ಯಾಸವಿದೆ ; ಮತ್ತು ೧ ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದಾರೆ. ಅದಕ್ಕೆ ೩೦ ಲಕ್ಷ ಇಟ್ಟಿದ್ದಾರೆ. ಒಂದು ಡಿವಿಜನ್ ಇದೆ ಮತ್ತು ೪ ಸಬ್‌ಡಿವಿಜನ್ ಇವೆ. ಆ ೩೦ ಲಕ್ಷದಲ್ಲಿ ೨೩ ಲಕ್ಷ ಕೇವಲ ಸಿಬ್ಬಂದಿ ಖರ್ಚು ಮತ್ತು ಮೆಷಿನರಿಗೇ ಹೋಗುತ್ತದೆ. ಇನ್ನು ಕೇವಲ ೭ ಲಕ್ಷ ವರ್ಕ್ಸ್‌ಗೆ ಹೋಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಯವರು ನಿಖರವಾದ ಉತ್ತರವನ್ನು ಕೊಡಬೇಕು,

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗಾಗಲೇ ನಾವು ಅದಕ್ಕೆ ಎಷ್ಟು ಹಣ ಒದಗಿಸಬೇಕೋ ಅಷ್ಟು ಹಣವನ್ನು ಒದಗಿಸಿದ್ದೇವೆ. ನಾವು ಆ ಹಣದಲ್ಲಿ ಹೆಚ್ಚಳ ಮಾಡುವಾಗ ಅದರ ಅಗತ್ಯತೆಯನ್ನು ನೋಡಿಕೊಂಡು ಈ ಕೆ.ಆರ್.ಎಸ್.ಗೆ ನಾವು ಜಾಸ್ತಿ ಹಣ ಕೊಡಬೇಕಾದರೆ ಅದನ್ನು ನಾವು ಕೊಡುತ್ತೇವೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಚ್. ಡಿ. ಚೌಡಯ್ಯ.—ತಾವು ಹೇಳುತ್ತಾ ಇರುವುದನ್ನು ನೋಡಿದರೆ ಹೆಚ್ಚು ಹಣ ಒದಗಿಸುವ ಅಗತ್ಯತೆ ಇಲ್ಲ ಎಂದು ಕಂಡುಬರುತ್ತಿದೆ. ಅದಕ್ಕೋಸ್ಕರ ೩೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, ಇನ್ನು ಕೊಡುವ ಅಗತ್ಯವಿಲ್ಲ ಎಂದು ಅದನ್ನಾದರೂ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ವರುಣಾಕ್ಕೆ ಈ ಹಣದಲ್ಲಿ ಹೆಚ್ಚಳ ಮಾಡುವುದಿಲ್ಲ, ಅದಕ್ಕೆ ಹೆಚ್ಚು ಮಾಡುತ್ತೇವೆ ಎಂದು ಹೇಳಲೆ ? ಅದು ಹಾಗೆ ಹೇಳುವುದಕ್ಕೆ ಬರುವುದಿಲ್ಲ. ಹಣದ ಆವಶ್ಯಕತೆಯನ್ನು ನೋಡಿಕೊಂಡು ವರುಣಾ ಪ್ರಾಜೆಕ್ಟ್‌ಗೆ ಆಗಲೀ, ಕೆ.ಆರ್.ಎಸ್.ಗೇ ಆಗಲೀ ಹಣವನ್ನು ಹೆಚ್ಚು ಮಾಡುತ್ತೇವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಮಾನ್ಯ ಅಧ್ಯಕ್ಷರೇ, ನಾವು ಈ ಬಗ್ಗೆ ಕಳೆದ ೩ ವರ್ಷಗಳಿಂದ ಒತ್ತಾಯ ಮಾಡುತ್ತಿದ್ದೇವೆ. ಈ ಕಾವೇರಿ ಬೇಸಿನ್ ಬಗ್ಗೆ ಉತ್ತರ ಕೊಡುವಾಗ ಮಾನ್ಯ ಮಂತ್ರಿ ಯವರು ಏನೂ ಹೇಳಲಿಲ್ಲ. ಆ ಬಗ್ಗೆ ಇನ್ನು ನಾವು ಯಾವಾಗ ಕೇಳೋಣ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮ್ಮ ವಿಚಾರ ಸ್ಪಷ್ಟವಾಗಿ ಇಲ್ಲ. ಹಾಗಾದರೆ ವರುಣಾಗೆ ಹಣ ಕೊಡಬೇಡಿ, ಕೆ.ಆರ್.ಎಸ್.ಗೆ ಹಣ ಕೊಡಿ ಎಂದು ನಿಮ್ಮ ವಾದ ಇದೆಯೇ ?

ಶ್ರೀ ಎಚ್. ಡಿ. ಚೌಡಯ್ಯ.—ದಯವಿಟ್ಟು ನಾನು ಹೇಳುವುದನ್ನು ಕೇಳಿ. ಹಿಂದೆ ಚಳುವಳಿ ನಡೆದಂಥ ಸಂದರ್ಭದಲ್ಲಿ ಆ ವಿಚಾರ ತಮಗೂ ಕೂಡ ಗೊತ್ತಿದೆ. ಎರಡೂ ಕಾಮಗಾರಿಗಳನ್ನು ಏಕ ರೀತಿಯಲ್ಲಿ ಮತ್ತು ಏಕಕಾಲದಲ್ಲಿ ಪ್ರಾರಂಭ ಮಾಡಬೇಕು ಮತ್ತು ಅದನ್ನು ಹಾಗೆಯೇ ನಡೆಸಿಕೊಂಡು ಹೋಗಬೇಕು ಎಂದು ಒಂದು ಒಪ್ಪಂದವಾಯಿತು. ದಯಮಾಡಿ ತಾವು ಅದನ್ನು ಪರಿಶೀಲನೆ ಮಾಡಿ, ಇಲ್ಲದಿದ್ದರೆ ತೊಂದರೆಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಿಂದಿನ ಸರ್ಕಾರದವರು ಆ ಒಂದು ಒಪ್ಪಂದವನ್ನು ಮಾಡಿದ್ದರೂ ಕೂಡ ನಮ್ಮ ಸರ್ಕಾರ ಅದನ್ನು ಪಾಲಿಸುತ್ತದೆ. ನೀವು ಅದರ ಬಗ್ಗೆ ಚಿಂತೆ ಮಾಡಬೇಡಿ. we will keep up that assurance. ಆದ್ದರಿಂದ ಈ ನೀರಾವರಿ ಯೋಜನೆಗಳ ಬಗ್ಗೆ ನಾನು ಈಗಾಗಲೇ ಸ್ಪಷ್ಟಪಡಿಸಿದ್ದೇನೆ. ಏಕೆಂದರೆ The base of the Cauvery basin will definitely step up by Rs. 25 crores, ಆ ಕೆಲಸ ಬಹಳ ಶೀಘ್ರವಾಗಿ ಆಗಂತ್ತದೆಂದು ನಾನಂ ಹೇಳುವುದಕ್ಕೆ ಬಯಸುತ್ತೇನೆ. ಈ ಐ.ಎಂ.ಎಫ್ ನಿಂದ ೧ ಕೋಟಿ ರೂಪಾಯಿಗಳನ್ನು ಇಲ್ಲಿಗೆ ತಂದುಬಿಡಲಿ ಎಂದು ಶ್ರೀಮಾನ್ ದೇವರಾಜ ಅರಸ್‌ರವರು ಹೇಳಿದರು. ಅವರು ಹಿಂದೆ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದವರು. ಅವರು ಪರದೇಶದಿಂದ ಕೇಂದ್ರ ಸರ್ಕಾರಕ್ಕೆ ಯಾವುದೇ ಉದ್ದೇಶಕ್ಕಾಗಿ ಬಂದ ಹಣದಲ್ಲಿ ಒಂದು ನಯಾಪೈಸೆಯನ್ನೂ ಕರ್ನಾಟಕ ರಾಜ್ಯ ಸರ್ಕಾರಕ್ಕೆ ತಂದದ್ದು ಇಲ್ಲ. ಆದ್ದರಿಂದ ಈ ದಿವಸ ಈ ಒಂದು ಹೊಸ ಉಪದೇಶ ಅಥವಾ ಆಲೋಚನೆ ಅವರಲ್ಲಿ ಬಂದಿದ್ದರೆ ಬಹುಶಃ ಅವರು ನ್ಯಾಷನಲ್ ಲೆವಲ್ ಪಾಲಿಟಿಕ್ಸ್‌ನಲ್ಲಿ ಭಾಗವಹಿಸಿದ ಕಾರಣದಿಂದ ಇದೊಂದು ಮಾತನ್ನು ಹೇಳಿಬಿಡೋಣ ಎಂದು ಹೇಳಿದ್ದಾರೆ. He should have talked it form a platform in Delhi instead of saying it in the Legislative Assembly. ಈ ಅಸೆಂಬ್ಲಿಯಲ್ಲಿ ಹೇಳ ತಕ್ಕಂಥ ಮಾತಲ್ಲ ಅದು. ಬಹುಶಃ ಆ ಮಾತನ್ನು ಡೆಲ್ಲಿಯಲ್ಲಿ ಹೇಳಿದ್ದರೆ ಅದಕ್ಕೆ ಸಾಕಷ್ಟು ಯೋಗ್ಯತೆ ಬರುತ್ತಾ ಇತ್ತು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಈ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ಗೆ ವರ್ಲ್ಡ್ ಬ್ಯಾಂಕ್‌ನಿಂದ ಹಣ ತೆಗೆದುಕೊಂಡಿದ್ದೀರಿ ಎಂದು ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ. ಅದರಂತೆ ಇದಕ್ಕೂ ಹಾಗೆಯೇ ತೆಗೆದುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ವರ್ಲ್ಡ್ ಬ್ಯಾಂಕ್‌ನಿಂದ ತೆಗೆದುಕೊಳ್ಳಬೇಕಾದರೆ, ಈ ಬಗ್ಗೆ ಕೇಂದ್ರ ಸರ್ಕಾರದವರು ಒಪ್ಪಿದರೆ ತಾನೇ ನಾವು ವರ್ಲ್ಡ್ ಬ್ಯಾಂಕ್‌ಗೆ ಹೋಗುವಂಥಾದ್ದು ! ಈ ವಿಷಯ ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಬಗ್ಗೆ ಆದಷ್ಟೂ ಕೆಲಸ ಮಾಡಬೇಕೆಂದು ಹೇಳಿ ಅದಕ್ಕಾಗಿ ನಾವು ಹಣವನ್ನು ಜಾಸ್ತಿ ಮಾಡುತ್ತಿದ್ದೇವೆ. The Government is for increasing it by twofold *i.e.*, from 25 crores to 50 crores. It is the earnest desire of the Government to get anticipated results. Perhaps on this all should compliment the Government.

(SRI M. C. BASAPPA occupied the Chair).

ಶ್ರೀ ಎಚ್. ಎಲ್. ತಿಮ್ಮೇಗೌಡ.—ಆದರೆ ಒಂದು ವಿಚಾರವನ್ನು ನಾನು ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ. ಈ ವರುಣಾ ಚಾನಲ್ ಮಾಡಬೇಕೆಂದು ಹೇಳಿ ಹಣವನ್ನು ನೀವು ಪ್ರೊವೈಡ್ ಮಾಡಿದ್ದೀರಿ. ಆದರೆ ವರುಣಾ ಚಾನಲ್‌ಗೆ ನೀವು ನೀರು ಕೊಡಬೇಕಾದರೆ ಕಕ್ಕಟಳೆ ಪ್ರಾಜೆಕ್ಟ್ ಏನು ಸ್ಯಾಂಕ್ಷನ್ ಆಗಿದೆ ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಅದನ್ನು ಇಂಪ್ಲಿಮೆಂಟ್ ಮಾಡದಿದ್ದರೆ ನೀವು ವರುಣಾ ಚಾನಲ್‌ಗೆ ನೀರು ಕೊಡುವುದಕ್ಕೆ ನಿಮ್ಮಲ್ಲಿ ನೀರು ಇರುವುದಿಲ್ಲ. ಅದು

ಈಗಾಗಲೇ ಎಸ್ಟಿಮೇಟ್ ಆಗಿ ಸರ್ವೆ ಆಗಿ ನಿಮ್ಮ ಮುಂದೆ ಇದೆ. ಅದನ್ನು ಇಂಪ್ಲಿಮೆಂಟ್ ಮಾಡದಿದ್ದರೆ ವರುಣಾ ಚಾನಲ್ ಮಾಡಿ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅದರ ಬಗ್ಗೆ ಮೊದಲು ವಿಚಾರ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದನ್ನು ಆಲೋಚನೆ ಮಾಡೋಣ. ಆದ್ದರಿಂದ ಈ ನೀರಾವರಿ ಯೋಜನೆಗಳ ಬಗ್ಗೆ ಬಹುಶಃ ನಮ್ಮ ಸರ್ಕಾರ ಕೊಟ್ಟಷ್ಟು ಬೆಂಬಲ ಇನ್ಯಾವ ಸರ್ಕಾರವೂ ಕೊಟ್ಟಿಲ್ಲ ಮತ್ತು ಈ ಕಾಲುವೆಗಳನ್ನು ತ್ವರಿತಗೊಳಿಸತಕ್ಕಂಥ ಕಾರ್ಯಕ್ರಮ ಬಹುಶಃ ಹಿಂದೆ ಎಂದೂ ಆಗಿಲ್ಲ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇನ್ನು ಈ ಟ್ಯಾಕ್ಸೇಷನ್ ಬಗ್ಗೆ ಎರಡು ವಿಚಾರಗಳನ್ನು ಹೇಳುತ್ತೇನೆ. ಈ ಮಂಗಳಸೂತ್ರಕ್ಕೆ ೨೫೦ ರೂಪಾಯಿಗಳವರೆಗೆ ಟ್ಯಾಕ್ಸ್ ಇಲ್ಲ ಎಂದು ಏನೊಂದು ಮಿತಿಯನ್ನು ಇಟ್ಟಿದ್ದೇವೆ ಅದು ಬಹಳ ಕಡಿಮೆಯಾಯಿತು ಎಂದು ಎಲ್ಲರೂ ಹೇಳಿದ್ದಾರೆ. ಆ ಒಂದು ರಿಯಾಯಿತಿಯ ಮಿತಿಯನ್ನು ೨೫೦ ರೂಪಾಯಿಗಳಿಂದ ೫೦೦ ರೂಪಾಯಿಗೆ ಏರಿಸಬೇಕೆಂದು ನಮ್ಮ ಸರ್ಕಾರ ಆಲೋಚನೆ ಮಾಡಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಮೊದಲಿನಿಂದಲೂ ಅದನ್ನೇ ಹೇಳುತ್ತಿದ್ದೆವು.

ಶ್ರೀ ಆರ್. ಗುಂಡೂರಾವ್.—ಒಂದು ಕಂಡೀಷನ್ ಮೇಲೆ ಅದನ್ನು ೫೦೦ ರಿಂದ ೧೦೦೦ಕ್ಕೆ ಏರಿಸುತ್ತೇವೆ ನೀವು ಮದುವೆಯಾಗುವುದಾದರೆ !

(ಸಭೆಯಲ್ಲಿ ನಗು)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಯವರ ಸವಾಲನ್ನು ನೀವು ಸ್ವೀಕಾರ ಮಾಡುವುದಾದರೆ ೨೫೦ ರೂ. ನಿಂದ ೧೦೦೦ಕ್ಕೆ ಬೇಕಾದರೆ ಆ ಮಿತಿಯನ್ನು ಏರಿಸುತ್ತೇವೆ !

ಶ್ರೀ ಆರ್. ಗುಂಡೂರಾವ್.—ನೀವು ಮತ್ತು ರಾಮದೇವ್ ಅವರು ಇಬ್ಬರೂ ಇದಕ್ಕೆ ಒಪ್ಪಿಕೊಂಡರೆ ನಾವು ಅದನ್ನು ಏರಿಸುತ್ತೇವೆ !

ಶ್ರೀ ರಾಮದೇವ್.—ನಮ್ಮ ಫರ್ನಾಂಡೀಸ್‌ರವರಿಗೆ ಮಂಗಳಸೂತ್ರ ಎಂದರೆ ರಿಂಗ್, ಅವರಿಗೆ ಮಂಗಳಸೂತ್ರ ಇಲ್ಲ.

ಶ್ರೀ ಮೈಕೇಲ್ ಫರ್ನಾಂಡಿಸ್.—ನಾನು ಮದುವೆಯಾಗುತ್ತೇನೆಯೋ ಇಲ್ಲವೋ ಗೊತ್ತಿಲ್ಲ, ನನ್ನ ಹೆಸರಿನಲ್ಲಿ ಅವರಿಗೆ ಕೊಡಿ !

ಶ್ರೀ ಎಂ. ವೀರಪ್ಪ ಮೊಯಿಲಿ.—ಆಮೇಲೆ ಮಾನ್ಯ ಸದಸ್ಯರಾದ ಮೈಕೇಲ್ ಫರ್ನಾಂಡಿಸ್ ರವರು ಈ ಚಪ್ಪಲ್ಸ್‌ಗೆ ೩೦ ರೂಪಾಯಿವರೆಗೆ ರಿಯಾಯಿತಿ ಕೊಟ್ಟಿದ್ದೀರಿ, ಆದರೆ ಹೈಡ್ಸ್ ಅಂಡ್ ಸ್ಕಿನ್ಸ್‌ಗೆ ಟ್ಯಾಕ್ಸ್ ಹಾಕಿದ್ದೀರಿ ಎಂದು ಹೇಳಿದರು. On hides and skins we will withdraw the tax so that it could be available at reasonable price for weaker sections of the society. These are two concessions which I wanted to announce herein now.

SRI A. LAKSHMISAGAR.—Very great concessions !

ಶ್ರೀ ಪಿ. ರಾಮದೇವ್.—ಹಿಮಾಲಯ ಪರ್ವತದಲ್ಲಿ ಅಗೆದು ಇಲಿ ಹಿಡಿದಂತ ರೀತಿಯಲ್ಲಿ ತಾವು ಅನೌನ್ಸ್ ಮಾಡುತ್ತಿದ್ದೀರಿ !

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಸೀನಿಯರೇಜ್ ರೇಟ್ ಬಗ್ಗೆ ಇಲ್ಲಿ ಪ್ರಸ್ತಾಪವಾಯಿತು. ಮಾನ್ಯ ಸದಸ್ಯರಾದ ನಾಣಯ್ಯನವರು ಈ ಬಗ್ಗೆ ಪ್ರಸ್ತಾಪ ಮಾಡಿದರು. 'ಈ ಸೀನಿಯರೇಜ್ ರೇಟನ್ನು ನೀವು ವಸೂಲು ಮಾಡಿಲ್ಲ. ಇದರಿಂದ ಸುಮಾರು ವರ್ಷಕ್ಕೆ ೧೭ ಕೋಟಿ ರೂಪಾಯಿಗಳ ಆದಾಯ ಸ್ಥಗಿತವಾಯಿತು' ಎಂದು ಅವರು ಹೇಳಿದರು. This is the differential rates and the rates as entered between the industries and the Government. ಈ ೧೭ ಕೋಟಿ ರೂಪಾಯಿಗಳಲ್ಲಿ realisation of 12 crores have been stayed by High Court. ಆದ್ದರಿಂದ ಇದು ನಮ್ಮಿಂದಾಗಿ ಏನಾದರೂ ವಸೂಲಾಗದೇ ಸ್ಥಗಿತವಾಗಿದೆ ಎಂದು ಮಾನ್ಯ ಸದಸ್ಯರ ಮನಸ್ಸಿನಲ್ಲಿ ಭಾವನೆ ಇದ್ದರೆ ಅದು ಸರಿಯಲ್ಲ. ಅದು ಹೈಕೋರ್ಟ್ ಮತ್ತು ಸುಪ್ರಿಂ

ಕೋರ್ಟ್ ಸ್ಟೇ ಬಂದಿದ್ದರಿಂದ ಅದು ಆಗಿದೆ. ನಾವು ಏರಿಸಿದಂಥ ರೇಟ್ಸ್ ಏನಿದೆ ಅದು 1000 percent higher than the rates charged in other States. ಇದು ವಾಸ್ತವಿಕವಾಗಿ ನೋಡಬೇಕಾದ ವಿಚಾರ. ಆದ್ದರಿಂದ ಈ ಬಗ್ಗೆ ಒಂದು ಅಫಿಷಿಯಲ್ ಕಮಿಟಿ ಮಾಡಬೇಕು ಮತ್ತು ಅವರ ರೆಕಮೆಂಡೇಷನ್ ಬಂದನಂತರ ಇದನ್ನು ತೀರ್ಮಾನ ಮಾಡಬೇಕೆಂದು ಹೇಳಿ ನಾವು ಆಲೋಚನೆ ಮಾಡಿದ್ದೇವೆ. ಮತ್ತು ಇಂಡಸ್ಟ್ರೀಸ್‌ದು ಯಾವುದು ರಿಕವರಿ ಆಗಿಲ್ಲ ಆ ಡಿಫರೆನ್ಸ್‌ಗೆ ೫ ಲಕ್ಷ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಕೊಡಬೇಕು ಎಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಒಂದು ಗಂಡಾಂತರವಾಗಿದೆ ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ನಾನಯ್ಯನವರು ಬಹಳ ಸ್ಫೂರ್ತಿಯಿಂದ ಹೇಳಿದರು. ವಾಸ್ತವಾಂಶವನ್ನು ಅವರು ತಿಳಿದುಕೊಂಡಿದ್ದರೆ ಅವರು ಆರೀತಿ ಮಾತನಾಡುತ್ತಿರಲಿಲ್ಲವೆಂದು ನನಗನಿಸುತ್ತದೆ. ಇನ್ನು ನಾವು ಕಾಂಟ್ರಾಕ್ಟ್ ಟರ್ಮಿನೇಟ್ ಮಾಡಿದಂತಹ ವಿಚಾರದಲ್ಲಿ ಸರ್ಕಾರ ಬಹಳ ದೃಢವಾದಂತಹ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಖಂಡಿತವಾಗಿಯೂ ಹೇಳುತ್ತೇನೆ ಇಂತಹ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದು ಮೊದಲಿಗೆ ಎಂದರೆ ನಮ್ಮ ಸರ್ಕಾರ. ಆದ್ದರಿಂದ ನಾನು ಈ ವಿಷಯದ ಬಗ್ಗೆ ಪುನಃ ಒತ್ತಿ ಹೇಳಬೇಕಾಗಿಲ್ಲ. ಇನ್ನು ಅರಣ್ಯ ಇಲಾಖೆಯಿಂದ ಬರಬೇಕಾದಂತಹ ಬಾಕಿಯ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಬಸವಲಿಂಗಪ್ಪನವರು ಹೇಳಿದರು. ಸರ್ಕಾರ ಈ ಫಾರೆಸ್ಟ್ ಇಲಾಖೆಯ ಬಾಕಿಯನ್ನು ವಸೂಲು ಮಾಡುವುದರಲ್ಲಿ ಹಿಂದೆ ಬಿದ್ದಿದೆಯೆಂದು. ಆದರೆ ನಮ್ಮ ಸರ್ಕಾರ ವಸೂಲು ಮಾಡಿರುವಷ್ಟು ಬಾಕಿ ಹಣ ಬೇರೆ ಯಾವ ಸರ್ಕಾರ ಕೂಡ ವಸೂಲು ಮಾಡಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಸರ್ಕಾರಕ್ಕೆ ಬರಬೇಕಾಗಿದ್ದ ಎಲ್ಲಾ ತೆರಿಗೆಗಳನ್ನು ಕೂಡ ಸರ್ಕಾರ ಬಹಳ ಕಟ್ಟುನಿಟ್ಟಾಗಿ ವಸೂಲು ಮಾಡಿದೆ. ಈ ಎಲ್ಲಾ ತೆರಿಗೆಗಳನ್ನು ವಸೂಲು ಮಾಡುವುದರಲ್ಲಿ ನಮ್ಮ ಸರ್ಕಾರ ಮೊದಲಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಓವರ್ ಡ್ರಾಫ್ಟ್ ಬಗ್ಗೆ ಮಾನ್ಯ ಸದಸ್ಯರು ಕೆಲವರು ಏನೋ ರಾಜ್ಯದಲ್ಲಿ ಆಗಿದೆ ಎಂದು ದಿನಾಂಕ ೭ನೇ ಮಾರ್ಚ್ ೧೯೮೨ರಲ್ಲಿ ಒಂದು ಸ್ಟೇಟ್‌ಮೆಂಟನ್ನು ಕೊಟ್ಟು ಅದರಲ್ಲಿ ಈ ರೀತಿ ಹೇಳಿದ್ದಾರೆ The State has completely come out of the over draft. ಈ ಬಗ್ಗೆ ಬೇಕಾದಷ್ಟು ಚರ್ಚೆಗಳು ಸಹ ಆಗಿವೆ. ನಮ್ಮ ರಾಜ್ಯದ ಓವರ್ ಡ್ರಾಫ್ಟ್ ಕೇಂದ್ರ ಸರ್ಕಾರದ ದೃಷ್ಟಿಯಲ್ಲಿಯೋ ಆಗಲಿ ಅಥವಾ ರಿಸರ್ವ್ ಬ್ಯಾಂಕ್ ದೃಷ್ಟಿಯಲ್ಲಿಯೋ ಆಗಲಿ ಒಳ್ಳೆಯ ಹೆಸರು ಇದೆ. ಈ ಹೆಸರು ರಾಜ್ಯದ ಮುಖ್ಯ ಮಂತ್ರಿಗಳಿಗಾಗಲಿ ಅಥವಾ ಹಣಕಾಸು ಮಂತ್ರಿಗಳಿಗೆ ಆಗಲಿ ಅಥವಾ ಕ್ಯಾಬಿನೇಟ್ ಮಂತ್ರಿಗಳಿಗೆ ಆಗಲಿ ಎಲ್ಲಾ ರಾಜ್ಯದ ಸದಸ್ಯರಿಗೂ ಸಿಗುವಂತಹ ಹಾಗೂ ರಾಜ್ಯಕ್ಕೆ ಸಿಗುವಂತಹ ಒಂದು ಒಳ್ಳೆಯ ಹೆಸರು. ಈ ಒಂದು ಒಳ್ಳೆಯ ಹೆಸರು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದಲ್ಲಿಯೋ ಆಗಲಿ ಅಥವಾ ರಿಸರ್ವ್ ಬ್ಯಾಂಕ್‌ನಲ್ಲಿಯೋ ಆಗಲಿ ಇಟ್ಟುಕೊಂಡಿದ್ದರೆ ಇದರಿಂದ ನಮಗೆ ಹೆಚ್ಚು ಗೌರವ ಹಾಗೂ ಘನತೆ ಬರುತ್ತದೆ. ಇದರಿಂದ ರಾಜ್ಯ ಸರ್ಕಾರ ರಿಸರ್ವ್ ಬ್ಯಾಂಕ್‌ನಿಂದ ನಮ್ಮ ಪ್ರಾಜೆಕ್ಟ್‌ಗಳಿಗೆ ಹಣವನ್ನು ತರಬಹುದು. ಅದು ಬಿಟ್ಟು ನಾವು ಇದರ ಸಂಪೂರ್ಣ ಬುಡವನ್ನೇ ಅಲಗಾಡಿಸುವುದಕ್ಕೆ ಹೊರಟರೇ ಇದರಿಂದ ಇಡೀ ದೇಶಕ್ಕೆ ನಷ್ಟವಾಗುತ್ತದೆ. ಈಗ ಬೇರೆ ಬೇರೆ ರಾಜ್ಯ ಸರ್ಕಾರಗಳ ಓವರ್ ಡ್ರಾಫ್ಟ್‌ಗಿಂತ ನಮ್ಮ ರಾಜ್ಯ ಸರ್ಕಾರದ ಓವರ್ ಡ್ರಾಫ್ಟ್ ಬಹಳ ಉತ್ತಮವಾಗಿದೆ. Most of the time, we are without over draft. ನಿಜವಾಗಿಯೂ ನೀವು ಏತಕ್ಕೆ ಓವರ್ ಡ್ರಾಫ್ಟ್ ಬೇರೆ ರಾಜ್ಯಗಳಂತೆ ಇಡಬಾರದು ಎಂದು ಮಾನ್ಯ ಸದಸ್ಯರು ಕೇಳಿ ಹಣವನ್ನು ಖರ್ಚುಮಾಡಿಸಬಹುದಾಗಿತ್ತು. ಆದರೆ ಅದು ಏನಾಗಿದೆ ಎಂದರೆ ಇದರ ಒಂದು ಆರ್ಥಿಕ ತಳಹದಿಯನ್ನೇ ತಾವು ಅಡಿಮೇಲು ಮಾಡುವುದಕ್ಕೆ ಹೊರಟಿದ್ದೀರಿ. ಈಗ ಸ್ವಲ್ಪ ಕಡಿಮೆಯಾಗಿದೆ. ನಾವು ಪ್ರತಿಯೊಂದು ವರ್ಷದಲ್ಲಿಯೂ ಕೂಡ not a single day passed without one or two members of the opposition raising this issue. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಸಮಗ್ರವಾಗಿ ಬಹಳ ಭದ್ರವಾಗಿ ಇದೆ. ಇದರ ಒಂದು ಆಧಾರವನ್ನು ನಾವು ಇಟ್ಟುಕೊಂಡು ನಮ್ಮ ರಾಜ್ಯದ ಆರ್ಥಿಕ ಬೆಳವಣಿಗೆ ಹಾಗೂ ಸಾಮಾಜಿಕ ಬೆಳವಣಿಗೆ ಮುಂದುವರಿಯಲು ಸಾಧ್ಯವಿದೆ. ಆದ್ದರಿಂದ ಈ ವಿಷಯದ ಬಗ್ಗೆ ಎಲ್ಲಾ ಮಾನ್ಯ ಸದಸ್ಯರ ಪ್ರೋತ್ಸಾಹ ಮತ್ತು ಬೆಂಬಲ ಅತ್ಯವಶ್ಯಕವಾಗಿ ಬೇಕಾಗಿದೆ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರು ಕೂಡ ಈ ಒಂದು ಆಯವ್ಯಯ ಪತ್ರವನ್ನು ಕುರಿತು ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ ಅದನ್ನು ಕೂಡ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಆದ್ದರಿಂದ ಎಲ್ಲಾ

ಮಾನ್ಯ ಸದಸ್ಯರು ಕೂಡ ಈ ಆಯವ್ಯಯ ಪತ್ರಕ್ಕೆ ಬೆಂಬಲವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ ನೀವು ಓವರ್ ಡ್ರಾಫ್ಟ್ ಜಾಸ್ತಿ ಕೊಡಲಿಲ್ಲ ವೆಂದು ನನ್ನದೇನು ತಕರಾರು ಇಲ್ಲ. ಆದರೆ ಯಾವುದೇ ಒಂದು ರಾಜ್ಯ ಸರ್ಕಾರದ ಓವರ್ ಡ್ರಾಫ್ಟ್ ಇದ್ದರೆ ಅದರ ಮೇಲೆ ಕೇಂದ್ರ ಸರ್ಕಾರವೇನು ಆರ್ಥಿಕವಾಗಿ ಹಾನಿಯನ್ನುಂಟು ಮಾಡುವುದಿಲ್ಲ. ಆದರೆ ಕೇಂದ್ರ ಸರ್ಕಾರದ ಶಿಸ್ತು ಮತ್ತು ಕಾನೂನು ಪಾಲನೆ ಮಾಡುವಂತಹ ರಾಜ್ಯ ಸರ್ಕಾರಗಳು ಇರದಿದ್ದರೆ ಅಂತಹ ರಾಜ್ಯ ಸರ್ಕಾರಗಳಿಗೆ ಯಾವುದೇ ವಿಧವಾದ ಅನ್ಯಾಯವಾಗುವುದಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ ಸಂದರ್ಭ ಸಿಕ್ಕಿದಾಗ ಸಮಯ ಸಾಧಿಸಿ ಇದನ್ನು ತಾವು ಬಹಳ ತೀವ್ರವಾಗಿ ಕಟುವಾಗಿ ಕೇಂದ್ರ ಸರ್ಕಾರದ ಮುಂದೆ ವಾದ ಮಾಡಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಇದು ಬಹಳ ಒಳ್ಳೆಯ ಸಲಹೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ನಾನು ಸಣ್ಣ ಮತ್ತು ಅತಿ ಸಣ್ಣ ರೈತರು ತೆಗೆದುಕೊಂಡಿರುವಂತಹ ಲೋನ್‌ಗಳಲ್ಲಿ ಪೀನಲ್ ಇಂಟರೆಸ್ಟನ್ನು ವಜಾ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ಏನು ಉತ್ತರವನ್ನು ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ವಿಷಯವನ್ನು ಸ್ವಲ್ಪ ವಿಚಾರ ಮಾಡಬೇಕಾಗಿದೆ. We are considering that issue. ಈಗ ನಾವು ಕೋ–ಆಪರೇಟಿವ್ ಸೊಸೈಟಿಗಳು ನಮ್ಮ ಬ್ಯಾಂಕ್‌ಗಳು ಅಲ್ಲಿ ತೆಗೆದುಕೊಂಡಿರುವಂತಹ ಸಾಲಕ್ಕೆ ಬೇಕಾದರೆ ಪೀನಲ್ ಇಂಟರೆಸ್ಟನ್ನು ವಜಾ ಮಾಡಬಹುದು. ಆದರೆ ಕಮರ್ಷಿಯಲ್ ಬ್ಯಾಂಕ್‌ಗಳಲ್ಲಿ ತೆಗೆದುಕೊಂಡಿರುವಂತಹ ಲೋನ್‌ಗಳಿಗೆ ಪೀನಲ್ ಇಂಟರೆಸ್ಟನ್ನು ವಜಾ ಮಾಡಬೇಕಾದರೆ ರಿಸರ್ವ್ ಬ್ಯಾಂಕ್ ಒಪ್ಪಬೇಕಾಗುತ್ತದೆ. ಅದು ನಮ್ಮ ಕೈಯಲ್ಲಿ ಇಲ್ಲ. ಇದರಿಂದ ನಾವು ಏನು ಮಾಡುವುದಕ್ಕೂ ಸಾಧ್ಯವಿಲ್ಲ,

ಶ್ರೀ ಹೆಚ್. ಡಿ. ದೇವೇಗೌಡ.—ರೈತರು ನೇರವಾಗಿ ಕಮರ್ಷಿಯಲ್ ಬ್ಯಾಂಕ್‌ಗಳಿಗೆ ಹೋಗುತ್ತಿಲ್ಲ. ಈಗ ಒಂದು ತಾಲ್ಲೂಕಿನಲ್ಲಿ ೫೦ ಕೋ–ಆಪರೇಟೀವ್ ಸೊಸೈಟಿಗಳು ಇದ್ದರೆ ಅವುಗಳಲ್ಲಿ ೨೫ ಕೋ–ಆಪರೇಟೀವ್ ಸೊಸೈಟಿಗಳನ್ನು ನೀವು ಕಮರ್ಷಿಯಲ್ ಬ್ಯಾಂಕ್‌ಗಳಿಗೆ ಸೇರಿಸಿದ್ದೀರಿ. ಇದು ನಿಮ್ಮ ತಪ್ಪು ರೈತರದಲ್ಲ. ನಿಮ್ಮ ಸರ್ಕಾರದ ಪಾಲಿಸಿ ಏನಿದೆ ಆ ರೀತಿಯಲ್ಲಿ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮೊನ್ನೆ ಕೂಡ ಮಾನ್ಯ ಸದಸ್ಯರಾದಂತಹ ಶ್ರೀ ದೇವೇಗೌಡರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಈ ವಿಷಯವನ್ನು ತಕ್ಷಣ ಪರಿಶೀಲನೆ ಮಾಡಬೇಕಾಗುತ್ತದೆ of course it is not the fault of members or the society. Incidentally they have been attached by the Commercial Bank. ಆದ್ದರಿಂದ ನಾನು ಹೇಳುವುದೇನೆಂದರೆ ಎಲ್ಲರಿಗೂ ಒಂದೇ ವಿಧವಾದ ಸವಲತ್ತುಗಳು ಸಿಗಬೇಕಾಗಿದೆ. ಈಗ ಇಲ್ಲಿ ಏನಾಗಿದೆ ಎಂದರೆ ಕಮರ್ಷಿಯಲ್ ಬ್ಯಾಂಕುಗಳು ರಿಸರ್ವ್ ಬ್ಯಾಂಕಿಗೆ ಅಟ್ಯಾಚ್ ಆಗಿವೆ. ಇದರಿಂದ ನಾವು ಈಗ ಏನು ಮಾಡುವುದಕ್ಕೂ ಬರುವುದಿಲ್ಲ. It is the question of re-imbursement by the government. The government is seriously considering it. Right now I may not be in a position to reply to that.

ಶ್ರೀ ಹೆಚ್. ಡಿ. ದೇವೇಗೌಡ.—ನಾಳೆ ಈ ಸಭೆ ಮುಕ್ತಾಯವಾಗುತ್ತದೆ. ಆದರೆ ಈಗ ರೈತರಿಂದ ಪೀನಲ್ ಇಂಟರೆಸ್ಟನ್ನು ವಸೂಲು ಮಾಡುತ್ತಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈಗ ಎಲ್ಲಾ ಕಡೆಗಳಲ್ಲಿಯೂ ಕೂಡ ಪೀನಲ್ ಇಂಟರೆಸ್ಟನ್ನು ವಸೂಲು ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಇದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ನಾಳೆ ಒಂದು ನಿಗದಿಯಾದ ತೀರ್ಮಾನವನ್ನು ಕೊಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಮತ್ತೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್‌ನಲ್ಲಿ ತೆಗೆದು ಕೊಂಡಿರುವ ತಕಾವಿ ಸಾಲಗಳು ಅಂದರೆ ಸುಮಾರು ೨೦೦, ೩೦೦ ರೂಪಾಯಿಗಳು ಬಾಕಿ ಇರುವಂತಹ ರೈತರಿಂದ ಕೂಡ ಈ ಪೀನಲ್ ಇಂಟರೆಸ್ಟನ್ನು ವಸೂಲು ಮಾಡುತ್ತಿದ್ದಾರೆ ಮತ್ತೆ ೧೨ ಕೋಟಿ

ರೂಪಾಯಿಗಳ ಬಗ್ಗೆ ಸುಮಾರು ಒಂದು ೫ ಲಕ್ಷ ಜನರು ಬರಬಹುದು. ಇವರಿಗೆ ಕಾಂಟ್ರಿವರ್ಸಿಯನ್ನು ಕೊಡತಕ್ಕಂತಹ ಬಗ್ಗೆ ಕೂಡ ತಾವು ಪರಿಶೀಲನೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾಳೆ ನಾನು ಉತ್ತರ ಹೇಳುತ್ತೇನೆ.

ಉಪಾಧ್ಯಕ್ಷರು.—ಸಭೆಯು ಈಗ ಮುಕ್ತಾಯವಾಗಿ ಪುನಃ ಎರಡು ಘಂಟೆಗೆ ಸೇರಲಿದೆ.

[The House re-assembeled at 2-08 P.M,]

[MR. SPEAKER (SRI K. H. RANGANATH) in the Chair]

STARRED QUESTIONS

[To which oral Answeqs were gsven

Pension and Gratuity facilities to Civic employees

37 SRI I. P. D. SALAPPA (Binnypet)—Will the Minister for Housing and Urban Development be pleased to state.—

(a) the reasons for not giving pension and gratuity facilities so far to the Civ'c employees who have been retired from the Bellary City Municipality ;

(b) whether salaries due every month to the employees of the Town Municipalities of the State and Civic employees are being disbursed ;

(c) whether the Government have proposed to disburse salary directly to them ;

(d) whether the salaries are being disbursed to the employees of Corporations. City Municipalities Town Municipal Councils and town Panchayats in the State and Civic employees through banks ; if so the names of such institutions ,

(e) the names of Municipalities wherein salary is not disbursed through Banks,

(f) whether it is a fact that there are complaints about reduction in salary while making disbursement directly ;

(g) if so, whether the Government have proposed to take any action against those persons who are responsible for making reductions ?

SRI DHARAM SINGH (Minister for Housing & Urban Development.)—

(a) The persion and gratuity are being paid to all the civic employees of Bellary City Municipality to those who have retired subsequent to 22nd May 1972.